

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 5 ಮಂಗಳವಾರ 2023

ಸಂಪುಟ: 44 | ಸಂಚಿಕೆ: 141 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಬರ ಘೋಷಣೆಗೆ ಮೀನಾಮೇಷ

■ ಸಂಪುಟ ಉಪ ಸಮಿತಿ ಸಭೆಯಲ್ಲಿ ಸುದೀರ್ಘ ಚರ್ಚೆ ■ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅಧಿಕೃತ ಘೋಷಣೆ ■ ಬರ ಪರಿಸ್ಥಿತಿ ನಿರ್ವಹಣೆಗೆ ಸರ್ಕಾರ ಸಿದ್ಧತೆ ■ ಸಚಿವದ್ವಯರ ದ್ವಂದ್ವ ಹೇಳಿಕೆ; ಗೊಂದಲ

ಬೆಂಗಳೂರು, ಸೆ.4(ಕೆಎಂಶಿ)–ಪ್ರಸಕ್ತ ಮುಂಗಾರು ಕೈಕೊಟ್ಟ ಹಿನ್ನೆಲೆಯಲ್ಲಿ ರಾಜ್ಯದ ಅರ್ಧಭಾಗ ಬರ ಪರಿಸ್ಥಿತಿ ಎದುರಾಗಿದ್ದರೂ, ಸರ್ಕಾರ ಘೋಷಣೆ ಮಾಡಲು ಹಿಂದೇಟು ಹಾಕಿದೆ.



ಕಂದಾಯ ಸಚಿವ ಕೃಷ್ಣಭೈರೇಗೌಡರ ಅಧ್ಯಕ್ಷತೆಯಲ್ಲಿ ಇಂದು ನಡೆದ ಸಚಿವ ಸಂಪುಟ ಉಪ ಸಮಿತಿ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ 134 ತಾಲೂಕುಗಳು ಬರದ ವ್ಯಾಪ್ತಿಗೆ ಒಳಪಡುತ್ತವೆ ಎಂದು ಗುರುತಿಸಲಾಗಿದೆ. ಬರಪೀಡಿತ ತಾಲೂಕುಗಳಿಗೆ ಒದಗಿಸ ಬೇಕಾದ ತುರ್ತು ಪರಿಹಾರ ಕ್ರಮದ ಬಗ್ಗೆ ಸಭೆ ಚರ್ಚೆ ನಡೆಸಿ ಕೆಲವು ನಿರ್ಣಯಗಳನ್ನು ಕೈಗೊಂಡಿದೆ. ಆದರೆ, ಅಂಕಿ–ಅಂಶಗಳನ್ನು ನೀಡಲು ಸರ್ಕಾರ ಹಿಂದೇಟು ಹಾಕಿದೆ. ಸಭೆಯ ನಂತರ ಪ್ರತ್ಯೇಕವಾಗಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ ಒಂದು ಹೇಳಿಕೆ ನೀಡಿದ್ದರೆ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ವ್ಯತಿರಿಕ್ತ ಹೇಳಿಕೆ ನೀಡಿದ್ದಾರೆ.

ಅಧಿಕಾರಿಗಳು 134 ತಾಲೂಕುಗಳಲ್ಲಿ ಜಂಟಿ ಸಮೀಕ್ಷೆ ನಡೆಸಿದ್ದು, ಅದರ ಅನುಸಾರ ಬರ ಘೋಷಣೆ ಮಾಡುವ ಬಗ್ಗೆ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವುದಾಗಿ ಕಂದಾಯ ಸಚಿವರು ತಿಳಿಸಿದ್ದಾರೆ. ಇದೇ ಸಮಯದಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರು, ರಾಜ್ಯದ 113 ತಾಲೂಕುಗಳಲ್ಲಿ ಬರವಿದ್ದು, ಈ ತಾಲೂಕು ವ್ಯಾಪ್ತಿಯ ಬಿಪಿಎಲ್ ಕುಟುಂಬಗಳಿಗೆ ತಲಾ ಯುನಿಟ್‌ಗೆ 10 ಕೆ.ಜಿ. ಅಕ್ಕಿ ನೀಡಲಾಗುವುದು. ಇದರ ವ್ಯಾಪ್ತಿಯಲ್ಲಿ ಬರುವವರಿಗೆ ಮುಂದಿನ ತಿಂಗಳಿನಿಂದ ಯುನಿಟ್‌ಗೆ 5 ಕೆ.ಜಿ.ಅಕ್ಕಿ ಜೊತೆಗೆ 170 ರೂ. ನೀಡುವುದನ್ನು ನಿಲ್ಲಿಸಿ ಪೂರ್ಣ ಪ್ರಮಾಣದಲ್ಲಿ ಅಕ್ಕಿ ನೀಡುವುದಾಗಿ ಸ್ಪಷ್ಟಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಮುಂದುವರೆದು ಮಾತನಾಡಿದ ಕೃಷ್ಣಭೈರೇಗೌಡ ಅವರು, ರಾಜ್ಯದಲ್ಲಿ ಆರಂಭದಲ್ಲಿಯೇ ಮುಂಗಾರು ದುರ್ಬಲಗೊಂಡು, ಜೂನ್ ತಿಂಗಳಿನಲ್ಲಿ ಶೇ.56ರಷ್ಟು ಮಳೆ ಕೊರತೆಯಾಗಿತ್ತು. ನಂತರ ಜುಲೈ ತಿಂಗಳಿನಲ್ಲಿ ಉತ್ತಮವಾಗಿ ಮಳೆಯಾದರೂ, ಆಗಸ್ಟ್ ತಿಂಗಳಿನಲ್ಲಿ ಶೇ.73 ರಷ್ಟು ಮಳೆ ಕೊರತೆಯಾಗಿದೆ.

ಒಟ್ಟಾರೆ ಪ್ರಸಕ್ತ ಮುಂಗಾರು ಜೂನ್ 1ರಿಂದ ಸೆಪ್ಟೆಂಬರ್ 4 ರವರೆಗೆ ವಾಡಿಕೆಯಾಗಿ 711ಮಿ.ಮೀ ಮಳೆಯಾಗಬೇಕಿದ್ದು, ವಾಸ್ತವಿಕ 526 ಮಿ.ಮೀ ಮಳೆಯಾಗಿದ್ದು, ಶೇಕಡಾ 26ರಷ್ಟು ಮಳೆ ಕೊರತೆಯಾಗಿದ್ದು, ಬರ ಪರಿಸ್ಥಿತಿ ತಲೆದೋರಿದೆ. ಬರ ಪರಿಸ್ಥಿತಿ ಬಗ್ಗೆ ನಿಗಾ ಮತ್ತು ನಿರ್ವಹಣೆಗಾಗಿ ● 9ನೇ ಪುಟಕ್ಕೆ

ಇಂದು ಅರಮನೆ ಆವರಣಕ್ಕೆ ಗಜಪಡೆ

ಅಶೋಕಪುರಂ ಅರಣ್ಯ ಭವನದಿಂದ ಮೆರವಣಿಗೆಯಲ್ಲಿ ಅರಮನೆ ತಲುಪಲಿವೆ ಅಭಿಮನ್ಯು ನೇತೃತ್ವದ ಒಂಬತ್ತು ಸದಸ್ಯರು



ಮೈಸೂರು,ಸೆ.4(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ವಿವಿಧ ಕ್ಯಾಂಪ್‌ಗಳಿಂದ ಬಂದು, ಮೈಸೂರಿನ ಅಶೋಕಪುರಂ ಅರಣ್ಯ ಭವನದಲ್ಲಿ ಬೀಡುಬಿಟ್ಟಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯ ಮೊದಲ ತಂಡದ 9 ಆನೆಗಳು ನಾಳೆ (ಸೆ.5) ಮಧ್ಯಾಹ್ನ ಅಭಿಜಿನ್ ಲಗ್ನದಲ್ಲಿ ಜಯಮಾರ್ತಾಂಡ ದ್ವಾರದ ಮೂಲಕ ವಿಧ್ಯುಕ್ತವಾಗಿ ಅರಮನೆ ಆವರಣ ಪ್ರವೇಶಿಸಲಿವೆ.

ಸಾಂಪ್ರದಾಯಿಕ ಗಜಪಯಣದ ಮೂಲಕ ಸೆ.1ರಂದು ವಿವಿಧ ಕ್ಯಾಂಪ್‌ಗಳ 7 ಗಂಡಾನೆ, 2 ಹೆಣ್ಣಾನೆ ಒಳಗೊಂಡಂತೆ 9 ಆನೆಗಳು ಮೈಸೂರಿಗೆ ಆಗಮಿಸಿದ್ದು, ಕಳೆದ ನಾಲ್ಕು ದಿನಗಳಿಂದಲೂ ಅರಣ್ಯ ಭವನದ ಆವರಣದಲ್ಲೇ ವಿಶ್ರಾಂತಿ ಪಡೆಯುತ್ತಿದ್ದ ಗಜಪಡೆಗೆ ನಾಳೆ ಬೆಳಗ್ಗೆ 10 ಗಂಟೆಗೆ ಅರಣ್ಯ ● 9ನೇ ಪುಟಕ್ಕೆ

'ಶಿಕ್ಷಕರ ದಿನಾಚರಣೆ ವಿಶೇಷ' ಸಂಸದ ಪ್ರತಾಪ್‌ಸಿಂಹ ಅವರ ವಿಶೇಷ ಲೇಖನ ಪುಟ–3, ಗುಬ್ಬಿಗೂಡು ರಮೇಶರ ಲೇಖನ ಪುಟ–4





ಪುಂಡಾನೆ ತುಳಿದು ಅರಣ್ಯ ಸಿಬ್ಬಂದಿ ಸಾವು; ಹುಲಿಗೆ ಬಾಲಕ ಬಲಿ

ಕೊಡಗಿನ ಸುಂಟಿಕೊಪ್ಪ; ಹೆಚ್.ಡಿ.ಕೋಟೆಯಲ್ಲಿ ಪ್ರತ್ಯೇಕ ದುರಂತ



ಗಿರೀಶ್

ಮಡಿಕೇರಿ/ಹೆಚ್.ಡಿ.ಕೋಟೆ, ಸೆ. 4– ಪುಂಡಾನೆಯನ್ನು ಕಾಡಿಗಟ್ಟುವ ಕಾರ್ಯಾಚರಣೆ ವೇಳೆ ಕಾಡಾನೆ ತುಳಿದು ಅರಣ್ಯ ಸಿಬ್ಬಂದಿ ಕೊಡಗಿನ ಸುಂಟಿಕೊಪ್ಪ ಬಳಿ ಸಾವಿಗೀಡಾದರೆ, ಹೆಚ್.ಡಿ.ಕೋಟೆ ಬಳಿ ಬಾಲಕನನ್ನು ಹುಲಿ ಕೊಂದು ಹಾಕಿದೆ.

ಮಡಿಕೇರಿ ವರದಿ: ಪುಂಡಾನೆಯನ್ನು ಕಾಡಿಗಟ್ಟುವ ಕಾರ್ಯಾಚರಣೆ ಸುಂಟಿಕೊಪ್ಪ ಬಳಿಯ ಕೆದಕಲ್ ಗ್ರಾಮದ ಸಮೀಪ ಸೋಮವಾರ ಮಧ್ಯಾಹ್ನ ನಡೆಯುತ್ತಿದ್ದ ವೇಳೆ ಪುಂಡಾನೆ ಕಾರ್ಯಾಚರಣೆ ತಂಡದ ವಿರುದ್ಧ ತಿರುಗಿ ಬಿದ್ದು, ಕುಶಾಲನಗರ ಆರ್‌ಆರ್‌ಟಿ ಸಿಬ್ಬಂದಿ ಗಿರೀಶ್ (35) ಎಂಬುವರನ್ನು ತುಳಿದು ಹಾಕಿದೆ.

ಈ ಆನೆ ಸೋಮವಾರ ಬೆಳಗ್ಗೆ 9 ಗಂಟೆ ಸುಮಾರಿನಲ್ಲಿ ಸುಂಟಿಕೊಪ್ಪ ಸಮೀಪದ ಕೆದಕಲ್ ಗ್ರಾಪಂ ವ್ಯಾಪ್ತಿಯ ಬಿ ಬ್ಲಾಕ್ ಬಳಿ ಸುಂಟಿಕೊಪ್ಪ ನಿವಾಸಿ ಮುರುಗೇಶ್ ಎಂಬುವರು ಬೈಕ್‌ನಲ್ಲಿ ತೆರಳುತ್ತಿದ್ದಾಗ ಅವರ ಮೇಲೆ ದಾಳಿ ನಡೆಸಿದ್ದು, ಗಾಯಗೊಂಡಿದ್ದ ಅವರನ್ನು ಅರಣ್ಯ ಸಿಬ್ಬಂದಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ರವಾನಿಸಿದ್ದರು. ನಂತರ ಇದೇ ಒಂಟಿ ಸಲಗ ಅನತಿ ದೂರದ ಹಬೀಬ್ ತೋಟದತ್ತ ತೆರಳುತ್ತಿದ್ದ ವ್ಯಕ್ತಿಯೊಬ್ಬನ ಮೇಲೂ ದಾಳಿಗೆ ಮುಂದಾಗಿದ್ದು, ಆತ ತಪ್ಪಿಸಿಕೊಂಡಿದ್ದಾನೆ.



ಹುಲಿ ಹಾವಳಿ ತಡೆಗೆ ಅರಣ್ಯ ಇಲಾಖೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆರೋಪಿಸಿ ಶಾಸಕ ಅನಿಲ್ ಚಿಕ್ಕಮಾದು ನೇತೃತ್ವದಲ್ಲಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಈ ವಿಷಯ ತಿಳಿಯುತ್ತಿದ್ದಂತೆಯೇ ಅರಣ್ಯ ಇಲಾಖೆಯ ಆರ್‌ಆರ್‌ಟಿ ಮತ್ತು ಇಟಿಎಫ್ ತಂಡದ 15 ಮಂದಿ ಸಿಬ್ಬಂದಿ ಒಂಟಿ ಸಲಗನನ್ನು ಮೀನುಕೊಲ್ಲಿ ಅರಣ್ಯಕ್ಕೆ ಅಟ್ಟಲು ಕಾರ್ಯಾಚರಣೆಗೆ ಇಳಿದಿದ್ದರು. ಮಧ್ಯಾಹ್ನದ ವೇಳೆಗೆ ತೋಟವೊಂದರಲ್ಲಿದ್ದ ಆನೆಯನ್ನು ಗುರುತಿಸಿದ ಸಿಬ್ಬಂದಿ ಅದನ್ನು ಓಡಿಸಲು ಮುಂದಾದಾಗ ಅರಣ್ಯ ಸಿಬ್ಬಂದಿಯನ್ನೇ ಕಾಡಾನೆ ಅಟ್ಟಾಡಿಸಿದೆ. ಈ ವೇಳೆ ಗಿರೀಶ್ ಅವರು ಕಾಡಾನೆಗೆ ಸಿಕ್ಕಿಬಿದ್ದಿದ್ದು, ಅವರನ್ನು ತುಳಿದು ಹಾಕಿದೆ. ತಕ್ಷಣವೇ ಇತರೆ ಸಿಬ್ಬಂದಿ ಗಿರೀಶ್ ಅವರನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ಕರೆದೊಯ್ದರಾದರೂ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

ಹೆಚ್.ಡಿ.ಕೋಟೆ ವರದಿ: ಜಮೀನಿನಲ್ಲಿ ಮೆಣಸಿನಕಾಯಿ ಮೂಟೆ ಕಾಯುತ್ತಾ ಕುಳಿತಿದ್ದ 9 ವರ್ಷದ ಬಾಲಕ ಚರಣ್ ನಾಯಕ್ ಎಂಬಾತನನ್ನು ಹುಲಿ ದಾಳಿ ನಡೆಸಿ, ಕೊಂದು ಹಾಕಿದೆ. ಘಟನೆ ಇಲ್ಲಿಗೆ ಸಮೀಪದ ಕಲ್ಲಹಟ್ಟಿ ಗ್ರಾಮದಲ್ಲಿ ಸೋಮವಾರ ಈ ದುರಂತ ನಡೆದಿದೆ.



ಚರಣ್ ನಾಯಕ್

ಶಿಕ್ಷಕರ ಕ್ರೀಡಾಕೂಟದ ಹಿನ್ನೆಲೆಯಲ್ಲಿ ಶಾಲೆಗೆ ರಜೆ ಇದ್ದ ಕಾರಣ ಚರಣ್ ನಾಯಕ್ ತಾಯಿ ಮಾದುಬಾಯಿಯೊಂದಿಗೆ ಜಮೀನಿಗೆ ತೆರಳಿದ್ದ. ● 9ನೇ ಪುಟಕ್ಕೆ



ಸಿದ್ದರಾಮಯ್ಯ ಎರಡನೇ ಬಾರಿ ಲಾಟರಿ ಹೊಡೆದಂತೆ ಮುಖ್ಯಮಂತ್ರಿಯಾದರು...

● ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಲೇವಡಿ ● ಮೊದಲ ಬಾರಿ ಬಿಜೆಪಿ ಹೋಳಾಗಿದ್ದರಿಂದ ಗೆದ್ದು ಸಿಎಂ ಆದರು; ಈಗ 'ಗ್ಯಾರಂಟಿ' ಮುಂದಿಟ್ಟುಕೊಂಡು ಸಿಎಂ ಆಗಿದ್ದಾರೆ ● ಲೋಕಸಭಾ ಚುನಾವಣೆ ನಂತರ ಕಾಂಗ್ರೆಸ್ ಬಣ್ಣ ಬಯಲಾಗುತ್ತೆ....!?



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಮಾತನಾಡಿದರು.

ಮೈಸೂರು, ಸೆ.4(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಎರಡು ಬಾರಿಯೂ ಸ್ವಂತ ಶಕ್ತಿ ಮೇಲೆ ಅಧಿಕಾರಕ್ಕೆ ಬಂದಿಲ್ಲ. ಅವರೊಬ್ಬ ಲಾಟರಿ ಮುಖ್ಯಮಂತ್ರಿ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಕಿಡಿಕಾರಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2013ರಲ್ಲಿ ಕೆಜೆಪಿ–ಬಿಜೆಪಿ–ಬಿಎಸ್ಆರ್ ಎಂದು ಹೋಳಾಗಿದ್ದರಿಂದ ಅದರ ಲಾಭ ಪಡೆದುಕೊಂಡು ಮೊದಲ ಬಾರಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದರು. ಈ ಬಾರಿ ಗ್ಯಾರಂಟಿ ಯೋಜನೆಗಳ ಮೂಲಕ ಮುಖ್ಯಮಂತ್ರಿಯಾಗಿದ್ದಾರೆ. ಈ ಎರಡೂ ಅವಧಿಯನ್ನು ಅವಲೋಕಿಸಿದರೆ, ಸ್ವಂತ ಶಕ್ತಿಯ ಮೇಲೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿರದೇ ಲಾಟರಿ ಹೊಡೆದಂತೆ ಸಿಎಂ ಆಗಿ ಅಧಿಕಾರದ ಗದ್ದುಗೆ ಏರಿದ್ದಾರೆ ಎಂದು ಟೀಕಿಸಿದರು.

ಲೋಕಸಭೆ ಚುನಾವಣೆ ಸಮೀಪಿಸುತ್ತಿದೆ. ಈ ವೇಳೆ ಕಾಂಗ್ರೆಸ್ ಕೊಟ್ಟಿರುವ ಗ್ಯಾರಂಟಿ ಯೋಜನೆಗಳ ಬಂಡವಾಳ ಬಯಲಾಗಲಿದೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರ ಸ್ಥಿತಿ ಏನು ಎಂದು ಗೊತ್ತಾಗುತ್ತದೆ. ಲೋಕಸಭಾ ಚುನಾವಣೆ ಬಳಿಕ ಗ್ಯಾರಂಟಿ ಯೋಜನೆಗಳು ಏನಾಗುತ್ತವೆ ಎಂದು ಕಾದು ನೋಡಿ ಎಂದು ಲೇವಡಿ ಮಾಡಿದರು.

ಬಿಜೆಪಿಯಲ್ಲಿ ಎಲ್ಲರೂ ನಾಯಕರೇ: ರಾಜ್ಯದಲ್ಲಿ ಬಿಜೆಪಿಯಿಂದ ಗೆದ್ದಿರುವ ಎಲ್ಲಾ ಶಾಸಕರು ಪ್ರತಿಪಕ್ಷದ ನಾಯಕರಾಗಿದ್ದಾರೆ. ಸೂಕ್ತ ಕಾಲದಲ್ಲಿ ಪ್ರತಿಪಕ್ಷದ ನಾಯಕನನ್ನು ಆಯ್ಕೆ ಮಾಡಲಾಗುತ್ತದೆ. ಅಲ್ಲಿವರೆಗೂ ನಮ್ಮಲ್ಲಿರುವ 66 ಶಾಸಕರು ಪ್ರತಿಪಕ್ಷದ ನಾಯಕರಂತೆ ಕೆಲಸ ಮಾಡಲಿದ್ದಾರೆ. ಈ ಹಿಂದೆ ಕಾಂಗ್ರೆಸ್ ಪಕ್ಷದಲ್ಲಿ ಎರಡು ವರ್ಷ ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಲು ಸಾಧ್ಯವಾಗಲಿಲ್ಲ. ಆ ಅವಧಿಯಲ್ಲಿ ನಾಯಕರಿಲ್ಲದೆ ಕಾಂಗ್ರೆಸ್ ಸತ್ತು ಹೋಗಿತ್ತಾ ಎಂದು ಪ್ರಶ್ನಿಸಿದರು.

ಅಭ್ಯರ್ಥಿಗಳೇ ಇಲ್ಲ: ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್‌ನಲ್ಲಿ ಸಮರ್ಥ ಅಭ್ಯರ್ಥಿಗಳಿಲ್ಲ. ಬಿಜೆಪಿ ನಾಯಕರನ್ನು ಕೈ ಕಾಲು ಹಿಡಿದುಕೊಂಡು ಕಾಂಗ್ರೆಸ್‌ಗೆ ಬನ್ನಿ ಬನ್ನಿ ಎಂದು ಗೋಗರೆಯುತ್ತಿದ್ದಾರೆ. ಲೋಕಸಭಾ ಚುನಾವಣೆಯು ರಾಷ್ಟ್ರೀಯ ವಿಚಾರಧಾರೆ, ನಾಯಕತ್ವ ಹಾಗೂ ಇನ್ನಿತರ ವಿಚಾರಗಳನ್ನು ಮುಂದಿಟ್ಟುಕೊಂಡು ನಡೆಯುತ್ತದೆ. ಜನರು ಬಿಜೆಪಿಗೆ ಆಶೀರ್ವಾದ ಮಾಡುತ್ತಾರೆ ಎಂದು ಭವಿಷ್ಯ ನುಡಿದರು.

ಮುಸಲ್ಮಾನರ ದತ್ತುಪುತ್ರ: ಮುಖ್ಯಮಂತ್ರಿ ಸಿದ್ದರಾಮಯ್ಯ ಮುಸಲ್ಮಾನರ ದತ್ತುಪುತ್ರನಾಗಿದ್ದಾರೆ. ಮುಸ್ಲಿಮರು ಹೆಚ್ಚಿರುವ ಪ್ರದೇಶದಲ್ಲಿ ಮೋದಿ, ಪ್ರತಾಪ್ ಸಿಂಹ ಅವರನ್ನು ಸೋಲಿಸಬೇಕೆಂದು ಕರೆ ನೀಡುತ್ತಿದ್ದಾರೆ. ಇದರಿಂದ ಮುಸ್ಲಿಮರ ಮತ ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದೆಂಬ ಲೆಕ್ಕಾಚಾರ ಅವರದ್ದಾಗಿದೆ ಎಂದರು.

ಧರ್ಮ ಟೀಕಿಸಿದವರು ಭಸ್ಮ: ಹಿಂದೂ ಧರ್ಮವನ್ನು ಟೀಕಿಸಿದವರು ಭಸ್ಮವಾಗುತ್ತಾರೆ. ಮುಂದೆ ಯಾವ ಸ್ಥಿತಿಗೆ ಬರುತ್ತಾರೆ ಎಂಬುದನ್ನು ಕಾದು ನೋಡಬೇಕು. ತಮಿಳುನಾಡು ಸಚಿವ ಉದಯನಿಧಿ ಸ್ಟಾಲಿನ್ ಹಿಂದೂ ಧರ್ಮವನ್ನು ಡೆಂಘೀ, ಮಲೇರಿಯಾದಂತೆ ನಿರ್ಮೂಲನೆ ಮಾಡಬೇಕೆಂದು ಹೇಳಿರುವುದು ಖಂಡನೀಯ. ಹಿಂದೂ ಧರ್ಮ ಶಾಂತಿ, ಸೌಮ್ಯವಾಗಿದೆ. ರಾಜಕೀಯ ಪ್ರೇರಿತವಾದ ಕಾರಣಕ್ಕಾಗಿ ಟೀಕೆ ಮಾಡುತ್ತಾರೆ. ಆದರೆ, ಕ್ರೈಸ್ತ, ಇಸ್ಲಾಂ ಧರ್ಮವನ್ನು ಟೀಕಿಸುವ ಧೈರ್ಯ ಪ್ರದರ್ಶಿಸುವುದಿಲ್ಲ. ತಮಿಳುನಾಡಿನಲ್ಲಿ ಅತೀ ಹೆಚ್ಚು ದೇವಾಲಯಗಳು ಮತ್ತು ಭಕ್ತರು ಇದ್ದಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸೀಟುಗಳನ್ನು ಬಿಜೆಪಿ ಗೆಲ್ಲುತ್ತದೆ ಎನ್ನುವ ಕಾರಣದಿಂದ ಅಲ್ಪಸಂಖ್ಯಾತ ಮತ್ತು ಕ್ರೈಸ್ತರು ಒಂದಾಗಲೆಂದು ಇಂತಹ ರಾಜಕೀಯ ಪ್ರೇರಿತ ಹೇಳಿಕೆ ನೀಡಿ ಮತಗಳಿಕೆಯ ಲಾಭ ಪಡೆದುಕೊಳ್ಳುವ ಹುನ್ನಾರ ನಡೆಸಲಾಗುತ್ತಿದೆ ಎಂದು ಕಿಡಿಕಾರಿದರು.

ಮಾಜಿ ಸಚಿವ ರೇಣುಕಾಚಾರ್ಯ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ನಮ್ಮ ಗುರಿ ಕಾಂಗ್ರೆಸ್ ಪಕ್ಷ. ರೇಣುಕಾಚಾರ್ಯಗೆ ಪಕ್ಷದಿಂದ ನೋಟಿಸ್ ನೀಡಲಾಗಿದೆ. ಅವರ ಹೇಳಿಕೆಗೆ ಮಹತ್ವ ಕೊಡುವುದು ಬೇಡ. ನಾನೂ ಉತ್ತರ ಕೊಡುವುದಿಲ್ಲ. ನನ್ನ ಮಗ ಕೂಡ ಲೋಕಸಭಾ ಚುನಾವಣೆ ಟಿಕೆಟ್ ಆಕಾಂಕ್ಷಿಯಾಗಿದ್ದಾನೆ. ಹಾವೇರಿ ಕ್ಷೇತ್ರದಿಂದ ಟಿಕೆಟ್ ಕೇಳಿದ್ದೇವೆ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆ ಎಂದು ಕಾದು ನೋಡುತ್ತೇವೆ. ಟಿಕೆಟ್ ಕೊಟ್ಟರೆ ನನ್ನ ಮಗ ಸ್ಪರ್ಧೆ ಮಾಡುತ್ತಾನೆ. ಇಲ್ಲದಿದ್ದರೆ ಟಿಕೆಟ್ ಕೊಟ್ಟವರಿಗೆ ಬೆಂಬಲ ನೀಡುತ್ತೇವೆ ಎಂದು ಸ್ಪಷ್ಟಪಡಿಸಿದರು. ಈ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ ಮುಖಂಡ ಜೋಗಿ ಮಂಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆ ಬಳಿಕ ಕಾಂಗ್ರೆಸ್ ಪಕ್ಷದ ಹಣೆಬರಹ ಬದಲು

"ಕಾಂಗ್ರೆಸ್ ಪಕ್ಷವನ್ನು ಯಾವ ಶಾಸಕರೂ ತ್ಯಜಿಸುವುದಿಲ್ಲ ಎಂದು ಕಾಂಗ್ರೆಸ್ ನಾಯಕರು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿದ್ದಾಗ ಯಾವ ಶಾಸಕರೂ ಪಕ್ಷ ಬಿಡಲ್ಲ ಎಂದು ಹೇಳುತ್ತಲೇ ಇದ್ದರು. ಆದರೆ, ಹದಿನೇಳು ಶಾಸಕರು ರಾಜೀನಾಮೆ ನೀಡಿದ್ದರಿಂದ ಸಮ್ಮಿಶ್ರ ಸರ್ಕಾರ ಪತನವಾಗಲಿಲ್ಲವೇ? ಲೋಕಸಭಾ ಚುನಾವಣೆ ಬಳಿಕ 135 ಶಾಸಕರನ್ನು ಹೊಂದಿರುವ ಕಾಂಗ್ರೆಸ್‌ನ ಹಣೆಬರಹ ಯಾವ ರೀತಿ ಬದಲಾಗುತ್ತದೆ ಎಂಬುದನ್ನು ಕಾದು ನೋಡಿ.

–ಕೆ.ಎಸ್.ಈಶ್ವರಪ್ಪ, ಮಾಜಿ ಸಚಿವ

ಹಳ್ಳಿ ಹಳ್ಳಿಗೂ ಕೃಷಿ ಮಾಹಿತಿ ತಲುಪಿಸಿ

ಕೃಷಿ ಸಖಿ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಜಿಪಂ ಪಿಡಿ ಕರೆ



ಮೈಸೂರು,ಸೆ.4–ಕೃಷಿ ಮಾಹಿತಿಯನ್ನು ಹಳ್ಳಿ ಹಳ್ಳಿಗೆ ತಲುಪಿಸಿ ಎಂದು ಮೈಸೂರು ಜಿಪಂ ಯೋಜನಾ ನಿರ್ದೇಶಕಿ ಬಿ.ಎಂ.ಸವಿತಾ ಕರೆ ನೀಡಿದರು.

ಸಂಜೀವಿನಿ–ಕೆಎಸ್ಆರ್ಎಲ್‌ಪಿಎಸ್, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ನಾಗನಹಳ್ಳಿ ಸಾವಯವ ಕೃಷಿ ಸಂಶೋಧನಾ ಕೇಂದ್ರದಲ್ಲಿ ಏರ್ಪಡಿಸಿರುವ ಪರಿಸರ ಕೃಷಿ ವಿಧಾನಗಳು ಕುರಿತ ಕೃಷಿ ಜೀವನೋಪಾಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ [ಕೃಷಿ ಸಖಿ] ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳಾ ಸಬಲೀಕರಣ ಉದ್ದೇಶದಿಂದ ಸರ್ಕಾರ ರೂಪಿಸಿರುವ ದೊಡ್ಡ ಯೋಜನೆ ಇದಾಗಿದೆ ಸಖಿ ಎಂದರೆ ವಿಶ್ವಾಸ ನೀವು ಕೂಡ ಜನರ ವಿಶ್ವಾಸ ಗಳಿಸಿ, ಸರ್ಕಾರದ ಯೋಜನೆಗಳನ್ನು ತಲುಪಿಸಿ, ಸಮಾಜದಲ್ಲಿ ಒಳ್ಳೆಯ ಹೆಸರು ಗಳಿಸಿ ಎಂದರು.

ಆಶಾ, ಅಂಗನವಾಡಿ ಕಾರ್ಯಕರ್ತೆಯರಂತೆ ಕೃಷಿ ಸಖಿ ಕೂಡ ಒಂದು ಹುದ್ದೆಯಾಗಿದೆ. ಕೃಷಿ ತಾಂತ್ರಿಕತೆಯ ಮಾಹಿತಿಯನ್ನು ಕೆಳಸ್ತರಕ್ಕೆ ತಲುಪಿಸಲು ಕೃಷಿ ಸಖಿಯರು ಜನತೆ ಮತ್ತು ಸರ್ಕಾರದ ನಡುವೆ ಸೇತುವೆಯಾಗಿ ಕೆಲಸ ಮಾಡಬೇಕು ಎಂದರು.

ಬೇಸಾಯಶಾಸ್ತ್ರ ಪ್ರಾಧ್ಯಾಪಕ ಹಾಗೂ ಕೇಂದ್ರದ ವಿಸ್ತರಣಾ ಮುಂದಾಳು ಡಾ.ಸಿ. ರಾಮಚಂದ್ರ ಮಾತನಾಡಿ, ಕಳೆದ ವರ್ಷ 3 ತಂಡಗಳಲ್ಲಿ 90 ಮಂದಿಗೆ ತರಬೇತಿ ನೀಡಲಾಗಿದೆ. ಈ ಬಾರಿ 5 ತಂಡಗಳಲ್ಲಿ 167 ಮಂದಿಗೆ ತರಬೇತಿ ನೀಡಲಾಗುವುದು. ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಪಶುಪಾಲನೆ, ಅರಣ್ಯ ಇಲಾಖೆಯ ನೂತನ ತಾಂತ್ರಿಕತೆಗಳನ್ನು ರೈತರಿಗೆ ಪರಿಣಾಮಕ್ಕಾಗಿ ತಿಳಿಸುವ ಹೊಣೆ ಕೃಷಿ ಸಖಿಯರದು ಎಂದರು.

ಮನೆ ಮನೆಗೆ ತೆರಳಿ, ಮಾಹಿತಿ ನೀಡಿ, ರೈತರಲ್ಲಿ ಆತ್ಮವಿಶ್ವಾಸ ಮೂಡಿಸಿ, ಅವರ ಜೀವನೋಪಾಯಕ್ಕೆ ನೆರವಾಗಬೇಕು. ತಂತ್ರಜ್ಞಾನದ ಜೊತೆಗೆ ಕೃಷಿ ವಿಮೆ, ಬೆಳೆಗಳ ಮೌಲ್ಯವರ್ಧನೆ, ಮಾರುಕಟ್ಟೆಯ ಮಾಹಿತಿ ನೀಡಬೇಕು ಎಂದು ಸಲಹೆ ಮಾಡಿದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸರ್ಕಾರ ಮಹಿಳೆಯರ ಮೇಲೆ ವಿಶ್ವಾಸವಿಟ್ಟು ಎಲ್ಲಾ ಯೋಜನೆಗಳನ್ನು ಕೆಳಸ್ತರಕ್ಕೆ ತಲುಪಿಸಲು ಮುಂದಾಗಿದೆ. ಇಡೀ ಸಂಸಾರದ ಜವಾಬ್ದಾರಿ ನಿರ್ವಹಿಸುವ ಮಹಿಳೆಯರು ಈ ಹೊಣೆಯನ್ನು ಕೂಡ ಸಮರ್ಥವಾಗಿ ನಿರ್ವಹಿಸಿ, ರೈತರ ಆರ್ಥಿಕ ಬೆಳವಣಿಗೆಗೆ ಕಾರಣಕರ್ತರಾಗಬೇಕು ಎಂದರು.

ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ನಿರ್ದೇಶಕ ಡಾ.ಬಿ.ಎಚ್.ಯೋಗೇಶ್, ಮಂಡ್ಯದ ಸಹಾಯಕ ಪ್ರಾಧ್ಯಾಪಕ ಡಾ.ಜೆ. ಮಹದೇವ ಇದ್ದರು. ತೋಟಗಾರಿಕೆ ಸಹಾಯಕ ಪ್ರಾಧ್ಯಾಪಕ ರಾಹುಲ್ ದಾಸ್ ನಿರೂಪಿಸಿದರು. ಸಸ್ಯಸಂರಕ್ಷಣೆ ಸಹಾಯಕ ಪ್ರಾಧ್ಯಾಪಕಿ ಡಾ.ಆರ್.ಎನ್.ಪುಷ್ಪಾ ಸ್ವಾಗತಿಸಿದರು. ಹೈನುಗಾರಿಕೆ ಸಹಾಯಕ ಪ್ರಾಧ್ಯಾಪಕಿ ಡಾ.ಎ. ನಾಗಮಣಿ ವಂದಿಸಿದರು.



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕ–50 ಸಂಭ್ರಮ ಸಂವಾದ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಅವರನ್ನು ಸನ್ಮಾನಿಸಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ರಂಗಕರ್ಮಿ ರಾಜಶೇಖರ ಕದಂಬ, ಉಪಾಧ್ಯಕ್ಷ ಡೈರಿ ವೆಂಕಟೇಶ್, ಕಾರ್ಯದರ್ಶಿ ಲತಾ ಮೋಹನ್, ಚಂದ್ರಶೇಖರ್, ಕನ್ನಡ ಪ್ರಮೋದ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಸರಸ್ವತಿಪುರಂ ವಿತರಣಾ ಕೇಂದ್ರದಲ್ಲಿ ಹಿರಿಯ ಪತ್ರಿಕಾ ವಿತರಕ ಚಿಕ್ಕಯ್ಯನವರು ಕೇಕ್ ಕತ್ತರಿಸುವುದರ ಮೂಲಕ ಪತ್ರಿಕಾ ವಿತರಕರ ದಿನ ಆಚರಿಸಿದರು. ಈ ವೇಳೆ ವಿತರಕರಾದ ಜೆ.ಲೋಕೇಶ್, ಮಹೇಶ್, ನಾಗರಾಜು, ಸಂಪತ್, ನಾಗೇಂದ್ರ, ಶರತ್, ಪುಟ್ಟ, ಜಯರಾಮ್, ವಿ.ನಾಗರಾಜ್, ವೆಂಕಟೇಶ್ ನಾಯಕ್, ಯೋಗೇಶ್, ಸುರೇಶ್, ಪ್ರದೀಪ್ ಮತ್ತಿತರರು ಉಪಸ್ಥಿತರಿದ್ದರು.

ಸೂರ್ಯಸಖಿಯಲ್ಲಿ ರಾಧೆ ಶ್ಯಾಮರ ಕಲರವ



ಮೈಸೂರು, ಸೆ.4–ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ 'ತುಂಟ ಕೃಷ್ಣ ಮುದ್ದು ರಾಧೆ' ಕಲ್ಚರಲ್ ಫೆಸ್ಟ್ ಸಮಾರಂಭದಲ್ಲಿ ರಾಧೆ ಶ್ಯಾಮರ ಕಲರವ ಮೇಳೈಸಿತು.


ಸುಮಾರು ಐವತ್ತಕ್ಕೂ ಹೆಚ್ಚು ಚಿಣ್ಣರು ರಾಧೆ ಕೃಷ್ಣರ ವೇಷಭೂಷಣ ಧರಿಸಿ ಶ್ಲೋಕ, ಹಾಡು, ನೃತ್ಯ ಹಾಗೂ ಅಭಿನಯದ ಮೂಲಕ ಗಮನ ಸೆಳೆದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತೀರ್ಪುಗಾರರಾದ ಭರತನಾಟ್ಯ ವಿದುಷಿ ರೂಪ ಉಪಾಧ್ಯಾಯ, ಮಕ್ಕಳಲ್ಲಿ ಸಾಂಪ್ರದಾಯಿಕತೆಯ ಸೊಗಡು ಸದಾ ಇರುವಂತಾಗಲು ಇಂತಹ ಕಾರ್ಯಕ್ರಮಗಳು ಅವಶ್ಯಕ ಎಂದು ಹೇಳಿದರು.

ಸದಾ ವ್ಯವಹಾರಿಕತೆಯ ವ್ಯವಸ್ಥೆಯಲ್ಲೇ ಸಮಯ ವ್ಯಯಿಸುವ ನಾವು ಇಂತಹ ಕಾರ್ಯಕ್ರಮಗಳಿಂದ ಉಲ್ಲಾಸಿತರಾಗುತ್ತೇವೆ ಎಂದು ಆದ್ಯ ಸಹಕಾರಿ ಸಂಘದ ಅಧ್ಯಕ್ಷ ಡಾ.ಜೆ.ಜಿ.ವಿಶ್ವನಾಥ್ ಅಭಿಪ್ರಾಯಪಟ್ಟರು. ಸಮಾರಂಭದಲ್ಲಿ ಭರತನಾಟ್ಯ ವಿದುಷಿ ಅಪರ್ಣಾ, ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪನಾ ಕಾರ್ಯದರ್ಶಿ ಗಾಯತ್ರಿ ಸುಂದರೇಶ್ ಹಾಗೂ ಅಧ್ಯಕ್ಷರಾದ ಹೆಚ್.ಆರ್.ಸುಂದರೇಶನ್ ಉಪಸ್ಥಿತರಿದ್ದರು.

ಪುಟಾಣಿಗಳಾದ ಪೂಜಿತಾ ಬಿ, ಪೂರ್ವಿ ಎಸ್, ಸ್ತುತಿ ಮುದ್ದು ರಾಧೆಯರಾಗಿ, ವೇದಾರ್ಥ ನಂದನ್, ಯುವನ್, ಕೃಶ್ವಿಕ್ ಶರತ್ ತುಂಟಕೃಷ್ಣರಾಗಿ, ಶ್ರೀಮತಿ ಅದಿತಿ, ಶ್ವೇತ, ಮಹೇಶ್ವರಿ, ದೀಪಿಕಾ ಹಾಗೂ ರಂಜಿತಾ ಅಮ್ಮ ಯಶೋಧೆಯರಾಗಿ ತಮ್ಮ ಉತ್ತಮ ಪ್ರದರ್ಶನಕ್ಕೆ ಪಾರಿತೋಷಕ ಪಡೆದರು. ಭಾಗವಹಿಸಿದ್ದ ಎಲ್ಲಾ ಐವತ್ತು ಮಕ್ಕಳಿಗೂ ಅಭಿನಂದನಾ ಪತ್ರವನ್ನು ವಿತರಿಸಲಾಯಿತು.

ನಿಧನ



ಶಶಿಕಲಾ

ಮೈಸೂರು,ಸೆ.4–ಮೈಸೂರಿನ ಬೋಗಾದಿ, ಜ್ಞಾನಮಂದಿರ ಹಿಂಭಾಗ, ತೃಪ್ತಿ, ನಂ.581ರ ನಿವಾಸಿ ದಿವಂಗತ ಡಾ.ಎಸ್. ಹೊನ್ನಯ್ಯ ಅವರ ಪತ್ನಿ ಶಶಿಕಲಾ (74) ಸೆ.2ರಂದು ನಿಧನರಾದರು.

ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ (ಸೆ.5) ಮಧ್ಯಾಹ್ನ 2 ಗಂಟೆಗೆ ಚಾಮರಾಜನಗರದ ಪಣ್ಯದುಂಡಿ ಗ್ರಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಇಂಜಿನಿಯರಿಂಗ್, ಮೆಡಿಕಲ್ ಹಾಸ್ಟೆಲ್ ಕಟ್ಟಡಕ್ಕೆ ಶಂಕುಸ್ಥಾಪನೆ




ಮೈಸೂರು,ಸೆ.4(ಆರ್‌ಕೆ)–ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ವತಿಯಿಂದ ಮೈಸೂರಿನ ಶ್ರೀರಾಂಪುರದ ಭವ್ಯ ಭಾರತ ಬಡಾವಣೆಯಲ್ಲಿ ನಿರ್ಮಿಸಲುದ್ದೇಶಿಸಿರುವ ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿ ನಿಲಯ ಕಟ್ಟಡಕ್ಕೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರು ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದರು.

ಈ ಸಂದರ್ಭ ಪ್ರತಿಕ್ರಿಯಿಸಿದ ಸಚಿವರು, ಇತ್ತೀಚೆಗೆ ಸರ್ಕಾರ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನು ಆರಂಭಿಸುತ್ತಿರುವುದರಿಂದ ಬಡವರು, ಮಧ್ಯಮ ವರ್ಗದವರೂ ಈ ವೃತ್ತಿಪರ ಕೋರ್ಸುಗಳನ್ನು ಪಡೆಯಲು ಅವಕಾಶವಾಗುತ್ತಿದೆ. ಕಾಲೇಜುಗಳ ಸಂಖ್ಯೆಗನುಗುಣವಾಗಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯವನ್ನು ಒದಗಿಸುವುದೂ ಸರ್ಕಾರದ ಜವಾಬ್ದಾರಿಯಾಗಿರುವುದರಿಂದ ಇಲಾಖೆಯಿಂದ ಹಾಸ್ಟೆಲ್ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದರು.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆಯಿಂದ 3.26 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಹಾಸ್ಟೆಲ್ ಕಟ್ಟಡ ನಿರ್ಮಿಸಲಾಗುತ್ತಿದ್ದು, ನಿಗದಿತ ಸಮಯದೊಳಗಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಏಜೆನ್ಸಿಯವರಿಗೆ ಸೂಚನೆ ನೀಡಿದ್ದೇವೆ ಎಂದು ಸಚಿವ ಶಿವರಾಜ್ ತಂಗಡಗಿ ತಿಳಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ತುಳಸಿ ಮದ್ದಿನೇನಿ, ಉಪ ಮೇಯರ್ ಡಾ.ಜಿ.ರೂಪಾ, ಇಲಾಖೆ ಮೈಸೂರು ಜಿಲ್ಲಾ ಅಧಿಕಾರಿ ರಾಘವೇಂದ್ರ ಹಾಗೂ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.9.2023 ಮಂಗಳವಾರ, ಮಳೆ ನಕ್ಷತ್ರ: ಪುಬ್ಬ 31.08.2023ರಿಂದ 13.09.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯಶಿಲ್ಪ, ಲೇಖನ ಮತ್ತು ಪ್ರಸ್ತುತಿ–ಟಿ.ಎಸ್.ಗೋಪಾಲ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಜ್ಯೋತಿ ಶಂಕರ್, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಶ್ರೀರಾಂಭಟ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ–ಪ್ರಿಯದರ್ಶಿನಿ ಯುವತಿ ಮಂಡಳಿ ಸದಸ್ಯರಿಂದ ಕೃಷ್ಣ ಜನ್ಮಾಷ್ಟಮಿ ಕುರಿತ ಕಾರ್ಯಕ್ರಮ, 12.30 ದೇವರನಾಮ–ಟಿ.ಎನ್. ಶೇಷಗೋಪಾಲನ್, 12.45 ಸ್ಥಳೀಯ ಪತ್ರಿಕೆಗಳ ಅಸ್ತಿತ–ಅಗತ್ಯ ಕುರಿತು ಪ್ರತಿನಿಧಿ ಪತ್ರಿಕೆಯ ಸಂಪಾದಕ ಸಿ.ಕೆ. ಮಹೇಂದ್ರ ಅವರೊಂದಿಗೆ ಸಂದರ್ಶನ. ಸಂದರ್ಶಕರು–ದಿವಾಕರ ಹೆಗಡೆ, 1.20 ಭಾವಗೀತೆಗಳು–ವಿಜಯರಾಘವನ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ರೋಹಿಣಿ ಜಿ.ರಾವ್–ವೀಣಾವಾದನ, 4.00 ಕಥಾ ಕಾಲಕ್ಷೇಪ, 'ಕೃಷ್ಣಾವತಾರ' ವಿದ್ವಾನ್ ಆರ್.ಗುರುರಾಜುಲು ನಾಯ್ಡು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರವ, 6.50 ಕೃಷಿರಂಗ–ಎಣ್ಣೆ ತಾಳೆ ಬೇಸಾಯ ಕುರಿತು ಎ.ಎಸ್.ಪ್ರಸಾದ್‌ಬಾಬು ಅವರೊಂದಿಗೆ ಸಂದರ್ಶನ, 9.30 ಎ.ವಿ.ಪ್ರಕಾಶ್–ವೇಣುವಾದನ, 10.00 ಗಮಕ ವ್ಯಾಖ್ಯಾನ, ವಾಚನ–ಶ್ರೀಲಕ್ಷ್ಮಿ, ವ್ಯಾಖ್ಯಾನ– ನಿರಂಜನ್

■ **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾ ರಥೋತ್ಸವ ಹಾಗೂ ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನ ಆವರಣ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ

■ **ಮೈಸೂರು ಜಿಲ್ಲಾ ಪ್ರವಾಸಿ ವಾಹನ ಚಾಲಕರ–ಮಾಲೀಕರ ಕ್ಷೇಮಾಭಿವೃದ್ಧಿ ಸಂಘ:** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಸ್.ನಾಗರಾಜು, ಸ್ಥಳ: ಜಿಲ್ಲಾ ಸಹಕಾರ ಭವನ, ಬೆಳಗ್ಗೆ 9.30ಕ್ಕೆ.

■ **ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ :** ಶಿಕ್ಷಕರ ದಿನಾಚರಣೆ, ಉದ್ಘಾಟನೆ : ಶಾಸಕ ಜಿ.ಟಿ.ದೇವೇಗೌಡ, ಸ್ಥಳ: ಸರಸ್ವತಿ ಕನ್ವೆನ್ಷನ್ ಹಾಲ್, ಹೂಟಗಳ್ಳಿ, ಬೆಳಗ್ಗೆ 9.30ಕ್ಕೆ.

■ **ಜಿಲ್ಲಾಡಳಿತ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ:** ಶಿಕ್ಷಕರ ದಿನಾಚರಣೆ, ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ, ನಿವೃತ್ತ ಶಿಕ್ಷಕರಿಗೆ ಸನ್ಮಾನ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ: ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು: ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಶ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಅನಿಲ್‌ಕುಮಾರ್.ಸಿ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೆಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ ಮಾದೇಗೌಡ, ಸಿ.ಎನ್ ಮಂಜೇಗೌಡ, ಉಪಮಹಾಪೌರರಾದ ಡಾ.ಜಿ.ರೂಪ, ಉಪನ್ಯಾಸಕ ಶಿವಪ್ರಕಾಶ್, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯೂಪ್ರೆಷರ್, ಸುಜೋಕ್, ಡಿಜಿಟಲ್ ಫಿಜಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ, ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, ವಿಜಯನಗರ 2ನೇ ಹಂತ, ಬೆಳಗ್ಗೆ 10.30 ರಿಂದ.

■ **ಸರ್ಕಾರಿ ಪ್ರೌಢಶಾಲೆ (ಜಿ.ಬಿ.ಸರಗೂರು, ಹೆಚ್.ಡಿ.ಕೋಟೆ):** ಚಿಣ್ಣರ ಕಲಾಬಿಂಬ, ಶಾಲಾ ಮಕ್ಕಳ ಭಾರತೀಯ ಜಾನಪದ ಕಲೆಗಳ ಚಿತ್ರಕಲಾ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 10.30ಕ್ಕೆ

■ **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಮೈಸೂರು ಜಿಲ್ಲಾ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘ :** ಸಂಸ್ಕೃತೋತ್ಸವ ಹಾಗೂ ಶಿಕ್ಷಕರ ದಿನಾಚರಣೆ, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ಕುಲಪತಿ ಡಾ.ಅಹಲ್ಯಾ, ಉದ್ಘಾಟನೆ: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ನಿರ್ದೇಶಕ ಡಾ. ಸಿ. ಪಾಲಯ್ಯ, ಡಾ. ಶರಚ್ಚಂದ್ರಸ್ವಾಮಿಗಳವರಿಂದ ಉಪನ್ಯಾಸ, ವಿಶೇಷ ಆಹ್ವಾನಿತರು: ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಕೆ.ಎಸ್.ಜಯಲಕ್ಷ್ಮಿ ಸಂಪತ್‌ಕುಮಾರ್, ಮುಖ್ಯ ಅತಿಥಿಗಳು: ಮಹಾರಾಜ ಸಂಸ್ಕೃತ ಕಾಲೇಜು ಪ್ರಾಂಶುಪಾಲ ಡಾ.ಸತ್ಯನಾರಾಯಣ, ಕುಲಸಚಿವ ವಿದ್ವಾನ್ ಎಂ. ಶಿವಮೂರ್ತಿ, ಸಂಘದ ಅಧ್ಯಕ್ಷ ಹೆಚ್.ಬಿ. ಗಂಗಾಧರಯ್ಯ, ವಿಷಯ ಪರಿವೀಕ್ಷಕ ವಿದ್ವಾನ್ ಮಲ್ಲಣ್ಣ, ವಲಯ ಸಂಯೋಜಕ ವಿದ್ವಾನ್ ಇಂದ್ರೇಶಪ್ಪ, ಸಂಘದ ಪ್ರಧಾನ ಕಾರ್ಯದರ್ಶಿ ವಿದ್ವಾನ್ ಜಿ. ಪರಶಿವಮೂರ್ತಿ, ಪ್ರಾಸ್ತಾವಿಕ ನುಡಿ : ಸಂಘದ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಸ್ಥಳ: ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಪಕ್ಕ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು:** ಶಿಕ್ಷಕರ ದಿನಾಚರಣೆ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಶಾಸಕ ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು: ಕರಾಮುವಿವಿ ಕುಲಸಚಿವ ಡಾ.ಕೆ.ಬಿ.ಪ್ರವೀಣ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸನ್ಮಾನಿತರು: ದೈಹಿಕ ಶಿಕ್ಷಕ ಎಸ್.ಪಿ.ಯೋಗೇಂದ್ರ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ದುರ್ಗಾ ಫೌಂಡೇಶನ್ :** ರಾಷ್ಟ್ರೀಯ ಶಿಕ್ಷಕರ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದ ಶಿಕ್ಷಕರಿಗೆ 'ಗುರು ಸೇವಾ ರತ್ನ' ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಆಯೂಬ್‌ಖಾನ್, ಸಾಮಾಜಿಕ ಕಾರ್ಯಕರ್ತರಾದ ಗೌರಿ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಸ್ಥಳ: ಜೀವಧಾರ ರಕ್ತನಿಧಿ ಕೇಂದ್ರ, ನ್ಯೂ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಆಲ್ಜೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ, ಮೈಸೂರು ಚಾಪ್ಟರ್ :** ವರ್ಲ್ಡ್ ಆಲ್ಜೈಮರ್ಸ್ ಮಾಸಾಚರಣೆ, ಮುಖ್ಯ ಅತಿಥಿಗಳು : ರೋಟರಿ ಮೈಸೂರು ಅಧ್ಯಕ್ಷ ಅರುಣ್ ಬೆಳವಾಡಿ, ಗೌರವ ಅತಿಥಿಗಳು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಎನ್. ಚಂದ್ರಶೇಖರ್, ಡಾ. ಪ್ರತಿಭಾ ಪೆರೇರಾ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಚಾರ್ ಜೋಶಿ, ಸ್ಥಳ: ಮೈಸೂರು ಪ್ರೆಸ್ ಕ್ಲಬ್, ಕೆ.ಆರ್. ಮೊಹಲ್ಲಾ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಶಿಕ್ಷಕರ ದಿನಾಚರಣೆ, ಮುಖ್ಯ ಅತಿಥಿಗಳು : ವಿಶ್ರಾಂತ ಕುಲಪತಿ ಪ್ರೊ. ಮುಜಾಫರ್ ಹೆಚ್. ಅಸ್ಸಾದಿ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಶಿಕ್ಷಕರ ದಿನಾಚರಣೆ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ವೆಸ್ಟ್ ಇಂಡೀಸ್ ಮಜೀಕ ತಾಂತ್ರಿಕ ವಿವಿ ಮಾಜಿ ಉಪಾಧ್ಯಕ್ಷ ಪ್ರೊ. ಎ.ಬಿ. ಕುಲಕರ್ಣಿ, ನಿವೃತ್ತ ಪ್ರಾಧ್ಯಾಪಕ ಪ್ರೊ. ಎಸ್.ಎನ್. ವಿಕ್ರಮ್ ರಾಜೇ ಅರಸ್, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 11.30ಕ್ಕೆ.

■ **ಶ್ರೀ ಕಲಾನಿಕೇತನ ಕಾಲೇಜ್ ಆಫ್ ವಿಷುಯಲ್ ಆರ್ಟ್ :** ಎಂ.ಎಲ್. ಪವನ್‌ಕುಮಾರ್ ಅವರಿಂದ ಸ್ಥಿರ ಚಿತ್ರಣ ಕಲಾ ಪ್ರದರ್ಶನ, ಉದ್ಘಾಟನೆ : ಮಾಜಿ ಶಾಸಕ ಸಾ.ರಾ. ಮಹೇಶ್, ಮುಖ್ಯ ಅತಿಥಿಗಳು : ಮಾಜಿ ತಾಪಂ ಸದಸ್ಯೆ ಸಿ.ಜೆ. ಶೋಭಾ ಕೋಟೇಗೌಡ, ಬಿಂದುರಾಯ ಆರ್. ಬಿರಾದಾರ್, ವನ್ಯಜೀವಿ ಕಲಾವಿದ ಗಂಗಾಧರಮೂರ್ತಿ, ಅಧ್ಯಕ್ಷತೆ : ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ ಕಾರ್ಯದರ್ಶಿ ಬಾಬುರಾವ್, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 11.30ಕ್ಕೆ

■ **ಮೈಸೂರು ಅರಮನೆ ಮಂಡಳಿ :** ಮೈಸೂರು ನಾಡಹಬ್ಬ ಮೈಸೂರು ದಸರಾ–2023ರ ಅಂಗವಾಗಿ ಅರಮನೆಗೆ ಆಗಮಿಸುತ್ತಿರುವ ಗಜಪಡೆಗೆ ಸ್ವಾಗತ ಕಾರ್ಯಕ್ರಮ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಚಾಲನೆ: ಸಚಿವ ಡಾ.ಹೆಚ್.ಸಿ ಮಹದೇವಪ್ಪ, ಉಪಸ್ಥಿತರು: ಸಚಿವ ಕೆ.ವೆಂಕಟೇಶ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಲೋಕಸಭಾ ಸದಸ್ಯರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ಅನಿಲ್‌ಕುಮಾರ್.ಸಿ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಕೆಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೆಗೌಡ, ಹೆಚ್.ವಿಶ್ವನಾಥ್, ಡಾ.ಡಿ ತಿಮ್ಮಯ್ಯ, ಮಧು ಜಿ ಮಾದೇಗೌಡ, ಸಿ.ಎನ್.ಮಂಜೇಗೌಡ, ಉಪಮೇಯರ್ ಡಾ. ಜಿ. ರೂಪಾ, ಸ್ಥಳ: ಅರಮನೆ ಜಯಮಾರ್ತಾಂಡ ದ್ವಾರ, ಮಧ್ಯಾಹ್ನ 12 ರಿಂದ.

■ **ಮುದ್ದುರಾಮ ಪ್ರತಿಷ್ಠಾನ :** ಪೂಜ್ಯ ಶ್ರೀ ಸಿದ್ದೇಶ್ವರ ಸ್ವಾಮಿಗಳವರ ನೆನಪಿನ ಉಪನ್ಯಾಸ, ಸಾನ್ನಿಧ್ಯ : ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮುಕ್ತಿದಾನಂದಜಿ ಮಹಾರಾಜ್, ಡಾ. ವೀಣಾ ಬನ್ನಂಜೆ ಅವರಿಂದ ಉಪನ್ಯಾಸ, ಆಶಯ ನುಡಿ : ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಪಿ. ಪ್ರಕಾಶ್, ಉಪಸ್ಥಿತರು : ಪ್ರತಿಷ್ಠಾನ ಅಧ್ಯಕ್ಷ ಕೆ.ಸಿ. ಶಿವಪ್ಪ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣ, ಸರಸ್ವತಿಪುರಂ, ಸಂಜೆ 5ಕ್ಕೆ

■ **ಕುಮಾರವ್ಯಾಸ ಗುರುಕುಲ :** ಕೃಷ್ಣಗಿರಿ ಕೃಷ್ಣರಾಯರ ಪುಣ್ಯದಿನ ಸಂಸ್ಮರಣೆ ಮತ್ತು ಗೌರಮ್ಮ ಶ್ರೀನಿವಾಸಮೂರ್ತಿ ಅವರ ಜನ್ಮದಿನ ಸ್ಮರಣೆ, ಡಾ. ಎ.ಎಸ್. ಅರವಿಂದಮೂರ್ತಿ ಅವರಿಂದ ಪಿಟೀಲು ವಾದನ, ವಿದ್ವಾನ್ ವಿ.ಎಸ್. ರಮೇಶ್–ಮೃದಂಗ, ಹರಿಶ್ಚಂದ್ರಕಾವ್ಯ – ವಿಶ್ವೇಶ್ವರ ಸಾಕ್ಷಾತ್ಕಾರ, ವಾಚನ : ಶ್ರೀಮತಿ ರೂಪಶ್ರೀ ನಾಗರಾಜ್, ವಾಚನ : ಡಾ. ಬಿ.ಎ. ಅನಿಲ್ ಕುಮಾರ್, ಸ್ಥಳ : ನಮನ ಕಲಾಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ

■ **ಸಂಸ್ಕೃತ ಭಾರತೀ, ವಿದ್ವಾನ್ ಟಿ.ನಾರಾಯಣಶಾಸ್ತ್ರಿ ಪ್ರತಿಷ್ಠಾನ:** ಸಂಸ್ಕೃತ ಸಪ್ತಾಹ, ಡಾ. ಪಿ.ಎಚ್. ವಿಜಯಲಕ್ಷ್ಮಿ ಅವರಿಂದ ರಾಮಶಾಸ್ತ್ರಿಯವರ ಸೀತಾರಾವಣ ಸಂವಾದಝರಿ ಕಾವ್ಯದ ವಿಶೇಷತೆ ಕುರಿತು ಪ್ರವಚನ, ಸ್ಥಳ: ಗೋಪಾಲಸ್ವಾಮಿ ಶಿಶುವಿಹಾರ ಶಾಲೆ, ಲಕ್ಷ್ಮಿಪುರಂ, ಸಂಜೆ 5.30ರಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ), ಚಾಮುಂಡಿಬೆಟ್ಟದ ತಪ್ಪಲು:** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರಿಂದ ಪ್ರವಚನ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30ಕ್ಕೆ

ಮೈಸೂರು ಮಿತ್ರ



ಪ್ರತಾಪ್ ಸಿಂಹ
ಸಂಸದ
ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ

ಪ್ರಸ್ತುತಿ

ಶಿಕ್ಷಕರ ದಿನಾಚರಣೆ ವಿಶೇಷ

ನಮಗೆ ಬದುಕು ಕಲಿಸುವವರ ಬದುಕು ಆಗದಿರಲಿ ಬಡಕಲು!



“ಇವತ್ತಿಗೂ ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ ಮೂಲ ವ್ಯವಸ್ಥೆಯಾದ ಶೌಚಾಲಯವೇ ಇಲ್ಲದಂತಹ ಸ್ಥಿತಿಯಿದೆ. ಸಂಬಳ, ಸವಲತ್ತಿನ ವಿಚಾರ ಬಂದಾಗ ಆಳುವವರು ಇತರ ಸರಕಾರಿ ಉದ್ಯೋಗಿಗಳಂತೆಯೇ ಶಿಕ್ಷಕರನ್ನೂ ಟ್ರೀಟ್ ಮಾಡುತ್ತಾರೆ. ಕಾಲೇಜು, ಯೂನಿವರ್ಸಿಟಿಗಳಲ್ಲಿ ಆ ಸಿದ್ಧಾಂತ, ಈ ಸಿದ್ಧಾಂತ ಅಂತ ತಲೆ ತಿರುಗಿಸುವವರಿಗೆ ಕೈತುಂಬಾ ಪಗಾರ, ವಾರದ 6 ದಿನಗಳೂ ಪಾಠ ಮಾಡುವ ಶಿಕ್ಷಕರಿಗೆ 20 ವರ್ಷ ಸೇವೆ ಸಲ್ಲಿಸಿದರೂ 10 ಸಾವಿರ ಮೀರದ ಸಂಬಳ! ಇನ್ನಾದರೂ ಇದನ್ನೆಲ್ಲಾ ಸರಿಪಡಿಸಬೇಕು ಎಂಬ ಇಚ್ಛೆ ನಮ್ಮನ್ನಾಳುವವರಿಗಿದ್ದರೆ ಕೆಲವೊಂದು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬಹುದು.

ಇವು ಮಾಜಿ ರಾಷ್ಟ್ರಪತಿ ಕಲಾಂ ಮೆಲುಕು ಹಾಕಿದ ಬಾಲ್ಯದ ಕಥೆಗಳು. “ನಮ್ಮನ್ನೆಲ್ಲ ಸಮುದ್ರದ ಕಿನಾರೆಗೆ ಕರೆದು ಕೊಂಡು ಹೋದರು. ದಡಕ್ಕೆ, ಬಂಡೆಗಳಿಗೆ ಬಂದು ಅಪ್ಪಳಿಸುತ್ತಿದ್ದ ಅಲೆಗಳ ಬೋರ್ಗರೆತವನ್ನು ನೋಡಿ ನಮಗೆ ಸಂತಸವಾಯಿತು. ಆಗಸದಲ್ಲಿ ಚಿಲಿಪಿಲಿ ಗುಟ್ಟುತ್ತಾ ಹಕ್ಕಿಗಳು ಹಾರಾಟ ನಡೆಸುತ್ತಿದ್ದವು. ಅವುಗಳತ್ತ ಬೆರಳು ಮಾಡಿದ ಮೇಷ್ಟ್ರು 10, 20 ಸಮುದ್ರದ ಹಕ್ಕಿಗಳು ಗುಂಪು ಗುಂಪಾಗಿ ಹಾರಾಟ ನಡೆಸುತ್ತಿರುವುದನ್ನು ತೋರಿಸಿದರು. ಏಕ ಗುರಿಯಿಂದ ಸಾಲಾಗಿ ಸಾಗುತ್ತಿದ್ದ ಹಕ್ಕಿಗಳನ್ನು ಕಂಡು ನಮಗೆ ಆಶ್ಚರ್ಯವಾಯಿತು. ಆ ಹಕ್ಕಿಗಳ ಸಾಲುಗಳನ್ನೇ ದಿಟ್ಟಿಸಿ ನೋಡುತ್ತಿದ್ದೆವು. ಅವುಗಳತ್ತ ಬೊಟ್ಟು ಮಾಡುತ್ತಾ, ಹಕ್ಕಿಗಳು ಹಾರುವಾಗ ಹೇಗೆ ಕಾಣುತ್ತವೆ ಎಂದು ತಿಳಿಯಿತೋ ಎಂದು ಕೇಳಿದರು. ಅವು ರೆಕ್ಕೆ ಬಡಿಯುತ್ತಿರುವುದು ಕಂಡಿತು. ಮೇಲೇರುವಾಗ, ಮುಂದೆ ಸಾಗಬೇಕಾದಾಗ ಅದಕ್ಕೆ ಅನುಗುಣವಾಗಿ ರೆಕ್ಕೆ ಬಡಿಯುತ್ತವೆ ಎಂದು ವಿವರಿಸಿದರು. ಅವು ತಮಗೆ ಬೇಕಾದ ಕಡೆ ಸಾಗುತ್ತಿರುವುದು ನಮಗೆ ಕಂಡಿತು. ಎಲ್ಲಿದೆ ಹಕ್ಕಿಗಳಲ್ಲಿ ಯಂತ್ರ, ಅದಕ್ಕೆ ಶಕ್ತಿ ಎಲ್ಲಿಂದ ಬರುತ್ತದೆ ಎಂದು ನಮ್ಮನ್ನು ಕೇಳಿದರು. ಹಕ್ಕಿಗಳಿಗೆ ಬದುಕೇ ದಿಕ್ಕು ಮತ್ತು ಬಯಕೆಯೇ ಪ್ರೇರಣೆ ಎಂದರು. ಹದಿನೈದು ನಿಮಿಷಗಳಲ್ಲಿ ನಮಗೆ ಎಲ್ಲವೂ ಅರ್ಥವಾಯಿತು. ಎಷ್ಟು ಚೆನ್ನ ಅಲ್ವಾ? ನಮ್ಮ ಮೇಷ್ಟ್ರು ಪಾಠ ಮಾಡುವುದರ ಜತೆಗೆ ಪ್ರಾಯೋಗಿಕವಾಗಿಯೂ ವಿವರಿಸುತ್ತಿದ್ದರು. ನೈಜ ಶಿಕ್ಷಣ ಅಂದರೆ ಇದೇ ಅಲ್ಲವೇ?

ನನಗೆ ಅದು ಬರೀ ಹಕ್ಕಿಗಳು ಹಾರುವ ಪರಿಯನ್ನು ತಿಳಿದುಕೊಳ್ಳುವ ಪಾಠವಾಗಿರಲಿಲ್ಲ. ಹಾರಾಟದ ಸ್ಫೂರ್ತಿ ನನ್ನೊಳಗೆ ಬಂದು ಕುಳಿತು ಕೊಂಡುಬಿಟ್ಟಿತು. ಅಂದಿನಿಂದ ನನ್ನ ಮುಂದಿನ ಶಿಕ್ಷಣ ಹಾರಾಟಕ್ಕೆ ಸಂಬಂಧಪಟ್ಟಿದ್ದೇ ಆಗಿರಬೇಕೆಂಬ ಯೋಚನೆ ನನ್ನಲ್ಲಿ ಚಿಗುರೊಡೆಯಿತು. ಫ್ಲೈಟ್ ಸೈನ್ಸ್‌ನತ್ತ ನಾನು ಸಾಗುತ್ತೇನೆ ಎಂದು ಆ ಕ್ಷಣದಲ್ಲಿ ನನಗೆ ಅರಿವಾಗಲಿಲ್ಲ. ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆ ಎಂದರೆ, ನನ್ನ ಶಿಕ್ಷಕರು ಕೊಟ್ಟ ಶಿಕ್ಷಣ ನನಗೆ ಪ್ರೇರಣೆ ಕೊಟ್ಟು ಬದುಕಿನ ಗುರಿಯತ್ತ ನನ್ನನ್ನು ಕೊಂಡೊಯ್ಯಿತು. ಜೀವನದ ಧ್ಯೇಯವನ್ನು ತೋರಿತು. ಕಾಲೇಜಿಗೆ ಸೇರಿದಾಗ ಭೌತಶಾಸ್ತ್ರವನ್ನು ಆಯ್ದುಕೊಂಡೆ. ಆನಂತರ ಮದ್ರಾಸ್ ತಾಂತ್ರಿಕ ಶಿಕ್ಷಣ ಸಂಸ್ಥೆ ಸೇರಿ, ಏರೋನಾಟಿಕಲ್ ಎಂಜಿನಿಯರಿಂಗ್ ವಿಷಯವನ್ನು ತೆಗೆದು ಕೊಂಡೆ. ಹೀಗೆ ಒಬ್ಬ ರಾಕೆಟ್ ಎಂಜಿನಿಯರ್ ಆದೆ. ಒಬ್ಬ ಸಾಮಾನ್ಯ ವಿದ್ಯಾರ್ಥಿ ಇರಬಹುದು, ಪ್ರತಿಭಾನ್ವಿತರಿರಬಹುದು, ಶಿಕ್ಷಕರು ಎಲ್ಲ ವಿದ್ಯಾರ್ಥಿ ಗಳಲ್ಲೂ ಜ್ಞಾನದ ದೀವಿಗೆಯನ್ನು ಹಚ್ಚಿ ಹೇಗೆ ಬದುಕನ್ನು ರೂಪಿಸಬಲ್ಲರು ಎಂಬುದಕ್ಕೆ ಶಿವ ಸುಬ್ರಹ್ಮಣ್ಯ ಅಯ್ಯರ್ ಒಂದು ಉದಾಹರಣೆಯಾಗಿದ್ದರು”.

ಒಬ್ಬ ಶಿಕ್ಷಕ ಅಥವಾ ನೆಚ್ಚಿನ ಮೇಷ್ಟ್ರು ನಮ್ಮ ಜೀವನದಲ್ಲಿ ಎಂತಹ ಪಾತ್ರ ವಹಿಸುತ್ತಾನೆ ಎಂಬುದಕ್ಕೆ ಕಲಾಂ ಜೀವನದ ಈ ಎರಡು ಘಟನೆಗಳೇ ಸಾಕ್ಷಿ. ಅದಕ್ಕೇ ಇರಬೇಕು ನಮ್ಮ ಸಮಾಜ ಹೆತ್ತು-ಹೊತ್ತ ಅಪ್ಪ-ಅಮ್ಮನ ನಂತರದ ಸ್ಥಾನವನ್ನು ಗುರುವಿಗೆ ನೀಡಿದೆ.

ಗುರು ಬ್ರಹ್ಮ
ಗುರು ವಿಷ್ಣು
ಗುರು ದೇವೋ ಮಹೇಶ್ವರ

ಎನ್ನುತ್ತದೆ ನಮ್ಮ ಪರಂಪರೆ. “ಟೈಮ್ಸ್ ಆಫ್ ಇಂಡಿಯಾ”ದಲ್ಲಿ ಹಿರಿಯ ರಾಜಕೀಯ ವರದಿಗಾರರಾಗಿರುವ ಮಿತ್ರರೊಬ್ಬರು ಅನುಭವವೊಂದನ್ನು ಹಂಚಿಕೊಂಡರು. ಕರ್ನಾಟಕದ ಕೆಲವೇ ಶುದ್ಧಹಸ್ತ ಪೊಲೀಸ್ ಅಧಿಕಾರಿಗಳಲ್ಲಿ ಒಬ್ಬರಾಗಿರುವ ಮಾಜಿ ಪೊಲೀಸ್ ಮಹಾ ನಿರ್ದೇಶಕ ಅಜಯ್ ಕುಮಾರ್ ಸಿಂಗ್ ಜತೆ ಅವರು ಮಾತನಾಡುತ್ತಿದ್ದಾಗ, “ಬಿಡಿ ಸಾರ್.. ಪ್ರಾಮಾಣಿಕರೆಲ್ಲಿದ್ದಾರೆ, ಪ್ರಾಮಾಣಿಕತೆಗೆ ಎಲ್ಲಿ ಬೆಲೆಯಿದೆ” ಎಂದಾಗ ಅಜಯ್ ಕುಮಾರ್ ಸಿಂಗ್ ಶಿಕ್ಷಕರ ನಿಸ್ವಾರ್ಥ ಸೇವೆಯ ಬಗ್ಗೆ ಹೀಗೆ ವಿವರಿಸಿದರಂತೆ? “ನೋಡಿ, 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ನಮ್ಮ ದೇಶದ ಜನಸಂಖ್ಯೆ ಸುಮಾರು 34 ಕೋಟಿ ಇತ್ತು. ಅವರಲ್ಲಿ ಸಾಕ್ಷರರ ಪ್ರಮಾಣ 20 ಪರ್ಸೆಂಟ್ ಆಗಿತ್ತು. ಉನ್ನತ ಶಿಕ್ಷಣ ಪಡೆದವರ ಸಂಖ್ಯೆ ಆ 20 ಪರ್ಸೆಂಟ್‌ನಲ್ಲಿ ಹತ್ತು ಪರ್ಸೆಂಟ್ ಎನ್ನಬಹುದು. ಅವತ್ತು ನಮ್ಮ ದೇಶ ಕಟ್ಟಿದವರು ನಮ್ಮನಾಳಿದ ರಾಜಕೀಯ ನೇತಾರರ‍್ಯಾರೂ ಅಲ್ಲ, ಪ್ರೈಮರಿ, ಮಿಡ್ಲ್ ಸ್ಕೂಲ್ ಮೇಷ್ಟ್ರು! ಆ ಕಾಲದಲ್ಲಿ ಮೇಷ್ಟ್ರುಗಳಿಗೆ ಕೂಲಿ ಕಾರ್ಮಿಕರಿಗೆ ಸಿಗುವಂಥ ಸಂಬಳ ಸಿಗುತ್ತಿತ್ತು. ಹಾಗಿದ್ದರೂ ಬೇಸರಿಸಿಕೊಳ್ಳದೆ ಹತ್ತಾರು ಮೈಲು ನಡೆದುಕೊಂಡು ಹಳ್ಳಿಗಳಿಗೆ ಹೋಗಿ ಜ್ಞಾನ ದೀವಿಗೆಯನ್ನು ಹಚ್ಚಿದರು. ಆಗ ಎಂಟನೇ ಕ್ಲಾಸು ಪಾಸಾದವರೂ ಮೇಷ್ಟ್ರು ಆಗಬಹುದಿತ್ತು. ಅವರು ತಾವೂ ಕಲಿತು, ಇತರರ ಮಕ್ಕಳಿಗೂ ಅಷ್ಟೇ ಶ್ರದ್ಧೆ ಹಾಗೂ ಉತ್ಸಾಹದಿಂದ ವಿದ್ಯಾದಾನ ಮಾಡಿದರು. ಅವರೆಂದೂ ದುಡ್ಡಿಗಾಗಿ ದುಡಿದವರಲ್ಲ. ಆ ಮೊದಲ ತಲೆಮಾರಿನ ಶಾಲಾ ಶಿಕ್ಷಕರೇ ಈ ದೇಶದ ನಿಜವಾದ ನಿರ್ಮಾತೃಗಳು. ಒಂದು ವೇಳೆ ಅವರು ಭ್ರಷ್ಟರಾಗಿದ್ದರೆ?! ನಮ್ಮ ದೇಶ ಈ ಮಟ್ಟಕ್ಕೆ ಬೆಳೆಯುತ್ತಿತ್ತೆ? Honesty has it's own reward”.

ಅವರ ಮಾತು ಎಷ್ಟು ಸತ್ಯ ಅಲ್ಲವೆ?

Curiosity leads to new thoughts ಎಂದಿದ್ದ ಎಡಿಸನ್. ಮಕ್ಕಳ ಮನದಲ್ಲಿ ಕುತೂಹಲ, ಆಸಕ್ತಿಯನ್ನು ಹುಟ್ಟುಹಾಕಿ, ಭವಿಷ್ಯಕ್ಕೆ ದಿಕ್ಕು ತೋರುವವನೇ ಶಿಕ್ಷಕ. ಬ್ರಿಟಿಷರು ಬರುವುದಕ್ಕಿಂತ ಮೊದಲು ನಮ್ಮಲ್ಲಿ ಗುರುಕುಲ ಪದ್ಧತಿ, ಜಾತಿ ಆಧಾರಿತ ಶಿಕ್ಷಣ ವಿತ್ತು. 'ಇನ್‌ಸ್ಟಿಟ್ಯೂಟನಲೈಸ್ಡ್ ಎಜುಕೇಶನ್' ಆರಂಭ ಮಾಡಿದ್ದೇ ಬ್ರಿಟಿಷರು. ಹಾಗೆ ಆರಂಭವಾದ ಶಿಕ್ಷಣಕ್ಕೆ ಅಡಿಗಲ್ಲು ಇಟ್ಟವರೇ ನಮ್ಮ ಶಿಕ್ಷಕರು. ಅವರನ್ನು ನಮ್ಮ ಸಮಾಜವೂ ಗೌರವದಿಂದಲೇ ನೋಡುತ್ತಾ ಬಂದಿದೆ. ನಾವೂ ಕೂಡ ಕಾಲೇಜು ಮೆಟ್ಟಿಲು ಹತ್ತಿದ ನಂತರ ಎಲ್ಲ ಲೆಕ್ಚರರ್‌ಗಳನ್ನೂ ಇಷ್ಟಪಡುವುದಿಲ್ಲ. ಒಬ್ಬ ಲೆಕ್ಚರರ್ ಎದುರಿಗೆ ಬಂದರೆ ನೋಡಿಯೂ ನೋಡದಂತೆ, ಇಲ್ಲವೇ ಮುಖ ತಿರುಗಿಸಿಕೊಂಡು ಹೋದೇವು? ಆದರೆ ಮೇಷ್ಟ್ರು ಎದುರಾದರೆ ನಾವೆಷ್ಟೇ ವಿದ್ಯಾವಂತರಾಗಿದ್ದರೂ ಅಕ್ಷರ ಕಲಿಸಿದ ಗುರುವಿಗೆ ಗೌರವದಿಂದ ನಮಸ್ಕಾರ ಹೇಳುತ್ತೇವೆ. ಕಾಲೇಜು ಉಪನ್ಯಾಸಕರ ಬಗ್ಗೆ ಕೆಲವೊಮ್ಮೆ ಉಡಾಫೆಯಿಂದ, ಹಗುರವಾಗಿ, ಏಕವಚನದಿಂದ ಮಾತನಾಡುವ ನಾವು ಮೇಷ್ಟ್ರುಗಳ ವಿಷಯದಲ್ಲಿ ಯಾವತ್ತೂ ತಲೆಬಾಗಿಸುತ್ತೇವೆ. ದೊಡ್ಡವರಾದ ಮೇಲೂ ಮೇಷ್ಟ್ರುಗಳ ಬಗ್ಗೆ ಒಂದಿಷ್ಟು ಪ್ರೀತಿಪೂರ್ವಕ ಭಯ ನಮ್ಮಲ್ಲಿರುತ್ತದೆ. ಹಿಂದೆಲ್ಲ ಶಿಕ್ಷಕರು ಗಣತಿಗೆ ಬರುತ್ತಾರೆಂದರೆ ಹಳ್ಳಿಯ ಬಡವರ ಮನೆಗಳಲ್ಲಿ ಮಕ್ಕಳನ್ನು ಅವಿತಿಡುವುದನ್ನು ಕಾಣಬಹುದಿತ್ತು. ಎಲ್ಲಿ ಶಾಲೆಗೆ ಕಳುಹಿಸಿ ಎಂದು ತಾಕೀತು ಮಾಡುತ್ತಾರೆಂಬ ಭಯ. ಅದು ಅವರ ಜವಾಬ್ದಾರಿಯಲ್ಲದಿದ್ದರೂ ಮಕ್ಕಳನ್ನು ಶಾಲೆಗೆ ಕಳುಹಿಸಿ ಎಂದು ಜನರಿಗೆ ಹಿತವಚನ ನೀಡುತ್ತಿದ್ದರು, ಕಿವಿ ಮಾತು ಹೇಳುತ್ತಿದ್ದರು. ನಮ್ಮ ದೇಶದ ಅತ್ಯುನ್ನತ ಶಿಕ್ಷಣ ಸಂಸ್ಥೆಗಳಾಗಿರುವ ಐಐಟಿಗಳಲ್ಲಿಂದು, “ಐಐಟಿ ಟೀಚರ್ಸ್ ಸಿಂಡ್ರೋಮ್” ಎಂಬುದನ್ನು ಕಾಣಬಹುದು. ಅಂದರೆ ತಮ್ಮ ಬಳಿ ವಿದ್ಯೆ ಕಲಿತು ತಮಗಿಂತಲೂ ದೊಡ್ಡ ಮೊತ್ತದ ಸಂಬಳ ಪಡೆಯುವ ವಿದ್ಯಾರ್ಥಿಗಳ ಏಳಿಗೆ ಬಗ್ಗೆಯೇ ಅಸೂಯೆಪಡುವ ಉಪನ್ಯಾಸಕರಿದ್ದಾರೆ. ಕಾಲೇಜು, ಯೂನಿವರ್ಸಿಟಿಗಳಲ್ಲಿ ಸರಕಾರದ ಸಂಬಳ ತಿಂದುಕೊಂಡು ಎಡ, ಬಲ ಎಂಬ ನಿರುಪಯುಕ್ತ ಸಿದ್ಧಾಂತಗಳನ್ನು ತಲೆಗೆ ತುಂಬುವ, ಕಂಡವರ ಮಕ್ಕಳನ್ನು ಕ್ರಾಂತಿ ಹೆಸರಿನಲ್ಲಿ ಕಾಡಿಗೆ ಕಳುಹಿಸುವ, ಜಾತಿವಾದ ಮಾಡುವ ಉಪನ್ಯಾಸಕರನ್ನು ಕಾಣಬಹುದು. ಆದರೆ ಮೇಷ್ಟ್ರು ಯಾವತ್ತೂ ಪರರ ಮಕ್ಕಳನ್ನು ತನ್ನ ಮಕ್ಕಳೆಂಬಂತೆ ಕಂಡು, ಅವರ ಏಳಿಗೆಯಲ್ಲಿ ತನ್ನ ಖುಷಿ ಕಂಡುಕೊಳ್ಳುತ್ತಾನೆ. ಇಂತಹ ಗುರುತರ ಜವಾಬ್ದಾರಿಯನ್ನು ನಿರ್ವಹಿಸುವ ಶಿಕ್ಷಕರನ್ನು ನಾವು ಹೇಗೆ ನಡೆಸಿಕೊಳ್ಳುತ್ತಿದ್ದೇವೆ?

ಇವತ್ತಿಗೂ ಗ್ರಾಮೀಣ ಶಾಲೆಗಳಲ್ಲಿ ಶಿಕ್ಷಕರಿಗಾಗಲೀ, ವಿದ್ಯಾರ್ಥಿಗಳಿಗಾಗಲೀ ಮೂಲ ವ್ಯವಸ್ಥೆಯಾದ ಶೌಚಾಲಯವೇ ಇಲ್ಲದಂತಹ ಸ್ಥಿತಿಯಿದೆ. ಸಂಬಳ, ಸವಲತ್ತಿನ ವಿಚಾರ ಬಂದಾಗ ಆಳುವವರು ಇತರ ಸರಕಾರಿ ಉದ್ಯೋಗಿಗಳಂತೆಯೇ ಶಿಕ್ಷಕರನ್ನೂ ಟ್ರೀಟ್ ಮಾಡುತ್ತಾರೆ. ಕಾಲೇಜು, ಯೂನಿವರ್ಸಿಟಿಗಳಲ್ಲಿ ಆ ಸಿದ್ಧಾಂತ, ಈ ಸಿದ್ಧಾಂತ ಅಂತ ತಲೆ ತಿರುಗಿಸುವವರಿಗೆ ಕೈತುಂಬಾ ಪಗಾರ, ವಾರದ 6 ದಿನಗಳೂ ಪಾಠ ಮಾಡುವ ಶಿಕ್ಷಕರಿಗೆ 20 ವರ್ಷ ಸೇವೆ ಸಲ್ಲಿಸಿದರೂ 10 ಸಾವಿರ ಮೀರದ ಸಂಬಳ! ಇನ್ನಾದರೂ ಇದನ್ನೆಲ್ಲಾ ಸರಿಪಡಿಸಬೇಕು ಎಂಬ ಇಚ್ಛೆ ನಮ್ಮನ್ನಾಳುವವರಿಗಿದ್ದರೆ ಕೆಲವೊಂದು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬಹುದು.

1. **ಶಿಕ್ಷಕ ವರ್ಗವನ್ನು ಇತರ ಸರಕಾರಿ ಉದ್ಯೋಗಿಗಳಂತೆ ಕಾಣಬಾರದು. ಶಿಕ್ಷಕ ವೃತ್ತಿಯನ್ನು ಪ್ರತ್ಯೇಕಗೊಳಿಸಿ ಸಂಬಳ ಹೆಚ್ಚಳದ ವಿಷಯ ಬಂದಾಗ ವಿಶೇಷ ಆದ್ಯತೆ ನೀಡಬೇಕು.**
2. **'ಯಶಸ್ವಿನಿ' ಆರೋಗ್ಯ ವಿಮಾ ಯೋಜನೆಯನ್ನು ಶಿಕ್ಷಕರಿಗೂ ವಿಸ್ತರಿಸುವ ಮೂಲಕ ಅವರ ಯೋಗಕ್ಷೇಮ ನೋಡಿಕೊಳ್ಳಬೇಕು.**
3. **ಸಾಧ್ಯವಾದಷ್ಟು ಮಟ್ಟಿಗೆ ಶಿಕ್ಷಕರಿಗೂ ಸರಕಾರಿ ಕ್ವಾರ್ಟರ್ಸ್ (ವಸತಿ) ವ್ಯವಸ್ಥೆ ಮಾಡಬೇಕು.**
4. **ಆಸಕ್ತಿ ಹೊಂದಿರುವ ಟೀಚರ್‌ಗಳಿಗೆ ಉನ್ನತ ಶಿಕ್ಷಣಕ್ಕೆ ತೆರಳಲು ಪ್ರೋತ್ಸಾಹ ನೀಡಬೇಕು.**
5. **ಸಂಬಳಕ್ಕೆ ಕತ್ತರಿ ಹಾಕದೆ ಸ್ಟಡಿ ಹಾಲಿಡೆ ನೀಡಬೇಕು.**
6. **ಸಾಮರ್ಥ್ಯವನ್ನು ಗುರುತಿಸಿ 'ವರ್ಟಿಕಲ್ ಪ್ರಮೋಷನ್' (ನೇರವಾಗಿ ಮೇಲಿನ ಸ್ತರಕ್ಕೆ ಬಡ್ತಿ) ಕೊಡುವಂತಹ ವ್ಯವಸ್ಥೆಯನ್ನು ರೂಪಿಸಬೇಕು.**

“ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸಿಕೊಡುವುದಕ್ಕಿಂತ ತಮ್ಮ ಭವಿಷ್ಯವನ್ನು ಸ್ವತಃ ರೂಪಿಸಿಕೊಳ್ಳುವಂತಹ ಮಕ್ಕಳನ್ನು ಸಿದ್ಧಪಡಿಸುವುದು ಬಹುಮುಖ್ಯ” ಎಂದಿದ್ದರು ಅಮೆರಿಕದ ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್. ನಮ್ಮ ಭವಿಷ್ಯವನ್ನು ರೂಪಿಸುವ, ಶಿಕ್ಷಣದ ಬಗ್ಗೆ ಆಸಕ್ತಿ ಹುಟ್ಟಿಸಿ ಬದುಕಿಗೆ ಗುರಿ ತೋರಿಸುವ ಕೆಲಸವನ್ನು ಮಾಡುತ್ತಿರುವವರು ಪ್ರೈಮರಿ, ಮಿಡ್ಲ್, ಹೈಸ್ಕೂಲ್ ಮೇಷ್ಟ್ರುಗಳು. ಪ್ರತಿ ವರ್ಷ ಸೆಪ್ಟೆಂಬರ್ 5ರಂದು ಡಾ. ರಾಧಾಕೃಷ್ಣನ್‌ರನ್ನು ನೆನಪಿಸಿಕೊಂಡು ಶಿಕ್ಷಕರ ದಿನಾಚರಣೆಯೆಂಬ ಶಾಸ್ತ್ರವನ್ನು ಮುಗಿಸಿದರೆ ಸಾಲದು. ನಿಸ್ವಾರ್ಥ ಸೇವೆ ಮೂಲಕ ಸ್ವಸ್ಥ ಸಮಾಜ ನಿರ್ಮಾಣ ಮಾಡಲು ಪ್ರಯತ್ನಿಸುತ್ತಿರುವ ಶಿಕ್ಷಕರ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಸರಕಾರ ಸರಿಯಾಗಿ ನಿರ್ವಹಿಸಬೇಕು. ಆಗ ಶಿಕ್ಷಕರೂ ವೈಯಕ್ತಿಕ ಕಷ್ಟಕಾರ್ಪಣ್ಯಗಳ ಚಿಂತೆ ಬಿಟ್ಟು ಎಳೆಯ ಮನಸ್ಸುಗಳ ಬುದ್ಧಿ ವಿಕಾಸ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಅವರು ಕಲಿಸುವ ಅ.ಆ.ಇ.ಈ ಅಕ್ಷರದಲ್ಲಿ ಅಕ್ಕರೆಯ ಪ್ರೀತಿ ಇದೆ, ಅವರಿಗೂ ಅದನ್ನೇ ಕೊಡೋಣ. ನಾವೂ ಕೂಡ ಕೈ ಹಿಡಿದು ಅಕ್ಷರ ತಿದ್ದಿಸಿದ ಕೈಗಳಿಗೆ ಇಂದಾದರೂ ಕೈಜೋಡಿಸಿ ನಮಸ್ಕರಿಸೋಣ.

ಹ್ಯಾಪಿ, ಟೀಚರ್ಸ್ ಡೇ!

ಈಗ ಕಾವೇರಿ ನೀರಿಗೆ ಹೋರಾಡುತ್ತಿರುವವರು ಮೇಕೆದಾಟು ಪಾದಯಾತ್ರೆ ವೇಳೆ ಎಲ್ಲಿದ್ದರು?

■ ಡಿಸಿಎಂ ಡಿ.ಕೆ.ಶಿವಕುಮಾರ್ ಖಡಕ್ ಪ್ರಶ್ನೆ ■ ಕಾವೇರಿಗಾಗಿ ಪ್ರತಿಭಟಿಸಿದಂತೆ ಮೇಕೆದಾಟಿಗಾಗಿಯೂ ಕೇಂದ್ರದ ವಿರುದ್ಧ ಪ್ರತಿಭಟಿಸಬೇಕಲ್ಲವೇ?

ಬೆಂಗಳೂರು, ಸೆ.4(ಕೆಎಂಶಿ)-ಅನೇಕ ಸಂಘಟನೆಗಳು ಕಾವೇರಿ ನೀರಿಗಾಗಿ ಹೋರಾಟ ಮಾಡುತ್ತಿರುವುದು ಒಳ್ಳೆಯ ಕೆಲಸ. ಅವರಿಗೆ ಅಭಿನಂದನೆಗಳು. ಮೇಕೆದಾಟು ಯೋಜನೆಗೆ ಆಗ್ರಹಿಸಿ ಪಾದಯಾತ್ರೆ ಮಾಡಿದಾಗ ಈ ಸಂಘಟನೆಗಳು ಎಲ್ಲಿಗೆ ಹೋಗಿದ್ದವು? ಇವು ಮೇಕೆದಾಟು ಯೋಜನೆಗೆ ಅನುಮತಿ ನೀಡಿ ಎಂದು ಕೇಂದ್ರ ಸರಕಾರವನ್ನು ಯಾಕೆ ಆಗ್ರಹಿಸುತ್ತಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಕಾವೇರಿ ನೀರು ವಿಚಾರವಾಗಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ಸಮಸ್ಯೆಗೆ ಮೇಕೆದಾಟು ಯೋಜನೆ ಒಂದೇ ಪರಿಹಾರ. ರಾಜಕಾರಣ ಮಾಡುವುದರಲ್ಲಿ ಪ್ರಯೋಜನ ಇಲ್ಲ.

ಕಾವೇರಿ ನದಿ ನೀರಿನ ವಿಚಾರವಾಗಿ ಮಾತನಾಡುತ್ತಿರುವ ಈ ಸಂಘಟನೆಗಳಾಗಲೀ, ಬಿಜೆಪಿ, ಜನತಾದಳದ ನಾಯಕರುಗಳಾಗಲೀ ಮೇಕೆದಾಟು ಯೋಜನೆಗೆ ಅನುಮತಿ ನೀಡಿ ಎಂದು ಕೇಂದ್ರ ಸರ್ಕಾರವನ್ನು ಏಕೆ ಆಗ್ರಹಿಸುತ್ತಿಲ್ಲ? ಪರಿಸರ ಇಲಾಖೆಯಿಂದ ಅನುಮತಿ ಯಾಕೆ ಕೊಡಿಸುತ್ತಿಲ್ಲ? ಈಗ ಹೋರಾಟ ಮಾಡುತ್ತಿರು ವವರು ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಮಾಡಬೇಕಲ್ಲವೇ? ನಮ್ಮ ರೈತರ ಹಿತ ಕಾಯಲು ನಾವು ಬದ್ಧರಾಗಿದ್ದೇವೆ. ಅದೇ ಕಾರಣಕ್ಕೆ ತಮಿಳು ನಾಡಿನವರು ನಿತ್ಯ 24 ಸಾವಿರ ಕ್ಯೂಸೆಕ್ ನೀರು ಕೇಳಿದ್ದರು. 3 ಸಾವಿರ ಕ್ಯೂಸೆಕ್ ಮಾತ್ರ ಬಿಡಲು ಸಾಧ್ಯ ಎಂದು ನಮ್ಮ ಅಧಿಕಾರಿಗಳು ಸಮರ್ಥವಾಗಿ ವಾದ ಮಾಡಿದ್ದರ ಪರಿಣಾಮ ಈಗ ಪ್ರಾಧಿಕಾರ 5 ಸಾವಿರ ಕ್ಯೂಸೆಕ್ ನೀರು ಬಿಡಲು ಆದೇಶಿಸಿದೆ. ನ್ಯಾಯಾಲಯದಲ್ಲೂ ರಾಜ್ಯದ ಹಿತ ರಕ್ಷಣೆಗೆ ಹೋರಾಟ ಮಾಡಲು ನಾವು ಬದ್ಧರಾಗಿದ್ದೇವೆ. ಈ ವಿಚಾರವಾಗಿ ನಾನು ಕಾನೂನು ತಜ್ಞರ ತಂಡದ ಜತೆ ಚರ್ಚೆ ಮಾಡಿದ್ದೇನೆ ಎಂದರು.



ಪ್ರತಿ ವಿದ್ಯಾರ್ಥಿಯು ದೇಶಕ್ಕೆ ಸಂಪನ್ಮೂಲ ವ್ಯಕ್ತಿ ಮಾಡಲು ಸದ್ವಿದ್ಯಾ ಸಂಸ್ಥೆ ಪಣ: ಆದಿ ಚುಂಚನಗಿರಿ ಶ್ರೀಗಳ ಪ್ರಶಂಸೆ

ನಮ್ಮ ದೇಶಕ್ಕೆ ವಿಜ್ಞಾನ ಅಪರಿಚಿತ ಅಲ್ಲ ಎಂಬುದನ್ನು ಬಹಳ ಹಿಂದೆಯೇ ನಮ್ಮ ವಿಜ್ಞಾನಿಗಳು ತೋರಿಸಿಕೊಟ್ಟಿದ್ದಾರೆ



ಮೈಸೂರು, ಸೆ.4(ಎಸ್‌ಪಿಎನ್)-ಪ್ರತಿಯೊಬ್ಬ ವಿದ್ಯಾರ್ಥಿಯನ್ನು ದೇಶದ ಪ್ರಗತಿಯನ್ನು ಬಯಸುವ ವ್ಯಕ್ತಿಯನ್ನಾಗಿ ರೂಪಿಸಲು ಪಣತೊಟ್ಟಿರುವ ಸದ್ವಿದ್ಯಾ ಸಂಸ್ಥೆ ಕಾರ್ಯ ಶ್ಲಾಘನೀಯ ಎಂದು ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರು ಕಲಾಮಂದಿರದಲ್ಲಿ ಸದ್ವಿದ್ಯಾ ಶಿಕ್ಷಣ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಶತೋತ್ತರ-ಸುವರ್ಣ-ರಜತ ಮಹೋತ್ಸವ-2023ರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಈ ದೇಶದ ಆಧ್ಯಾತ್ಮ ಜ್ಞಾನವನ್ನು ಇಡೀ ಪ್ರಪಂಚಕ್ಕೆ ತೋರಿಸಿಕೊಟ್ಟ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲಿಸುತ್ತದೆ. 1893ರ ಸೆ.11ರಂದು ನಡೆದ ಅಮೆರಿಕಾದ ಚಿಕಾಗೊ 'ಸರ್ವ ಧರ್ಮ ಸಮ್ಮೇಳನ'ದಲ್ಲಿ ವಿವೇಕಾನಂದರ ಆಡಿದ ಮಾತು ನಮ್ಮ ದೇಶದ ಬಗ್ಗೆ ಜಗತ್ತಿನ ವಿದ್ವಾಂಸರು ನೋಡುವ ದೃಷ್ಟಿಕೋನವೇ ಬದಲಾಯಿತು ಎಂದರೆ ತಪ್ಪಾಗಲಾರದು. ಜಗತ್ತು ಮೆಚ್ಚಿದ ಸ್ವಾಮಿ ವಿವೇಕಾನಂದರು ಮೈಸೂರಿನ ಸದ್ವಿದ್ಯಾ ವಿದ್ಯಾಸಂಸ್ಥೆಗೆ ಬಂದಿದ್ದರು. ಆ ಜಾಗದಲ್ಲಿ ಪ್ರವಚನ ನೀಡಿದ್ದರು ಎಂಬ ಸಂಗತಿ ಮೈಸೂರಿಗರು ಹೆಮ್ಮೆ ಪಡುವ ವಿಷಯ. ಇಂತಹ ಸಂಸ್ಥೆಗೆ 150 ವರ್ಷ ತುಂಬಿರುವುದು ಸಂತಸದ ವಿಚಾರ. ಅಮೆರಿಕಾ ಸಾಹಿತ್ಯ ಲೋಕದ ದಿಗ್ಗಜರೊಬ್ಬರು ಭಾರತ ಕುರಿತು ಆಡಿದ ಮಾತಿಗೆ ತದ್ವಿರುದ್ಧವಾಗಿ ಅದೇ ವ್ಯಕ್ತಿ ಭಾರತಕ್ಕೆ ಬಂದು ಇಲ್ಲಿನ ಸ್ಥಿತಿ-ಗತಿಗಳ ಬಗ್ಗೆ ಅಧ್ಯಯನ ನಡೆಸಿದ ನಂತರ ಭಾರತದ ಆಚಾರ-ವಿಚಾರಗಳ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದ್ದ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಕೆಲವರು ಭಾರತವನ್ನು ಧರ್ಮಕ್ಕೆ ಮೀಸಲಾದ ದೇಶ ಎಂದುಕೊಂಡಿದ್ದರು. ಆದರೆ, ನಮ್ಮ ವಿಜ್ಞಾನಿಗಳು ಆ ಮಾತನ್ನು ಸುಳ್ಳಾಗಿಸಿದ್ದಾರೆ. ನಮ್ಮ ವಿಜ್ಞಾನಿಗಳು ಭಾರತದ ಸಾಧನೆಯನ್ನು ಇಡೀ ವಿಶ್ವವೇ ನೋಡುವಂತೆ ಮಾಡಿರುವುದು ಇಂದಿನ ವಿದ್ಯಾರ್ಥಿಗಳಿಗೆ ತಿಳಿಯದ ಸಂಗತಿಯಾಗಿದೆ. ಅಂದರೆ, ವಿಜ್ಞಾನ ಎಂದರೆ ಭಾರತೀಯರಿಗೆ ಅಪರಿಚಿತ ವಿಷಯ ಅಲ್ಲ ಎಂದು ತೋರಿಸಿಕೊಟ್ಟಿದ್ದಾರೆ ಎಂದು ತಿಳಿಸಿದರು.

150 ವರ್ಷಗಳ ಹಿಂದೆ ನಮ್ಮ ನಾಡಿನ ಯುವಕರಿಗೆ ಉತ್ತಮ ಶಿಕ್ಷಣ ಕಲಿಸುವ ದೃಷ್ಟಿಯಿಂದ ಈ ಸಂಸ್ಥೆ ಸ್ಥಾಪಿತವಾಗಿದೆ. ಅಂದಿನಿಂದ ಇಂದಿನವರೆಗೂ ಲಕ್ಷಾಂತರ ವಿದ್ಯಾರ್ಥಿಗಳು ಈ ಸಂಸ್ಥೆಯಲ್ಲಿ ಓದಿ, ಜೀವನ ರೂಪಿಸಿಕೊಂಡಿದ್ದಾರೆ. ಆ ವಿದ್ಯಾರ್ಥಿಗಳು ಇಂದು ಜಗತ್ತಿನ ನಾನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಇದಕ್ಕೆ ಸಂಸ್ಥೆಯಲ್ಲಿನ ಅನೇಕ ಮಹಾನೀಯರ ಕೊಡುಗೆಯೂ ಇದೆ ಎಂದು ಅಭಿಪ್ರಾಯಪಟ್ಟರು.

ನಂತರ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಮಾತನಾಡಿ, ಸದ್ವಿದ್ಯಾ ಸಂಸ್ಥೆ ಸ್ಥಾಪನೆಯಾಗಿ 150 ವರ್ಷ ತುಂಬಿದ ಹಿನ್ನೆಲೆಯಲ್ಲಿ ಇಲ್ಲಿನ ಆಡಳಿತ ಮಂಡಳಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಸಂತೋಷ ಸಂಗತಿ. ಮೈಸೂರಿನ ಕಲೆ, ಸಾಹಿತ್ಯ, ಆಚಾರ-ವಿಚಾರ, ಸಂಸ್ಕಾರವನ್ನು ಅಳವಡಿಸಿಕೊಂಡು ಉತ್ತಮ ಸಂಸ್ಥೆಯಾಗಿ ರೂಪುಗೊಂಡಿದೆ. ನಮ್ಮ ಆಧ್ಯಾತ್ಮ ಜಗತ್ತಿನಲ್ಲಿ ಓರ್ವ ವ್ಯಕ್ತಿಯ ಭವಿಷ್ಯವನ್ನು ತಿಳಿದುಕೊಳ್ಳಬೇಕಾದರೆ ನಕ್ಷತ್ರಗಳ ಆಧಾರದ ಮೇಲೆ ರಚನೆಯಾಗಿರುವ ಕುಂಡಲಿಯನ್ನು ನೋಡುತ್ತಾರೆ. ಆದರೆ, ಸಮಾಜದ ಭವಿಷ್ಯ ಹೇಳಲು ಯಾವುದೇ ಕುಂಡಲಿ ರಚನೆ ಇಲ್ಲದಿದ್ದರೂ. ಮಕ್ಕಳ ಭವಿಷ್ಯ ಇಂತಹ ಶಿಕ್ಷಣ ಸಂಸ್ಥೆಗಳು ನೀಡುವ ಶಿಕ್ಷಣ, ಸಂಸ್ಕಾರದಿಂದ ರೂಪಿತವಾಗುತ್ತದೆ ಎಂದು ಹೇಳಿದರು.

ಈ ವೇಳೆ ಸದ್ವಿದ್ಯಾ ಸಂಸ್ಥೆ ಏಳಿಗೆಗೆ ಶ್ರಮಿಸಿರುವ ನಿವೃತ್ತ ಉಪನ್ಯಾಸಕರಾದ ಟಿ.ಶೇಷಾದ್ರಿ, ಪ್ರೊ.ಟಿ.ಎನ್.ಪ್ರೇಮಚಂದ್ರ, ಟಿ.ಎಸ್.ಸತ್ಯನಾರಾಯಣರಾವ್, ಪ್ರೊ.ಲಕ್ಷ್ಮೀನಾರಾಯಣ ಶಾಸ್ತ್ರಿ, ಪ್ರೊ.ಗುರುರಾಜ್, ಶಿಕ್ಷಕರಾದ ಆರತಿ ಅರುಣ್, ಸುವಿದ್ಯಾ, ಕೃಪಾಮಂಜುನಾಥ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದ ಮಹಾರಾಜ್, ಸದ್ವಿದ್ಯಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಪ್ರೊ.ವಿ.ಕೆ.ಗೋಪಾಲಾಚಾರ್, ಉಪಾಧ್ಯಕ್ಷ ಸಿ.ಆರ್.ನಾಗರಾಜ್, ಗೌರವ ಕಾರ್ಯದರ್ಶಿ ಪ್ರೊ.ಎಂ.ಎಸ್.ಕೆ.ನರಹರಿ ಬಾಬು, ಸಹ ಕಾರ್ಯದರ್ಶಿ ಪ್ರೊ.ಕೆ.ಎಸ್. ಹಿರಿಯಣ್ಣ ಸೇರಿದಂತೆ ಇತರರಿದ್ದರು.

ಕರ್ನಾಟಕವನ್ನು ಐಟಿ, ಬಿಟಿ ರಫ್ತಿನಲ್ಲಿ ವಿಶ್ವದಲ್ಲೇ ಮೊದಲ ಸ್ಥಾನಕ್ಕೆ ತರುವ ಉದ್ದೇಶ

- ಇದಕ್ಕೆ ಅಗತ್ಯವಿರುವ ಎಲ್ಲಾ ಸೌಲಭ್ಯ ಕಲ್ಪಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ
- ಬೆಂಗಳೂರು ಟೆಕ್ ಸಮ್ಮಿಟ್ ಅಂಗವಾಗಿ ಏರ್ಪಡಿಸಿದ್ದ ಉದ್ಯಮಿಗಳೊಂದಿಗೆ ಸಂವಾದದಲ್ಲಿ ಭಾಗಿ



ಬೆಂಗಳೂರು, ಸೆ.4(ಕೆಎಂಶಿ)-ಐಟಿ/ಬಿಟಿ ರಫ್ತಿನಲ್ಲಿ ಕರ್ನಾಟಕವನ್ನು ವಿಶ್ವದಲ್ಲಿಯೇ ಮೊದಲ ಸ್ಥಾನಕ್ಕೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದರು.

ಮಾಹಿತಿ ತಂತ್ರಜ್ಞಾನ ರಫ್ತಿನಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ. ಆದರೆ, ವಿಶ್ವಮಟ್ಟದಲ್ಲಿ ಮೊದಲ ಸ್ಥಾನದ ಗುರಿ ಮುಟ್ಟಲು ಎಲ್ಲಾ ಅಗತ್ಯ ಸೌಲಭ್ಯ ಕಲ್ಪಿಸಲಾಗುತ್ತಿದೆ ಎಂದರು.

ಮಾಹಿತಿ ತಂತ್ರಜ್ಞಾನ ಸೇರಿದಂತೆ ಕೈಗಾರಿಕೋದ್ಯಮ ಸ್ಥಾಪಿಸಲು ಅಗತ್ಯ ಮೂಲಸೌಕರ್ಯಗಳನ್ನು ರಾಜ್ಯ ಸರ್ಕಾರ ಕಲ್ಪಿಸುತ್ತಿದೆ. ನಾವೀನ್ಯತಾ ವಲಯಗಳು ರಾಜಧಾನಿಯಲ್ಲಿ ನೆಲೆಸಿರುವುದು ಅತ್ಯಂತ ಸೂಕ್ತವಾಗಿದೆ.

ಐಓಟಿ, ಕೃತಕ ಬುದ್ಧಿಮತ್ತೆ, ಕ್ವಾಂಟಮ್, ಕಂಪ್ಯೂಟಿಂಗ್ ಮುಂತಾದವುಗಳಲ್ಲಿಯೂ ನಾವೇ ಮುಂಚೂಣಿಯಲ್ಲಿದ್ದೇವೆ. ಜಾಗತಿಕ ಹೂಡಿಕೆ ಮತ್ತು ಪ್ರತಿಭೆಗಳನ್ನು ರಾಜ್ಯಕ್ಕೆ ಆಕರ್ಷಿಸಲು ಇದು ಸಹಾಯಕವಾಗಿದೆ. ನಾವು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದ್ದು, ಉತ್ಕೃಷ್ಟತಾ ಕೇಂದ್ರಗಳನ್ನು ತೆರೆಯಲಾಗಿದೆ. ಬೆಂಗಳೂರು ಟೆಕ್ ಸಮ್ಮಿಟ್ ಅಂಗವಾಗಿ ಇಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉದ್ಯಮಿಗಳೊಂದಿಗೆ ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಈ ಎಲ್ಲಾ ಸೌಕರ್ಯಗಳನ್ನು ಕಲ್ಪಿಸುವ ಮೂಲಕ ನಾವು ಶೀಘ್ರದಲ್ಲೇ ಮಾಹಿತಿ ತಂತ್ರಜ್ಞಾನದ ರಫ್ತು ವಲಯದಲ್ಲಿ ಮೊದಲ ಸ್ಥಾನಕ್ಕೇರುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಉದ್ಯಮಶೀಲತೆ ಹಾಗೂ ಶಿಕ್ಷಣವನ್ನು ಉದ್ಯಮಗಳ ಅಗತ್ಯಕ್ಕೆ ತಕ್ಕಂತೆ ರೂಪಿಸಿ ಭವಿಷ್ಯದ ಬೇಡಿಕೆಗಳನ್ನು ಪರಿಣಾಮಕಾರಿಯಾಗಿ ಪೂರೈಸುವಂತೆ ಮಾಡಲಾಗಿದೆ. ಕೌಶಲಾಭಿವೃದ್ಧಿಗೆ ಪ್ರತ್ಯೇಕ ಇಲಾಖೆಯನ್ನು ರಚಿಸಿದ ಮೊದಲ ರಾಜ್ಯ ಕರ್ನಾಟಕ. ಸಂಬಂಧಪಟ್ಟ ಎಲ್ಲಾ ಪಾಲುದಾರರ ಸಹಯೋಗದೊಂದಿಗೆ ಕೌಶಲ್ಯ ಮಂಡಳಿ ರಚನೆಯತ್ತಲೂ ನಮ್ಮ ರಾಜ್ಯ ಕಾರ್ಯ ನಿರ್ವಹಿಸುತ್ತಿದೆ. ಉದ್ಯಮ ಹಾಗೂ ಶಿಕ್ಷಣ ಸಂಸ್ಥೆಗಳ ನಡುವಿನ ಅಂತರವನ್ನು ಕಡಿಮೆ ಮಾಡುವಲ್ಲಿ ಇದೊಂದು ದೊಡ್ಡ ಮೈಲಿಗಲ್ಲಾಗಲಿದೆ ಎಂದರು. ಶಿಕ್ಷಣ ಹಾಗೂ ಉದ್ಯಮ ಕ್ಷೇತ್ರದ ಸಹಯೋಗದಲ್ಲಿ ಭವಿಷ್ಯಕ್ಕೆ ಸಿದ್ಧರಾಗಿರುವ ಕಾರ್ಯಪಡೆಯನ್ನು ಸಿದ್ಧಪಡಿಸುವಲ್ಲಿ ನೆರವಾಗಲಿದೆ. ಜಾಗತಿಕ ತಾಪಮಾನ, ಹವಾಮಾನ ಬದಲಾವಣೆ, ಸೈಬರ್ ಸೆಕ್ಯೂರಿಟಿ ಮುಂತಾದ ಜಾಗತಿಕ ಸಮಸ್ಯೆಗಳನ್ನು ಎದುರಿಸಲು ನಮ್ಮ ಶಕ್ತಿಯನ್ನು ಬಳಸಲು ನಾವು ಬದ್ಧರಾಗಿದ್ದೇವೆ ಎಂದರು. ನಾವೀನ್ಯತಾ ವಲಯದಲ್ಲಿ ಸ್ಟಾರ್ಟ್ ಅಪ್ ಹಾಗೂ ಯುವ ಸಂಸ್ಥೆಗಳು ಜೀವನಾಡಿಯಾಗಿವೆ. ಈ ವಲಯದ ಬೆಳವಣಿಗೆಗೆ ಅಗತ್ಯವಿರುವ ಅನುದಾನ ಹಾಗೂ ನೆರವನ್ನು ಒದಗಿಸಲು ನಮ್ಮ ಸರ್ಕಾರ ಸಿದ್ಧವಿದೆ.

ತಂತ್ರಜ್ಞಾನ ನಾಯಕತ್ವದಲ್ಲಿ ರಾಷ್ಟ್ರೀಯ ಯೋಜನೆಯನ್ನು ಸಿದ್ಧಪಡಿಸಿ, ನಾವೀನ್ಯತೆ ಹಾಗೂ ಸುಸ್ಥಿರ ಐಟಿ ವಾತಾವರಣವನ್ನು ಸೃಷ್ಟಿಸುವುದು ನಮ್ಮ ಗುರಿ. ಈ ಕುರಿತಂತೆ ಸಲಹೆ ಹಾಗೂ ಸಂವಾದಗಳನ್ನು ಕೈಗೊಳ್ಳಲು ಕರ್ನಾಟಕಕ್ಕಿಂತಲೂ ಉತ್ತಮವಾದ ರಾಜ್ಯವಿಲ್ಲ ಎಂದು ಹೇಳಿದರು.

ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಸಾರ್ವಜನಿಕ ಸಾರಿಗೆಯ ಸುಧಾರಣೆ ಹಾಗೂ ಮೂಲಸೌಕರ್ಯವನ್ನು ಅಭಿವೃದ್ಧಿಗೊಳಿಸಲಾಗುವುದು. ಮೆಟ್ರೋ ಸಂಪರ್ಕ ಜಾಲವನ್ನು ಶೀಘ್ರವಾಗಿ ವಿಸ್ತರಿಸಲಾಗುತ್ತಿದ್ದು, ವಿಮಾನ ನಿಲ್ದಾಣಕ್ಕೆ ಮೆಟ್ರೋ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು ಎಂದರು.

ದೇವನಹಳ್ಳಿ ಪ್ರದೇಶದಲ್ಲಿ ತೈವಾನ್ ಎಲೆಕ್ಟ್ರಾನಿಕ್ಸ್ ಸಂಸ್ಥೆ ಫಾಕ್ಸಾನ್ ಸದ್ಯದಲ್ಲಿಯೇ ತನ್ನ ಉತ್ಪಾದನಾ ಘಟಕವನ್ನು ತೆರೆಯುವುದಾಗಿ ಘೋಷಿಸಿದೆ. ಆನೇಕಲ್, ದೊಡ್ಡಬಳ್ಳಾಪುರ ಮತ್ತಿತರ ನಗರಗಳು ಹೂಡಿಕೆಯ ವಿಸ್ತರಣೆಗೆ ಅವಕಾಶಗಳನ್ನು ಹೊಂದಿದ್ದು ಬೆಂಗಳೂರು ನಗರಕ್ಕೆ ಹತ್ತಿರವಿರುವುದರಿಂದ ಪ್ರಯೋಜನಕಾರಿಯಾಗಿದೆ.

ಮಂಗಳೂರಲ್ಲಿ ಐಟಿ ಕಾರ್ಖಾನೆ: ಮಂಗಳೂರಿನಲ್ಲಿ ಐಟಿ ಪಾರ್ಕ್ ಸ್ಥಾಪನೆಗೆ ಈಗಾಗಲೇ ವಿವಿಧ ಸಂಸ್ಥೆಗಳು ಆಸಕ್ತಿ ಹೊಂದಿವೆ. ಇದಕ್ಕಾಗಿ ಈಗಾಗಲೇ ಇರುವ ಹೆದ್ದಾರಿಗಳ ಸುಧಾರಣೆ ಹಾಗೂ ಹೊಸ ಹೆದ್ದಾರಿಗಳನ್ನು ನಿರ್ಮಿಸಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ತಂತ್ರಜ್ಞಾನ ಮಾನವನ ಅಭಿವೃದ್ಧಿಗೆ ಸಾಧನವಾಗಿದೆ. ಅಂತರಗಳನ್ನು ಕಡಿಮೆ ಮಾಡಿ ಜೀವನ ಮಟ್ಟ ಸುಧಾರಣೆ, ಸುಸ್ಥಿರ ಅಭಿವೃದ್ಧಿಯನ್ನು ಪ್ರೇರೇಪಿಸುವ ಶಕ್ತಿಯನ್ನು ಇದು ಹೊಂದಿದೆ. ತಂತ್ರಜ್ಞಾನದ ಅಭಿವೃದ್ಧಿ ಎಲ್ಲರನ್ನು ಒಳಗೊಂಡು ಎಲ್ಲರಿಗೂ ದೊರೆಯುವಂತೆ ಮಾಡುವುದು ನಮ್ಮ ಜವಾಬ್ದಾರಿ.

ದೇಶದ ಡಿಜಿಟಲ್ ಭವಿಷ್ಯವನ್ನು ಕರ್ನಾಟಕ ಮುನ್ನಡೆಸಲು ಸಾಧ್ಯವಿದೆ. ನಾವೀನ್ಯತಾ ತಂತ್ರಜ್ಞಾನ ಹಾಗೂ ಪ್ರಗತಿಯೆಡೆಗೆ ನಮ್ಮ ಬದ್ಧತೆಗೆ ಬೆಂಗಳೂರು ಟೆಕ್ ಸಮ್ಮಿಟ್ ಸಾಕ್ಷಿಯಾಗಿದೆ. ತಂತ್ರಜ್ಞಾನದಲ್ಲಿ ನಮ್ಮ ಸಾಧನೆಯನ್ನು ಮಾತ್ರವಲ್ಲದೇ ನಮ್ಮ ರಾಜ್ಯದ ಅದಮ್ಯ ಚೇತನವನ್ನು ವ್ಯಾಖ್ಯಾನಿಸುತ್ತದೆ. ಅತ್ಯಾಧುನಿಕ ತಂತ್ರಜ್ಞಾನಕ್ಕೆ ಇನ್ನಷ್ಟು ವೇಗವನ್ನು ನೀಡಲು ನಮಗಿರುವ ಅಚಲ ಬದ್ಧತೆಯನ್ನು ಟೆಕ್ ಸಮ್ಮಿಟ್ ಪ್ರತಿನಿಧಿಸುತ್ತದೆ ಎಂದರು.

ನಕ್ಕರೆ ಅದೇ ಸ್ವರ್ಗ

ಗಂಡ : "ಪ್ಲೀಸ್, ಕ್ರಿಕೆಟ್ ಬರೋ ಚಾನಲ್ ಹಾಕೆ"
ಹೆಂಡತಿ : "ಊಹೂಂ"
ಗಂಡ : (ಸಿಟ್ಟಿನಿಂದ) "ನೋಡ್ಕೋತೀನಿ"
ಹೆಂಡತಿ : "ಏನ್ ನೋಡ್ಕೋಳ್ಳೋದು"
ಗಂಡ : "ನೀನು ನೋಡೋ ಚಾನಲ್‌ನೇ..."

ಮೈಸೂರು ಮಿತ್ರ
ಮಂಗಳವಾರ, 5 ಸೆಪ್ಟೆಂಬರ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಜನರು ತೃಪ್ತಿಯ ವಿಚಾರದಲ್ಲಿ ನನ್ನೊಂದಿಗೆ ಸ್ಪರ್ಧೆ ಮಾಡಬೇಕೆಂದು ಬಯಸುತ್ತೇನೆ. ಕಾರಣ ತೃಪ್ತಿಯೇ ನಾನು ಹೊಂದಿರುವ ಸಮೃದ್ಧ ಸಂಪತ್ತು.
–ಮಹಾತ್ಮ ಗಾಂಧಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸುಂಕದವನ ಮುಂದೆ ಸುಖ ದುಃಖ ಹೇಳಿಕೊಂಡಂಗೆ

ನಿಮ್ಮ ಪತ್ರಗಳು

ಎಲ್ಲೆಡೆ ಪರಿಸರ ಗಣಪನ ಪೂಜಿಸಲಿ

ಮಾನ್ಯರೆ,

ಗಣೇಶನ ಹಬ್ಬ ಬಂದರೆ ಸಾಕು ವಯೋಮಾನದ ಮಿತಿ ಇಲ್ಲದೆ ತಮ್ಮ ತಮ್ಮ ಏರಿಯಾದಲ್ಲಿ ಗಣೇಶ ಮೂರ್ತಿಯನ್ನು ಸ್ಥಾಪಿಸಿ, ಪೂಜಿಸುತ್ತಾರೆ. ಆದರೆ ಬಡಾವಣೆಗೆ ಒಂದೇ ಪರಿಸರ ಗಣಪನಿರಲಿ. ಇದರಿಂದ ಅನಗತ್ಯ ಹಣ ಪೋಲಾಗುವುದು, ಪರಿಸರಕ್ಕೆ ಹಾನಿಯಾಗುವುದು ತಪ್ಪುತ್ತದೆ. ಸಾರ್ವಜನಿಕರ ಸಂಚಾರಕ್ಕೂ ಅಡಚಣೆಯಾಗುವುದಿಲ್ಲ. ವಿದ್ಯುಚ್ಛಕ್ತಿ ಉಳಿತಾಯವಾಗುತ್ತದೆ. ಹಲವು ಮಂದಿ ರಸೀದಿ ಪುಸ್ತಕ ಹಿಡಿದು ಹಣ ವಸೂಲಿ ಮಾಡುವ ಕಿರಿಕಿರಿ ತಪ್ಪಿದಂತಾಗುತ್ತದೆ. ಏರಿಯಾದ ಅನೇಕ ಪ್ರತಿಭೆಗಳನ್ನು ಗುರುತಿಸಿ ಗೌರವಿಸಲೂ ಬಹುದು. ಎಲ್ಲಾ ವಯೋಮಾನದವರಿಗೂ ನಾನಾ ಸ್ಪರ್ಧೆ ಏರ್ಪಡಿಸಿ ಬಹುಮಾನಗಳನ್ನು ನೀಡಿ ಬಡಾವಣೆಯ ಜನರನ್ನು ಒಂದೆಡೆ ಸೇರಿಸಿ, ಸ್ನೇಹ ಬಾಂಧವ್ಯ ಉಂಟು ಮಾಡಬಹುದು. ಒಗ್ಗಟ್ಟಿನಿಂದ ಬಡಾವಣೆಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು. ಅಬ್ಬರದ ಧ್ವನಿವರ್ಧಕಗಳ ಮೂಲಕ ಸಾರ್ವ ಜನಿಕರಿಗೆ ಕಿರಿಕಿರಿ ಮಾಡಬಾರದು. ಪರಿಸರ ಸ್ವಚ್ಛತೆಯಿಂದ ಕೂಡಿರಲಿ. ಬಣ್ಣದ ಗಣಪನಿಂದ ಪರಿಸರಕ್ಕೆ ಹಾನಿಯಾಗಿ ಜಲಚರಗಳ ಜೀವಕ್ಕೆ ಆಪತ್ತು ಆಗುತ್ತದೆ. ಆದ್ದರಿಂದ ಬಣ್ಣದ ಗಣಪನ ತಯಾರಿಕೆಗೆ ಅನುಮತಿ ನೀಡಬೇಡಿ. ಪೊಲೀಸರು ಹಾಗೂ ಸಾರ್ವಜನಿಕರ ಸಹಾಯದಿಂದ ಗಣೇಶನ ಕಾರ್ಯಕ್ರಮವು ಯಶಸ್ವಿಯಾಗಲಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ದಸರಾದಲ್ಲಿ ಚುಟುಕು ಕವಿಗೋಷ್ಠಿ ಇರಲಿ

ಮಾನ್ಯರೆ,

ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವ ಜನಪ್ರಿಯ ಕಾರ್ಯಕ್ರಮಗಳಲ್ಲಿ ಕವಿ ಗೋಷ್ಠಿಯು ಒಂದು. ಈ ಹಿಂದೆ ಚಿಗುರು ಕವಿಗೋಷ್ಠಿ, ದಸರಾ ಕವಿ ಗೋಷ್ಠಿ, ಅರಳು ಕವಿಗೋಷ್ಠಿ, ಚುಟುಕು ಕವಿಗೋಷ್ಠಿ, ಹಾಸ್ಯ ಮೇಳ ಇರುತ್ತಿದ್ದವು. ಇವುಗಳಲ್ಲಿ ಚುಟುಕು ಗೋಷ್ಠಿ ಪ್ರಮುಖ ಆಕರ್ಷಣೆಯ ಗೋಷ್ಠಿಯಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಚುಟುಕು ಕವಿಗೋಷ್ಠಿಯನ್ನು ರದ್ದು ಮಾಡಲಾಗಿದೆ. ಇದರಿಂದ ಚುಟುಕು ಪ್ರಿಯರಿಗೆ ಬಹಳ ನಿರಾಸೆಯಾಗಿದೆ. ಚುಟುಕು ಕವಿಗೋಷ್ಠಿ ಮಾಡುವುದರಿಂದ ದಸರೆಗೂ ಕಳೆ ಬರಲಿದೆ. ಚುಟುಕು ಹೆಸರಿಗೆ ತಕ್ಕಂತೆ ಚುಟುಕಾಗಿದ್ದರೂ ಮಹತ್ವ ಬಹಳ ದೊಡ್ಡದು. ಚುಟುಕು ಕೇಳುಗರಿಗೆ ಖುಷಿ ಕೊಡುವುದರ ಜೊತೆಗೆ ಚಿಂತನೆಗೆ ಒಳಪಡಿಸುತ್ತದೆ. ಇಂತಹ ಚುಟುಕು ಕವಿಗೋಷ್ಠಿಯನ್ನು ರದ್ದು ಮಾಡಿರುವುದು ಚುಟುಕು ಸಾಹಿತಿಗಳಿಗೆ ಮತ್ತು ಚುಟುಕು ಪ್ರಿಯರಿಗೆ ಬಹಳ ನಿರಾಸೆಯಾಗಿದೆ. ಚುಟುಕು ಸಾಹಿತ್ಯದಲ್ಲಿ ಬದುಕಿನ ಲಾಲಿತ್ಯವಿದೆ. ಆದ್ದರಿಂದ ದಯವಿಟ್ಟು ಕವಿ ಗೋಷ್ಠಿ ಸಮಿತಿಯವರು ಈ ದಸರಾ ಮಹೋತ್ಸವದಲ್ಲಿ ಚುಟುಕು ಕವಿಗೋಷ್ಠಿಯನ್ನು ಏರ್ಪಡಿಸಲಿ.

– ಅಹಲ್ಯ .ಸಿ.ನಾ .ಚಂದ್ರ, ಜನತಾನಗರ, ಮೈಸೂರು

ಗೋಕುಲ್ ಥಿಯೇಟರ್ ಹತ್ತಿರ ಅವೈಜ್ಞಾನಿಕ ಮ್ಯಾನ್‌ಹೋಲ್ ಕಾಮಗಾರಿ



ಮಾನ್ಯರೆ,

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಗೋಕುಲ್ ಥಿಯೇಟರ್ (ಈಗ ಮುಚ್ಚಿದೆ) ಹತ್ತಿರ ನೂತನವಾಗಿ ನಿರ್ಮಾಣ ಆಗುತ್ತಿರುವ ಮ್ಯಾನ್ ಹೋಲ್ ಅವೈಜ್ಞಾನಿಕವಾಗಿದೆ. ಮುಖ್ಯ ರಸ್ತೆಗಿಂತ 5 ಅಥವಾ 6 ಇಂಚು ಎತ್ತರ ಇದ್ದು ಇಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ಬಹು ಎಚ್ಚರಿಕೆಯಿಂದ ತಮ್ಮ ವಾಹನ ಚಲಿಸಬೇಕಾದ ಅನಿವಾರ್ಯತೆ ಇದೆ. ಕೆಆರ್‌ಎಸ್ ರಸ್ತೆಯಿಂದ ಎಡಕ್ಕೆ ಕಾಂಟೂರ್ ರಸ್ತೆಗೆ ತಿರುಗುವಾಗ ತಿರುವಿನಲ್ಲಿ ಈ ಮ್ಯಾನ್‌ಹೋಲ್ ನಿರ್ಮಾಣ ಆಗುತ್ತಿರುವುದು ಶ್ಲಾಘನೀಯ ಕೆಲಸವಾದರೂ ರಾತ್ರಿಯ ವೇಳೆ ಗೋಚರಿಸದೆ ಇಲ್ಲಿ ಸಂಚರಿಸುವ ದ್ವಿಚಕ್ರ ವಾಹನ ಸವಾರರು ಬೀಳುವ ಸಂದರ್ಭವೇ ಹೆಚ್ಚಾಗಿದೆ. ಈ ಕಾಮಗಾರಿಯಲ್ಲಿ ನಿರತರಾಗಿರುವ ಸಂಬಂಧಪಟ್ಟ ಇಲಾಖೆ ಹಾಗೂ ಅಧಿಕಾರಿಗಳು ತುರ್ತಾಗಿ ರಸ್ತೆಯ ಮಟ್ಟಕ್ಕೆ ಈ ಮ್ಯಾನ್‌ಹೋಲ್ ಅನ್ನು ಸರಿಪಡಿಸಿ ಮುಂದೆ ಆಗುವ ಅನಾಹುತಗಳನ್ನು ತಪ್ಪಿಸಲು ನೆರವಾಗಬೇಕು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಬೀದಿನಾಯಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ರಾವಂದೂರು ಹೋಬಳಿಯ ಅರೇನಹಳ್ಳಿ ಗ್ರಾಮದಲ್ಲಿ ಬೀದಿನಾಯಿಗಳ ಹಾವಳಿ ಎಷ್ಟು ಹೆಚ್ಚಿದೆ ಎಂದರೆ ಸಂಜೆ ಆದ ಮೇಲೆ ಜನರು ತಿರುಗಾಡಲು ಭಯಪಡುವ ಮಟ್ಟಿಗಿದೆ. ಹಿಂಡುಹಿಂಡಾಗಿ ತಿರುಗುವ ಈ ನಾಯಿಗಳ ಸಂಖ್ಯೆ ಮಿತಿಮೀರಿ ಮಕ್ಕಳು ಓಡಾಡಲು ಸಾಧ್ಯವಾಗುತ್ತಿಲ್ಲ. ಮಿಕ್ಕುಳಿದ ಚಿಕನ್, ಮಟನ್ ತ್ಯಾಜ್ಯದ ಜತೆಗೆ ಮನೆಯ ಉಳಿದ ಅನ್ನಾಹಾರವನ್ನು ತಿಂದು ಬದುಕುವ ಈ ನಾಯಿಗಳು ಕಾರು ಬೈಕ್‌ನಲ್ಲಿ ಸಂಚರಿಸುವ ಜನರ ಮೇಲೆ ಏಕಾಏಕಿ ಏರಿಹೋಗುತ್ತಿವೆ. ಟೈರ್ ಗಾಡಿಗಳನ್ನು ಓಡಿಸುತ್ತಾ ರೈತರ ಎತ್ತುಗಳ ಮೇಲೆರಗಿ ಬೆದರಿಸಿ, ಬೊಗಳುತ್ತಿವೆ. ಇದರಿಂದ ಅವರು ಆಯತಪ್ಪಿ ಬಿದ್ದರೆ ಅನಾಹುತ ಜರುಗುವುದು ಗ್ಯಾರಂಟಿ. ನಿತ್ಯ ರಾತ್ರಿ 10ಗಂಟೆ ನಂತರ ಸುಮ್ಮನೆ ಹಿಂಡು ಹಿಂಡಾಗಿ ಬೀದಿಯಲ್ಲಿ ನಿಂತು ಜೋರಾಗಿ ಬೊಗಳುತ್ತಾ, ಜನರ ನಿದ್ದೆಗೆಡಿಸಿ, ಊರಿಗೆ ಸ್ಮಶಾನ ಕಳೆ ತಂದಿತ್ತಿವೆ. ಅನಾಹುತ ಜರುಗುವ ಮುನ್ನ ಆದಷ್ಟು ಬೇಗ ಇವುಗಳನ್ನು ಹಿಡಿದು ಬೇರೆಡೆಗೆ ಸ್ಥಳಾಂತರ ಮಾಡುವ ಕ್ರಮವನ್ನು ಕೈಗೊಂಡರೆ ಗ್ರಾಮಸ್ಥರಿಗೆ ನೆಮ್ಮದಿ ನೀಡಿದಂತಾಗುತ್ತದೆ.

–ಎ.ಎಸ್.ಗೋವಿಂದೇಗೌಡ ಕನ್ನಡ ಉಪನ್ಯಾಸಕರು ಅರೇನಹಳ್ಳಿ, ಪಿ.ಪಟ್ಟಣ ತಾ.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಧರಣಿಗೆ ಗಿರಿ ಭಾರವೇ?



ಕೆಲವೊಮ್ಮೆ ನಾನು ಬರೆದಾಗಲೆಲ್ಲ ಹಲವು ವಿಷಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ಬರೆದದ್ದಿದೆ. ಅದನ್ನು ಓದಿದ ಓದುಗರು ಅಷ್ಟು ಜರೂರತ್ತಾಗಿ ಅಂಥ ಬರವಣಿಗೆಗಳಿಗೆ ಸ್ಪಂದಿಸುವುದಿಲ್ಲ. ಕಾರಣ ಇವತ್ತು ಎಲ್ಲರ ಕೈಯ್ಯಲ್ಲೂ ಮಾಹಿತಿಯ ವಿಶ್ವಕೋಶವೇ ಅಂಗಾತ ಮಲಗಿರುವಾಗ, ಅಂಥ ವಿಷಯಗಳು ಓದುಗರಿಗೆ ವಿಸ್ಮಯದಂತೆ ಕಾಣಲಿಕ್ಕಿಲ್ಲ. ನಿಜ ಹೇಳಬೇಕೆಂದರೆ ಜನರ ನಡುವಿನ ಮನೋಕೇಂದ್ರಿತ ಸ್ವಭಾವಗಳು ಹರಳುಗಟ್ಟಿದಾಗ ಮಾತ್ರ ಓದುಗರೊಂದಿಗೆ ನಾವೂ ಭಾವುಕರಾಗಲು ಸಾಧ್ಯ. ಓದುಗ ಮತ್ತು ಲೇಖಕ ಇಬ್ಬರೂ ಹೀಗೆ ಪ್ರತಿಕ್ರಿಯಿಸಿದ್ದು ಅಕ್ಷರ ಲೋಕದಲ್ಲಿ ತುಂಬಾ ಇದೆ. ಅಂದರೆ ಒಬ್ಬ ಬರಹಗಾರನಲ್ಲಿ ಭಾವುಕತೆ ಕಂಡು ಆತನೊಟ್ಟಿಗೆ ತಾನೂ ಅನುಭವಿಸುವ ಆ ವಾತ್ಸಲ್ಯವನ್ನು ನೀವು ಏನಂತ ಕರೆಯುತ್ತೀರಿ? ಬರಹಗಾರ ಓದುಗ ಇಬ್ಬರೂ ಇಲ್ಲಿ ಭಾವುಕರೆ! ಅಂದರೆ ಇಂದಿನ ಕಾರ್ಪೊರೇಟ್ ಯುಗದಲ್ಲಿ ವ್ಯವಹಾರ, ವ್ಯಾಪಾರ, ಜೀವನ ಎಲ್ಲವೂ ಕಮರ್ಷಿಯಲ್ ಆಗಿರುವಂತೆ ನಡೆವಳಿಕೆಗಳೂ ಕೂಡ ಹೆಪ್ಪುಗಟ್ಟಿವೆ ಹಾಗಾಗಿಯೇ ಭಾವುಕ ಮನಸ್ಥಿತಿಯ ಜೀವಗಳು, ಮಧುರ ಬಾಂಧವ್ಯದ ಕಡೆಗೆ ಹೊರಳುತ್ತವೆ. ಕಷ್ಟಸುಖಗಳ ಬೆನ್ನು ಸವರಿ ಎರಡನ್ನೂ ಸಮಾನವಾಗಿ ಸ್ವೀಕರಿಸುವ ಚೈತನ್ಯ ಪಡೆಯಲು ಇಂಥ ಬರವಣಿಗೆಗಳನ್ನು ಓದಿ ಆಸ್ವಾದಿಸುತ್ತವೆ.

ಹೀಗೆ ಜೀವ ತುಂಬುವ ಭಾವಶರೀರಿಗಳ ಮನಸ್ಥಿತಿ, ಓದುಗನಿಗೂ ಬರಹಗಾರನಿಗೂ ಇದ್ದಾಗ ಮಾತ್ರ ಬದುಕನ್ನು ತೆರೆದ ಕಣ್ಣುಗಳಿಂದ ನೋಡಲು ಸಾಧ್ಯ. ಇದು ಭಾವುಕ ಸ್ಥಿತಿಯೇ ಹೊರತು ಭ್ರಾಮಕ ಮನಸ್ಥತಿಯಲ್ಲ. ಭಾವುಕ ಮನಸ್ಥಿತಿಯ ಬಗ್ಗೆ ಇಷ್ಟೆಲ್ಲಾ ಪೀಠಿಕೆ ಹಾಕಲು ಕಾರಣ ಎಂದರೆ ವರಕವಿ ಡಾ. ದ.ರಾ.ಬೇಂದ್ರೆ. ಚಿಕ್ಕಂದಿನಲ್ಲಿ ಬೇಂದ್ರೆಯವರು ಶಾಲೆಗೆ ಹೋಗುವಾಗ ದಾರಿಯಲ್ಲಿ, ಹಾವಾಡಿಗ ಪುಂಗಿಯೂದಿ ಹಾವಾಡಿಸುತ್ತಿದ್ದರೆ! ಶಾಲೆಗೂ ಹೋಗದೆ, ಚಕ್ಕರ್ ಹೊಡೆದು ಹಾವಾಡಿಗನ ಚಮತ್ಕಾರವನ್ನೇ ನೋಡುತ್ತಾ ನಿಂತುಬಿಡುತ್ತಿದ್ದರಂತೆ. ಮುಂದೆ ಬೇಂದ್ರೆ ಬರೆದದ್ದೆಲ್ಲಾ 'ಮಾತು ಮಾತು ಮಥಿಸಿ ಬಂದ ಭಾವದ ನವನೀತ'? ಅಂದರೆ

ಅಂತರಂಗದ ಮೃದಂಗ
ಅಂತು ತಂತುನಾನ,
ಚಿತ್ತತಾಳ ಬಾರಿಸುತ್ತಿತ್ತು
ಝುಣ್ ಝುಣಣ ಝಾಣ...

ಬೇಂದ್ರೆ ಅತ್ಯಂತ ಭಾವುಕ ಕವಿ ಎನ್ನುವುದಕ್ಕೆ ಅವರ ಭಾವ ಗೀತೆಗಳು ಸಾಕ್ಷಿಯಾದವು. ಕೆಲವೊಮ್ಮೆ ಕಾವ್ಯದ ಚಿಂತನೆಯನ್ನೇ ಅವರ ಭಾವುಕ ಮನಸ್ಸು ಸೂಪರ್‌ಸೀಡ್ ಮಾಡುವಷ್ಟು ಪ್ರಖರವಾಗಿರುತ್ತಿತ್ತು. ಹಾಗೇನೆ ಪ್ರತಿಯೊಬ್ಬ ಸಾಮಾನ್ಯನೊಬ್ಬನ ಸ್ವಗತದಲ್ಲೂ ಈ ಭಾವುಕತೆ ಅನ್ನೋದು ತೊಟ್ಟಿಲು ತೂಗುತ್ತಿರುತ್ತದೆ. ವಿಷಯ ಚಿಕ್ಕದೇ ಇರಲಿ, ದೊಡ್ಡದೇ ಇರಲಿ; ಭಾವುಕ ಮನಸ್ಸನ್ನು ಅದು ಆಳುತ್ತಿರುತ್ತದೆ. ಕತ್ತಿಯಲುಗಿನ ದಾರಿ ಎನ್ನುತ್ತೇವಲ್ಲ ಹಾಗೆ!

ಒಂದು ಕಾಲದಲ್ಲಿ ರಸ್ತೆ ಬದಿಯಲ್ಲಿ ಈ ಹಾವಾಡಿಗರ ಆಟದ ಥರವೇ ಇನ್ನೊಂದು ಆಟವಿತ್ತು. ಅದು ತಂತಿ ಮೇಲೆ ನಡೆಯುವ ಆಟ. ನಮ್ಮ ಕಾಲದ ಪ್ರತಿಯೊಬ್ಬರೂ ದಾರಿಯಲ್ಲಿ ಹೋಗುವಾಗ ಈ ಆಟವನ್ನು ನೋಡಿಯೇ ಬೆಳೆದಿರುತ್ತಾರೆ. ಊರಿನ ಪೇಟೆ ಬೀದಿಯಲ್ಲಿ, ಜನಜಂಗುಳಿಯಲ್ಲಿ ಎಲ್ಲೋ ಒಂದು ಕಡೆ ಇಂಥಾ ಆಟ ನಡೆಯುತ್ತಿತ್ತು. ಒಮ್ಮೆ ನಾನು ಇಂಥದೊಂದು ದೊಂಬರಾಟ ನೋಡಿದೆ. ಸುಖಾಸುಮ್ಮನೆ ಅಂತಃಕರಣದ ಭಾವ ತೀವ್ರತೆಗೆ ತೆರಕೊಂಡೆ! ಅಲ್ಲಿ ಉದ್ದನೆಯ ತಂತಿಯೊಂದು ಕಟ್ಟಿತ್ತು. ಮಧ್ಯ ವಯಸ್ಕ ಗಂಡಸೊಬ್ಬ ತಂತಿಯ ಮೇಲೆ ನಡೆವ ನಡಿಗೆಯ ಶೋ ನಡೆಸುತ್ತಿದ್ದ. ಜನರನ್ನು ರಂಜಿಸುವುದು ಅವನ ಉದ್ದೇಶ.

ಬಹುಶಃ ಆ ಆಟ ನಿಮಗೂ ಗೊತ್ತು! ಅವನ ಹೆಂಡತಿ ಕೈಯ್ಯಲ್ಲಿ ಡೋಲು ಹಿಡಿದು ಸದ್ದು ಮಾಡುತ್ತಿದ್ದಳು. ಅವಳು ಮಾಡುವ ಪ್ರತೀ ಸದ್ದು ಹೇಗಿತ್ತು ಎಂದರೆ ನಾವು ಕಣ್ಣಲ್ಲಿ ಕಣ್ಣಿಟ್ಟು ಭ್ರಾತೃತ್ವದಿಂದ ನೋಡಿದರೆ ಮಾತ್ರ ಅವಳು ಮಾಡುತ್ತಿರುವ ಆ ಸದ್ದಿಗೆ ನೂರು ಅರ್ಥಗಳು ನೋವಿನ ರೂಪದಲ್ಲಿ ಕೇಳಿಸುತ್ತಿದ್ದವು. ಆ ಸೌಂಡಿನ ಅಂತರ್ಧ್ವನಿಯಲ್ಲಿ ನೋವಿತ್ತು. ಸುತ್ತಲೂ ಜನ

> **"ಗಂಡಿಗೆ ಎಷ್ಟೇ ಪುರುಷಾರ್ಥವಿದ್ದರೂ, ಕಣ್ಣಿಗೆ ಕಾಣುವ ಜೋಗುಳ ಗೀತೆ ಹೆಣ್ಣೇ ಕಣ್ರೆ, ಧರಣಿಗೆ ಗಿರಿ ಭಾರವೇ? ಗಿರಿಗೆ ಮರವು ಭಾರವೇ? ಬಳ್ಳಿಗೆ ಕಾಯಿ ಭಾರವೇ? ಹೆತ್ತ ತಾಯಿಗೆ ಮಗುವು ಭಾರವೇ? ಎಂಬ ಸಿನಿಮಾ ಗೀತೆ ಸುಳ್ಳಲ್ಲ. ಚಿಕ್ಕಂದಿನಲ್ಲಿ ಎಷ್ಟೋ ಸಲ ನೀವು ಶಾಲೆಗೆ ಹೋಗುವಾಗ–ಬರುವಾಗ ಇಂಥ ಅದೆಷ್ಟೋ ಹಾದಿ ಬೀದಿ ಶೋಗಳನ್ನು ನೋಡಿರುತ್ತೀರಿ. ಈಗ ನೆನಪಿಸಿಕೊಳ್ಳಿ ಆ ಡೋಲಾಕಿನ ಶಬ್ದದಲ್ಲಿ ಎಷ್ಟೆಲ್ಲಾ ದನಿಗಳಿದ್ದವು ಅಂತ. ನಿಮ್ಮ ಮನಸ್ಸು ಆಗ ಮಾತಾಡುತ್ತದೆ ನಿಮ್ಮೊಳಗೆ. ಹಾಗೆ ದನಿ ಕೇಳಿಸಿಕೊಂಡವರ ಎದೆಯೊಳಗೆ ಮ್ಯಾನ್‌ಪವರ್ ಜೊತೆಗೊಂದು ಹೆಂಗರುಳಿದ್ದರೆ ಸಾಕು! ಸೌಂಡಿನಲ್ಲಿರುವ ನೋವಿನ ತೂಕ ಎಷ್ಟು ಎಂಬುದು ಅರ್ಥವಾಗುತ್ತದೆ. ಇಷ್ಟು ಸಾಕಲ್ಲವೇ ಭಾವುಕತೆಯ, ತಾಯ್ತನದ ನಮ್ಮ ದೃಷ್ಟಿಕೋನಕ್ಕೆ. ನಾವೂ ಕೂಡ ಒಂದಲ್ಲಾ ಒಂದು ರೀತಿಯಲ್ಲಿ ಜೀವನ ನಡೆಸಲು ತಂತಿಯ ಮೇಲೆ ನಡೆಯುತ್ತಿರುವವರೇ!**

ನಿಂತಿದ್ದರು. ಎರಡೇ ಎರಡು ಕವಡುಗಡ್ಡಿಯ ಮಧ್ಯೆ ಸಣ್ಣದೊಂದು ತಂತಿ ಕಟ್ಟಿತ್ತು. ಆ ತಂತಿಯ ಮೇಲೆ ಚಿಕ್ಕದೊಂದು ಹೆಣ್ಣು ಮಗು (ಬಹುಪಾಲು ಹೆಣ್ಣು ಮಕ್ಕಳೇ ಆಗಿರುತ್ತಾರೆ) ಹೆಜ್ಜೆ ಮೇಲೊಂದು ಹೆಜ್ಜೆ ಇಟ್ಟು ಹುಷಾರಾಗಿ ನಡೆಯುತ್ತಿತ್ತು. ಒಮ್ಮೊಮ್ಮೆ, ಹುಡುಗಿಗೆ ತನ್ನ ಬಾಡಿ, ಬ್ಯಾಲೆನ್ಸಿಗೇ ಸಿಗದೆ ಎಡಕ್ಕೋ ಬಲಕ್ಕೋ ಬಿದ್ದು ಹೋಗುವಂತೆ ವಾಲುತ್ತಿತ್ತು. ಆದರೂ ಛಲಬಿಡದೆ ತ್ರಿವಿಕ್ರಮನಂತೆ ಚಾಕಚಕ್ಯತೆಯಿಂದ, ಮೈಯೆಲ್ಲಾ ಕಣ್ಣಾಗಿ ಮತ್ತೆ ತಂತಿಯ ಮೇಲೆ ಹೇಗೋ ಸಾವರಿಸಿಕೊಂಡು ನಡೆಯುತ್ತಿತ್ತು. ಮತ್ತೆ ಎಂದಿನಂತೆ ತನ್ನ ಜಾದೂ ನಡಿಗೆಯನ್ನು ಮುಂದುವರಿಸುತ್ತಿತ್ತು. ಕೆಳಗೆ ಆ ಮಗುವಿನ ಅಪ್ಪ ತನ್ನ ಮಗುವಿನ ಕಡೆಗೆ ಕೈತೋರಿಸಿ ಅವಳು ಮಾಡುತ್ತಿರುವ ಚಾಕಚಕ್ಯತೆಯ ಬಗ್ಗೆ ವಿಧವಿಧ ಭಂಗಿಗಳಲ್ಲಿ ನಿಂತು ರನ್ನಿಂಗ್ ಕಾಮೆಂಟ್ರಿ ಕೊಡುತ್ತಿದ್ದ. ಆ ಮೂಲಕ ಆತ ಸುತ್ತಲೂ ಜಮಾಯಿಸಿದ್ದ ಜನರನ್ನು ಇಂಪ್ರೆಸ್ ಮಾಡಲು ನೋಡುತ್ತಿದ್ದ. ಜನ ಖುಷಿಪಟ್ಟಷ್ಟೂ ತನಗೆ ಅಷ್ಟೋ ಇಷ್ಟೋ ಕಾಸು ಸಿಗುತ್ತದೆಂಬ ಆಸೆ ಅವನಿಗೆ. ಅಷ್ಟು ಪುಟ್ಟ ಹುಡುಗಿ ಎಷ್ಟು ಚೆನ್ನಾಗಿ ತಂತಿಯ ಮೇಲೆ ನಡೆದು ಸರ್ಕಸ್ ಮಾಡುತ್ತಾಳಲ್ಲ! ಏನು ಬಾಡಿಬಾಲೆನ್ಸಿಂಗ್ ಅಲ್ವ! ಎಂಬ ಕುತೂಹಲಕ್ಕೆ ಜನ ಕಾಸು ಕೊಡುತ್ತಿದ್ದರು.

ಹಾಗೆ ಕಾಸು ಕೊಟ್ಟ ಕೈಗಳಿಗೆ ನನ್ನದೊಂದು ವಿನಂತಿ ಏನೆಂದರೆ; ಕೆಳಗೆ ಡೋಲು ಬಡಿಯುತ್ತಿರುವ ಆ ಮಗುವಿನ ತಾಯಿಯ ಕಣ್ಣುಗಳನ್ನೊಮ್ಮೆ ನೋಡಿ ಸಾರ್ ಪ್ಲೀಸ್! ಅಲ್ಲಿದೆ ನಿಜವಾದ ಬವಣೆಯ ಬದುಕು. ಜೀವ ಜೀವಗಳ ನಡುವಿನ ಭಾವುಕ ಒರತೆ. ತಂತಿಯ ಮೇಲೆ ತನ್ನ ಮಗು ನಡೆಯುತ್ತಿದ್ದರೆ ಆ ತಾಯಿಗೆ ಜೀವ ಬಾಯಿಗೆ ಬಂದಿರುತ್ತದೆ. ಕಣ್ಣ ತುಂಬಾ ಆತಂಕದ ಕಾರ್ಮೋಡ ತುಂಬಿಕೊಳ್ಳುತ್ತದೆ. ಆಯತಪ್ಪಿ ಮಗಳು ಎಲ್ಲಿ ನೆಲಕ್ಕೆ ಬಿದ್ದು ಬಿಡುತ್ತಾಳೋ ಎಂಬ ಧಾವಂತ ಅವಳ ಎದೆಯಲ್ಲಿ ಕವಡೆಯಾಡುತ್ತಿರುತ್ತದೆ. ಜೀವ ಬಿಗಿ ಹಿಡಿದುಕೊಂಡು ಡೋಲು ಬಾರಿಸುತ್ತಾಳೆ. ಎಲ್ಲೋ ಒಂದು ಬಾರಿ ಮಗುವಿನ ಆ ಸ್ಥಿತಿ ಕಂಡು ಮರುಗಿದರೂ ತೋರಿಸಿಕೊಳ್ಳುವಂತಿಲ್ಲ. ತಾಯಿಯಾದವಳಿಗೆ ಕೈಸೋತು ಹೋಗುತ್ತದೆ ಆದರೂ ಡೋಲಿನ ಸೌಂಡು ನಿಂತು ಹೋಗುವುದಿಲ್ಲ, ಸ್ವಲ್ಪ ಕಡಿಮೆ ಆಗಬಹುದು ಅಷ್ಟೆ. ಆದರೆ ಅಷ್ಟಕ್ಕೇ ಕೋಪ ಮಾಡಿಕೊಳ್ಳುವ ಆಕೆಯ ಗಂಡ ತನ್ನ ರನ್ನಿಂಗ್ ಕಾಮೆಂಟ್ರಿಯ ನಡುವೆಯೇ ಹೆಂಡತಿಯ ಕಡೆ ತಿರುಗಿ ಒಮ್ಮೆ ರೇಗಿಕೊಳ್ಳುತ್ತಾನೆ. ಜೋರಾಗಿ ಸೌಂಡ್ ಮಾಡು, ಬಾರಿಸು ಅಂತ. ಆಕೆ ತನ್ನ ಡೋಲಿನ ಸೌಂಡಿನ ಜೊತೆ ಜೊತೆಗೆ ಬಾಯಲ್ಲಿ ತಾನೂ ಕೂಡ ತನ್ನ ಗಂಡನ ಮಾತಿಗೆ ಅನುಪಲ್ಲವಿ ಸೇರಿಸಿದಂತೆ ಮಾತು ಸೇರಿಸುತ್ತಿರಬೇಕು.

ಆದರೆ ತಂದೆಯೆನಿಸಿಕೊಂಡವನು 'ಶೋ' ತೋರಿಸುವಲ್ಲಿ ತೋರುವ ಉತ್ಸಾಹ ತಾಯಿಯಾದವಳಿಗೆ ಮಾತ್ರ ಇರುವುದಿಲ್ಲ. ಯಾಕೆ ಗೊತ್ತ ? ಆಕೆ ತಂದೆಯಲ್ಲ ತಾಯಿ ಕಣ್ರೆ! ಆ ಹೆಂಗಸು ಮಾತಾಡುವ ಮಾತು ಆಕೆಯ ಬಾಯಿಂದ ಕಾಟಾಚಾರಕ್ಕೆ ಉದುರುತ್ತಿರುತ್ತದೆ. ಕೈ ವಿಧಿಯಿಲ್ಲದೆ ಡೋಲು ಬಾರಿಸುತ್ತಿರುತ್ತದೆ. ಆ ಮಗು ಯಾವ ಅಪಾಯವೂ ಇಲ್ಲದಂತೆ ತಂತಿಯಿಂದ ಕೆಳಗಿಳಿಯಲಿ ಭಗವಂತ! ಅಂತ ಆಕೆಯ ಕಣ್ಣಲ್ಲಿ ಪ್ರಾರ್ಥನೆಯಿರುತ್ತದೆ. ದುರಂತವೆಂದರೆ ತಂತಿಯ ಮೇಲೆ ನಡೆವ ಮಗುವೇ ಚಿಕ್ಕದು, ಅದರ ಜೊತೆ ಆಕೆ ಮತ್ತೊಂದಕ್ಕೆ ತುಂಬು ಗರ್ಭಿಣಿ. ಹೊಟ್ಟೆಯಲ್ಲೊಂದು ಮಗು ಕಾಲು ಬಡಿಯುತ್ತಿದ್ದರೆ, ಎದುರಿಗಿರುವ ಮಗಳು ತಂತಿಯ ಮೇಲೆ ನಿಂತು ಕಾಲಿನಲ್ಲಿ ಬ್ಯಾಲೆನ್ಸಿಂಗ್ ಮಾಡುತ್ತಿರುತ್ತಾಳೆ. ಜನತಟ್ಟುವ ಚಪ್ಪಾಳೆಗೂ ಮಗು ತಲೆ ಎತ್ತುವಂತಿಲ್ಲ, ಮಗು ತಲೆ ಎತ್ತಿದರೆ ಅಪಾಯ ಕಟ್ಟಿಟ್ಟಬುತ್ತಿ. 'ಶೋ' ನಡೆಸುತ್ತಿರುವ ಅಪ್ಪನಿಗೆ ಆ ಮಗು ತಂತಿಯ ಮೇಲೆ ನಡೆದು ಬೆಂಬಲಿಸುತ್ತಿದೆ. ಆದರೆ ಈ ಎಲ್ಲ ಆಂತರಿಕ, ಅನುತಾಪಗಳನ್ನು ಅನುಭವಿಸುವ ಕಷ್ಟ ಮಾತ್ರ ಅದರ ತಾಯಿಗೆ.

ಹೆಣ್ಣಾದ ಆ ಜೀವಕ್ಕೆ ಕಣ್ಣಲ್ಲಿ ನೀರು ಬಂದರೂ ತೋರಿಸಲು ಜಾಗವಿಲ್ಲ, ಅದನ್ನೆಲ್ಲಾ ಶೋನಲ್ಲಿ ತೋರಿಸಿಕೊಳ್ಳುವ ಹಾಗಿಲ್ಲ. ಹೆತ್ತ ಮಗುವಿನ ಜೀವವನ್ನೇ ಪಣಕಿಟ್ಟು ಆಡುವ ಆಟವಿದು. ಗಂಡ ಅದನ್ನೇ ದುಡಿಯುವ ಬಿಸಿನೆಸ್ಸು ಮಾಡಿಕೊಂಡಿದ್ದಾನೆ. ಪ್ರದರ್ಶನ ಕಲೆಯ ಈ ಎಲ್ಲಾ ಧಾವಂತಗಳ ಅಭಿವ್ಯಕ್ತಿಗೆ, ಅಂತರಾಳದ ಆಕ್ರಂದನವನ್ನು ತೋರಿಸಿಕೊಳ್ಳಲಿಕ್ಕೆ, ಆಕೆಗೆ ಬಾಯಿಲ್ಲ. ಬದಲಿಗೆ ಕೈಯ್ಯಲ್ಲೊಂದು ಕೋಲಿದೆ, ಹೊಟ್ಟೆಯ ಮೇಲೊಂದು ಡೋಲಿದೆ, ಜನರ ಚಪ್ಪಾಳೆಯೂ ಕೇಳಿಸದಂತೆ ಒಮ್ಮೊಮ್ಮೆ ಆಕೆ ಸೌಂಡು ಮಾಡುತ್ತಾಳೆ. ಮಗು ಅಪಾಯಕ್ಕೆ ಸಿಕ್ಕಂತೆ ಗೋಚರಿಸಿದಾಗಲೆಲ್ಲಾ ಸೌಂಡು ಕಡಿಮೆ ಮಾಡುತ್ತಾಳೆ. ಆ ಮಗುವಿನ ಪಾದಗಳನ್ನೇ ತದೇಕಚಿತ್ತದಿಂದ ನೋಡುತ್ತಾಳೆ. ಅಪ್ಪನ ಕಿವಿ ಮಾತ್ರ ಜನಕೊಡುವ ಚಿಲ್ಲರೆ ಕಾಸಿನ ಸೌಂಡಿಗೆ ತೆರೆದಿರುತ್ತದೆ. ಮಗು ಅಪಾಯವಿಲ್ಲದೆ ಶೋ ಮುಗಿಸಿ ಕೆಳಗಿಳಿದಾಗ ಮಾತ್ರ ಆ ತಾಯಿಗೆ ಎದೆ ಹಗುರ. ಮಗು ಹಾಗೆ ಕೆಳಗಿಳಿದಾಗ ಕಡೆಯದಾಗಿ ಆಕೆ ಬಾರಿಸುವ ಡೋಲಿನ ಶಬ್ದ ಕೇಳಬೇಕು ನೀವು! ಆ ಸೌಂಡಿನಲ್ಲೊಂದು ನಿರಾಳತೆಯಿರುತ್ತೆ, ನೋವಿಗೊಂದು ಬಿಡುಗಡೆಯಿರುತ್ತೆ, ಜನರ ಮುಂದೆ ಪರೀಕ್ಷೆ ಬರೆದು ಪಾಸಾದ ಸಂತೋಷ ಇರುತ್ತೆ, ತನಗರಿವಿಲ್ಲದಂತೆ ದೇಹದಲ್ಲಿ ರಕ್ತದೊತ್ತಡ ಹತೋಟಿಗೆ ಬಂದಿರುತ್ತೆ, ಇಷ್ಟೆಲ್ಲಾ ನಡೆವ ಜೋವದೊತ್ತಡದ ಬಯೋಕೆಮಿಸ್ಟ್ರಿ ಹೆಣ್ಣೆಂಬ ಆ ತಾಯ್ತನದಲ್ಲಿ ನಿರಂತರವಾಗಿ ನಡೆದಿರುತ್ತದೆ. ಅದಕ್ಕೇ ಅವಳನ್ನು ತಾಯಿ ಅನ್ನೋದು. ಆ ಭಾವಕ್ಕೆ ಅಂತಸ್ತುಗಳ ಮೇರೆಯಿಲ್ಲ. ಭೂಮಿಯ ಮೇಲೆ ಸೃಷ್ಟಿಸುವ ಶಕ್ತಿ ಇರುವ ಒಂದೇ ಒಂದು ಸ್ಥಾಯಿ ಎಂದರೆ ಅದು ತಾಯಿ. ಅಲ್ಲಿ ಹುಟ್ಟುವ ಆ ಡೋಲಾಕಿನ ಸೌಂಡುಗಳ ರಿದಮ್ಮಿನಲ್ಲಿ ಎಷ್ಟೆಲ್ಲಾ ಬಿಡುಗಡೆಯ ದಾರಿಗಳಿವೆ ನೋಡಿ!

ಹನ್ನೆರಡನೇ ಶತಮಾನದ ಮಹಾದೇವಿಯಕ್ಕ ಎಂಬ ಶಿವಶರಣೆ ಇಂಥದೇ ಒಂದು ಆತಂಕದ ಪರಿಸ್ಥಿತಿಯನ್ನೆದುರಿಸಿ ವಚನ ಬರೆಯುತ್ತಾಳೆ. ಅಲ್ಲಿ ಕೌಶಿಕನೆಂಬ ಮಹಾರಾಜ ವಿಷ್ಣುವಿನ ಭಕ್ತ. ಈಕೆ ಪರಮ ಶಿವಭಕ್ತೆ. ಪ್ರಥಮ ರಾತ್ರಿಯಂದು ನೀನು ಮಾತು ಕೊಟ್ಟಂತೆ ನಾನು ಪೂಜಿಸುವ ದೈವವನ್ನೇ ಪೂಜಿಸಬೇಕೆಂದು ಕೌಶಿಕ ಹಠ ಹಿಡಿಯುತ್ತಾನೆ. ಅಕ್ಕ ಸುತಾರಾಂ ಒಪ್ಪುವುದಿಲ್ಲ. ಶಿವ ಅವಳ ಆರಾಧ್ಯ ದೈವ. ಶಿವನನ್ನಲ್ಲದೆ ಬೇರಾರನ್ನೂ ತಾನು ಸೇವಿಸುವುದಿಲ್ಲವೆಂಬ ಮದುವೆಯ ಮುಂಚಿನ ಷರತ್ತನ್ನು ಆಕೆ ನೆನಪಿಸುತ್ತಾಳೆ. ಆದರೆ ಎಷ್ಟೇ ಆದರೂ ಅವನು ಮಹಾರಾಜನಲ್ಲವೇ! ಬೆಡ್ ರೂಮಿನಲ್ಲೂ ಅವನು ಅಧಿಕಾರ ಚಲಾಯಿಸುತ್ತಾನೆ. ಆಗ ನೀನು ದೈವದ ವಿಚಾರಕ್ಕೆ ಧರ್ಮದ ವಿಚಾರಕ್ಕೆ ನನ್ನನ್ನು ಒತ್ತಾಯಿಸಿದರೆ ನಾನು ಅರಮನೆಯನ್ನೇ ತೊರೆದು ಹೋಗುವೆ ಎನ್ನುತ್ತಾಳೆ. ಆ ರಾತ್ರಿಯಲ್ಲೇ ಅರಮನೆಯಿಂದ ಕಾಲ್ತೆಗೆಯುತ್ತಾಳೆ. ಆಗ ಕೌಶಿಕ ಅವಳ ಸೀರೆಯ ಸೆರಗಿಡಿದು ಹೆಣ್ಣಿಗೆ ಪ್ರಾಣಕ್ಕಿಂತ ಮಾನವೇ ಮುಖ್ಯ. ನಿನ್ನ ಸೀರೆಯ ಚುಂಗು ನನ್ನ ಕೈಯ್ಯಲ್ಲಿದೆ ಈಗ ಹೊರಡು ನೋಡೋಣ! ಎಲ್ಲಿಗೆ ಹೊರಡುತ್ತೀಯೆಂದು! ಮೈಮೇಲೆ ಬಟ್ಟೆ ಇಲ್ಲದೆ ನೀನು ಹೋಗುವುದಾದರೂ ಎಲ್ಲಿಗೆ? ಎಂದು ಕೆಣಕುತ್ತಾನೆ. ಆಗ ಆಕೆಯ ಬಾಯಲ್ಲಿ ಬರುವ ವಚನದ ಮಾತೇ ಈಗ ನಾನು ಹೇಳ ಹೊರಟಿರುವ ಸಾಲುಗಳು.

ಎಮ್ಮೆಗೆ ತನ್ನ ಹಸಿವಿನ ಚಿಂತೆ
ಸಮ್ಮಗಾರನಿಗೆ ಅದರ ಚರ್ಮದ ಚಿಂತೆ
ನಿನಗೆ ನಿನ್ನ ಕಾಮದ ಚಿಂತೆ
ನನಗೆ ನನ್ನ ಚೆನ್ನಮಲ್ಲಿಕಾರ್ಜುನನ ಚಿಂತೆ,
ಒಲ್ಲೆ ಹೋಗು ಸೆರಗ ಬಿಡು ಮರುಳೆ
ಇಹದ ಗಂಡರನೆಲ್ಲ ತೆಗೆದು ಒಲೆಯೊಳಗಿಕ್ಕು

ವಚನದ ಸಾಲುಗಳ ಮೂಲಕವೇ ಉತ್ತರ ಕೊಟ್ಟು ಆಕಾಶವೇ ಬಟ್ಟೆ, ಬಯಲೇ ಆಲಯ ಎಂಬಂತೆ ಹೊರಟು ಬಿಡುತ್ತಾಳೆ. ಯಾಕಿದು ಈಗ ಇಲ್ಲಿ ನೆನಪಾಯಿತೆಂದರೆ! ಇಲ್ಲಿ ಕೌಶಿಕನಿಗೆ ಅಪ್ರತಿಮ ಸುಂದರಿಯಾದ ಮಹಾದೇವಿಯ ಸೌಂದರ್ಯ ಮತ್ತು ಕಾಮದ ಚಿಂತೆಯಾದರೆ, ಸಮ್ಮಗಾರನಿಗೆ ಎಮ್ಮೆಯ ಚರ್ಮದ ಚಿಂತೆ, ಎಮ್ಮೆಗೆ ತನ್ನ ಹಸಿವಿನ ಚಿಂತೆ, ಆಕೆಗೆ ಅವಳ ಚೆನ್ನಮಲ್ಲಿಕಾರ್ಜುನನ ಚಿಂತೆ? ಇಲ್ಲಿ ತಂತಿಯ ಮೇಲೆ ನಡೆವ ಮಗುವಿಗೆ ಅಪ್ಪ ಅಮ್ಮನ ಹೊಟ್ಟೆ ತುಂಬಿಸುವ ಚಿಂತೆ, ಅಪ್ಪನಿಗೆ ಕಾಸಿನ ಚಿಂತೆ. ಹಾಗೆಯೇ ಆ ಮಗುವಿನ ತಾಯಿಗೆ ತಂತಿಯ ಮೇಲೆ ನಡೆಯುವ ತನ್ನ ಮಗುವಿನ ಜೀವದ ಚಿಂತೆ. ಹೇಗಿದೆ ನೋಡಿ ಚಿಂತೆಯ ಪರಮಾರ್ಥ.

ಗಂಡಿಗೆ ಎಷ್ಟೇ ಪುರುಷಾರ್ಥವಿದ್ದರೂ, ಕಣ್ಣಿಗೆ ಕಾಣುವ ಜೋಗುಳ ಗೀತೆ ಹೆಣ್ಣೇ ಕಣ್ರೆ, ಧರಣಿಗೆ ಗಿರಿ ಭಾರವೇ? ಗಿರಿಗೆ ಮರವು ಭಾರವೇ? ಬಳ್ಳಿಗೆ ಕಾಯಿ ಭಾರವೇ? ಹೆತ್ತ ತಾಯಿಗೆ ಮಗುವು ಭಾರವೇ? ಎಂಬ ಸಿನಿಮಾ ಗೀತೆ ಸುಳ್ಳಲ್ಲ.

ಚಿಕ್ಕಂದಿನಲ್ಲಿ ಎಷ್ಟೋ ಸಲ ನೀವು ಶಾಲೆಗೆ ಹೋಗುವಾಗ–ಬರುವಾಗ ಇಂಥ ಅದೆಷ್ಟೋ ಹಾದಿ ಬೀದಿ ಶೋಗಳನ್ನು ನೋಡಿರುತ್ತೀರಿ. ಈಗ ನೆನಪಿಸಿಕೊಳ್ಳಿ ಆ ಡೋಲಾಕಿನ ಶಬ್ದದಲ್ಲಿ ಎಷ್ಟೆಲ್ಲಾ ದನಿಗಳಿದ್ದವು ಅಂತ. ನಿಮ್ಮ ಮನಸ್ಸು ಆಗ ಮಾತಾಡುತ್ತದೆ ನಿಮ್ಮೊಳಗೆ. ಹಾಗೆ ದನಿ ಕೇಳಿಸಿಕೊಂಡವರ ಎದೆಯೊಳಗೆ ಮ್ಯಾನ್‌ಪವರ್ ಜೊತೆಗೊಂದು ಹೆಂಗರುಳಿದ್ದರೆ ಸಾಕು! ಸೌಂಡಿನಲ್ಲಿರುವ ನೋವಿನ ತೂಕ ಎಷ್ಟು ಎಂಬುದು ಅರ್ಥವಾಗುತ್ತದೆ. ಇಷ್ಟು ಸಾಕಲ್ಲವೇ ಭಾವುಕತೆಯ, ತಾಯ್ತನದ ನಮ್ಮ ದೃಷ್ಟಿಕೋನಕ್ಕೆ. ನಾವೂ ಕೂಡ ಒಂದಲ್ಲಾ ಒಂದು ರೀತಿಯಲ್ಲಿ ಜೀವನ ನಡೆಸಲು ತಂತಿಯ ಮೇಲೆ ನಡೆಯುತ್ತಿರುವವರೇ! ಕೆಲವು ಅಪಾಯಗಳಿಂದ ನಮ್ಮನ್ನೂ ರಕ್ಷಿಸಲು ತೆರೆದ ಕಣ್ಣಿಂದ ನೋಡುತ್ತಾ ಮನದಲ್ಲೇ ಬೇಡುವ, ಎದೆ ತುಂಬ ಧಾವಂತದಿಂದ ನಮ್ಮ ದಿಕ್ಕನ್ನೇ ನೋಡಿಕೊಳ್ಳುವ, ಆತಂಕಪಡುವ, ಹೃದಯಗಳು ಇದ್ದಾವಲ್ಲ. ನಾವೂ ಕೂಡ ಜೀವನದಲ್ಲಿ ಶೋ ಮುಗಿಸಿ ಮನೆಗೆ ಬಂದಾಗ ಉಸ್ಸಪ್ಪಾ ಎಂದು ಉಸಿರುಬಿಡುವ ಜೀವಗಳು ಇರಲೇಬೇಕಲ್ಲ! ಆ ಜೀವಜಾಲಕ್ಕೆ ಒಮ್ಮೆ ಶರಣೆನ್ನಿ, ಹಾಗೆ ಶರಣೆಂದರೆ ನಮ್ಮ ಎದೆಯಲ್ಲೂ ಮಹಾದೇವಿ ಅಕ್ಕ ಹುಟ್ಟುತ್ತಾಳೆ. ತಂತಿಯ ಮೇಲೆ ನಡೆವ ಆ ಮಗುವಿನ ತಾಯಿ ಡೋಲು ಬಾರಿಸುತ್ತಾಳೆ. ನೋವು ನುಂಗಿ ನಗುವ ಕಲೆ ಕರಗತವಾಗಿ ಮೈಗಂಟಿಕೊಳ್ಳುತ್ತದೆ. ಏನಂತೀರಿ?

ಮತ್ತೆ ವಿಕ್ರಮ್ ಲ್ಯಾಂಡರ್ ಅನ್ನು ನಿದ್ರೆಗೆ ಜಾರಿಸಿದ ಇಸ್ರೋ ವಿಜ್ಞಾನಿಗಳು!

ಬೆಂಗಳೂರು: ಚಂದ್ರನ ಮೇಲಿರುವ ವಿಕ್ರಮ್ ಲ್ಯಾಂಡರ್‌ನ 'ಹಾಪಿಂಗ್' ಪರೀಕ್ಷೆಯ ಮಹತ್ವದ ಯಶಸ್ವಿನ ಬಳಿಕ ಇದೀಗ ಇಸ್ರೋ ವಿಜ್ಞಾನಿಗಳು ಮತ್ತೆ ಲ್ಯಾಂಡರ್ ಅನ್ನು ನಿದ್ರೆಗೆ ಜಾರಿಸಿದ್ದಾರೆ.

ಇಸ್ರೋ ತನ್ನ ವಿಕ್ರಮ್ ಲ್ಯಾಂಡರ್‌ನ ಹಾಪ್ ಪರೀಕ್ಷೆಯ ಬಳಿಕ ಇದೀಗ ಮತ್ತೆ ವಿಕ್ರಮ್ ಲ್ಯಾಂಡರ್ ಅನ್ನು ಸ್ಲೀಪಿಂಗ್ ಮೋಡ್‌ಗೆ ಹೊಂದಿಸಿದೆ. ಇಂದು ಬೆಳಗ್ಗೆ ಸುಮಾರು 8 ಗಂಟೆ ವೇಳೆ ವಿಕ್ರಮ್ ಲ್ಯಾಂಡರ್ ಅನ್ನು ಸ್ಲೀಪಿಂಗ್ ಮೋಡ್‌ಗೆ ಹಾಕಲಾಗಿದೆ ಎಂದು ಇಸ್ರೋ ಟ್ವೀಟ್ ಮಾಡಿದೆ.

ಈ ಕಾರ್ಯಾಚರಣೆಗೂ ಮೊದಲು ವಿಕ್ರಮ್ ಲ್ಯಾಂಡರ್ ಅನ್ನು ಮತ್ತೊಂದು ಮಹತ್ವದ ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು. ಇಂದು ಮುಂಜಾನೆ, ವಿಕ್ರಮ್ ಲ್ಯಾಂಡರ್ ಚಂದ್ರನ ಮೇಲ್ಮೈಯಲ್ಲಿ ಮತ್ತೆ ಸಾಫ್ಟ್ ಲ್ಯಾಂಡಿಂಗ್ ಮಾಡಿದಾಗ ಹಾಪ್ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಆಜ್ಞೆಯ ಮೇರೆಗೆ ಅದು (ವಿಕ್ರಮ್ ಲ್ಯಾಂಡರ್) ಎಂಜಿನ್‌ಗಳನ್ನು ಹಾರಿಸಿತು, ನಿರೀಕ್ಷೆಯಂತೆ ಸುಮಾರು 40 ಸೆಂ.ಮೀ ಎತ್ತರಕ್ಕೆ ಏರಿತು ಮತ್ತು 30 ರಿಂದ 40 ಸೆಂ.ಮೀ ದೂರದಲ್ಲಿ ಸುರಕ್ಷಿತವಾಗಿ ಇಳಿಯಿತು. ಆ ಮೂಲಕ ವಿಕ್ರಮ್ ಲ್ಯಾಂಡರ್‌ನ ChaSTE, RAMBHA-LP ಮತ್ತು ILSA ಪೇಲೋಡ್‌ಗಳ ಇನ್-ಸಿಟು ಪ್ರಯೋಗಗಳನ್ನು ಹೊಸ ಸ್ಥಳದಲ್ಲಿ ನಡೆಸಲಾಗುತ್ತದೆ. ಪ್ರಸ್ತುತ ಪೇಲೋಡ್‌ಗಳನ್ನು ಈಗ ಸ್ವಿಚ್ ಆಫ್ ಮಾಡಲಾಗಿದೆ. ಲ್ಯಾಂಡರ್ ರಿಸೀವರ್‌ಗಳನ್ನು ಆನ್ ಮಾಡಲಾಗಿದೆ. ವಿಕ್ರಮ್ ಲ್ಯಾಂಡರ್ ಸ್ಲೀಪಿಂಗ್ ಮೋಡ್‌ನಲ್ಲಿದ್ದು, ಅದರ ರಿಸೀವರ್‌ಗಳು ಮಾತ್ರ ಕಾರ್ಯ ನಿರ್ವಹಿಸುತ್ತಿವೆ. ಚಂದ್ರನಲ್ಲಿ ರಾತ್ರಿಯಾದ ಕಾರಣ ಅಲ್ಲಿ ರೋವರ್ ಮತ್ತು ಲ್ಯಾಂಡರ್‌ನ ಸರಬರಾಜಾಗುತ್ತಿದ್ದ ಸೌರಶಕ್ತಿ ಸ್ಥಗಿತವಾಗಿದೆ. ಹೀಗಾಗಿ ಅವುಗಳ ಬ್ಯಾಟರಿ ಖಾಲಿಯಾಗದಂತೆ ನೋಡಿಕೊಂಡು ಉಭಯ ನೌಕೆಗಳನ್ನು ಸ್ಲೀಪಿಂಗ್ ಮೋಡ್‌ನಲ್ಲಿರಿಸಲಾಗಿದೆ. ಸೆಪ್ಟೆಂಬರ್ 22, 2023 ರ ಸುಮಾರಿಗೆ ಚಂದ್ರನಲ್ಲಿ ಸೂರ್ಯ ಬೆಳಕು ಪ್ರವೇಶ ಮಾಡಲಿದ್ದು ಆಗ ಮತ್ತೆ ರೋವರ್ ಮತ್ತು ಲ್ಯಾಂಡರ್ ಕಾರ್ಯ ನಿರ್ವಹಿಸುವ ಸಾಧ್ಯತೆ ಇದೆ ಎಂದು ಇಸ್ರೋ ಹೇಳಿದೆ.



ವಿಜ್ಞಾನಿಗಳಲ್ಲಿ ಹೊಸ ಆಶಾಭಾವ: ನಿನ್ನೆಯಷ್ಟೇ ಚಂದ್ರನ ಮೇಲಿರುವ ವಿಕ್ರಮ್ ಲ್ಯಾಂಡರ್ ಮತ್ತು ಪ್ರಜ್ಞಾನ್ ರೋವರ್‌ಗಳನ್ನು ಸ್ಲೀಪಿಂಗ್ ಮೋಡ್‌ನಲ್ಲಿರಿಸಿದ್ದ ಇಸ್ರೋ ವಿಜ್ಞಾನಿಗಳು ಇಂದು ಮಹತ್ವದ ಕಾರ್ಯಾಚರಣೆ ನಡೆಸಿ ವಿಕ್ರಮ್ ಲ್ಯಾಂಡರ್‌ನನ್ನು ಮಾತ್ರ ಎಚ್ಚರಿಸಿ 'ಹಾಪ್' ಪರೀಕ್ಷೆ ನಡೆಸಿದ್ದಾರೆ. ಈ ಹಾಪ್ ಪರೀಕ್ಷೆಗೆ ಮೊದಲೇ ವಿಕ್ರಮ್ ಲ್ಯಾಂಡರ್ ಅನ್ನು ಸ್ಲೀಪಿಂಗ್ ಮೋಡ್‌ನಲ್ಲಿರಿಸಬೇಕಾದರೂ ಅದಕ್ಕೆ ಕಿಕ್ ಸ್ಟಾರ್ಟ್ ಮಾಡಿ ಅದರ ಎಂಜಿನ್‌ಗಳನ್ನು ಕೆಲ ಸೆಕೆಂಡ್‌ಗಳ ಕಾಲ ಹೊತ್ತಿಸಿ ಅದರ ಸ್ಥಾನ ಪಲ್ಲಟ ಮಾಡಲಾಗಿತ್ತು. ಈ ಪರೀಕ್ಷೆಯಲ್ಲಿ ವಿಕ್ರಮ್ ಲ್ಯಾಂಡರ್ ಯಶಸ್ವಿಯಾಗಿದ್ದು, ಎಂಜಿನ್ ಉರಿಯುತ್ತಿದ್ದಂತೆಯೇ ಸುಮಾರು 40 ರಿಂದ 50 ಸೆಂ.ಮೀ ಮೇಲಕ್ಕೆ ಹಾರಿದ ಲ್ಯಾಂಡರ್ ಬಳಿಕ ಸುರಕ್ಷಿತವಾಗಿ ಮತ್ತೆ ಚಂದ್ರನ ಮೇಲೆ ಲ್ಯಾಂಡ್ ಆಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕರ್ನಾಟಕ ಸುವರ್ಣ ಸಂಭ್ರಮ ವರ್ಷವಿಡೀ ಅದ್ದೂರಿ ಆಚರಣೆ

ಸೆ.13 ಇಲ್ಲವೇ 14ರಂದು ಉನ್ನತ ಮಟ್ಟದ ಸಭೆಯಲ್ಲಿ ತೀರ್ಮಾನ

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಮಾಹಿತಿ

- ವಿಶೇಷ ಲೋಗೊ ಬಿಡುಗಡೆ
- ಅಧಿಕಾರಿಗಳ ಬದಲು, ಜನಸಾಮಾನ್ಯರ ಸಂಭ್ರಮ
- ಪರ ಭಾಷಿಕರಿಗೆ ಕನ್ನಡ ಕಲಿಯಲು ವಿಶೇಷ ಆ್ಯಪ್
- ಅಕಾಡೆಮಿಗಳಿಗೆ ಶೀಘ್ರ ನೇಮಕ

ಮೈಸೂರು,ಸೆ.4(ಬಿಎಲ್‌ಯು)– ಕರ್ನಾಟಕ ಸುವರ್ಣ ಸಂಭ್ರಮವನ್ನು ವರ್ಷವಿಡೀ ಅದ್ದೂರಿಯಿಂದ ಆಚರಣೆ ಮಾಡುವ ಬಗ್ಗೆ ರೂಪುರೇಷೆ ಸಿದ್ಧಪಡಿಸಲಾಗುತ್ತಿದ್ದು, ಸೆಪ್ಟೆಂಬರ್ 13 ಅಥವಾ 14ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯುವ ಉನ್ನತ ಮಟ್ಟದ ಸಭೆಯಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ಮಾಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ತಿಳಿಸಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರು ರಂಗ ಮಂದಿರದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ರಾಜ್ಯವನ್ನು 1973, ಅಕ್ಟೋಬರ್ 20 ರಂದು ಕರ್ನಾಟಕ ಎಂದು ಮರು ನಾಮಕರಣ ಮಾಡಲಾಯಿತು. ಈಗ ಕರ್ನಾಟಕ ಎಂದು ನಾಮಕರಣಗೊಂಡ 50 ವರ್ಷದ ಸುವರ್ಣ ಸಂಭ್ರಮದಲ್ಲಿ ಸರ್ಕಾರ ವಿಶೇಷ ಕಾರ್ಯಕ್ರಮ ರೂಪಿಸುತ್ತಿದೆ ಎಂದು ಹೇಳಿದರು.

ಅಂದಿನ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಮೈಸೂರು ಮೂಲದವರಾದರೂ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರು ನಾಮಕರಣ ಮಾಡಿದರು. ಈಗ 50 ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ನವೆಂಬರ್ 1ರಂದು ಮಾತ್ರವಲ್ಲದೆ ವರ್ಷವಿಡೀ ಹಲವು ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಈ ಸಂಬಂಧ ಅಂತಿಮ ತೀರ್ಮಾನ ಕೈಗೊಳ್ಳಲು ಸೆಪ್ಟೆಂಬರ್ 13 ಅಥವಾ 14ರಂದು ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ಆಯೋಜನೆ ಮಾಡಲಾಗಿದೆ ಎಂದು ಸಚಿವ ಶಿವರಾಜ್ ತಂಗಡಗಿ ತಿಳಿಸಿದರು.

ಕರ್ನಾಟಕದ ನಾಲ್ಕು ಕಂದಾಯ ವಿಭಾಗಗಳಲ್ಲಿ ಸಾಹಿತಿಗಳು, ಕನ್ನಡ ಪರ ಹೋರಾಟಗಾರು ಸೇರಿದಂತೆ ಎಲ್ಲರಿಂದಲೂ ಅಭಿಪ್ರಾಯ, ಸಲಹೆ ಹಾಗೂ ಮಾರ್ಗದರ್ಶನ ಪಡೆಯಲಾಗಿದೆ. ಈಗಾಗಲೇ ಬೆಳಗಾವಿ, ಕಲ್ಬುರ್ಗಿ ಹಾಗೂ ಬೆಂಗಳೂರಿನ ಕಂದಾಯ ವಿಭಾಗದ ಸಭೆ ನಡೆಸಿದ್ದು, ಇಂದು ಮೈಸೂರಿನಲ್ಲಿ ಕೂಡ ಸಭೆ ನಡೆಸಿದ್ದೇನೆ. ಮೈಸೂರು ವಿಭಾಗದ 8 ಜಿಲ್ಲೆಗಳ ಸಾಹಿತಿಗಳು, ಕನ್ನಡಪರ ಹೋರಾಟಗಾರರಿಂದ ಸಲಹೆ ಪಡೆದಿದ್ದೇನೆ ಎಂದರು.

'ಹೆಸರಾಯಿತು ಕರ್ನಾಟಕ, ಉಸಿರಾಗಲಿ ಕನ್ನಡ' ಘೋಷವಾಕ್ಯದಡಿ ಕಾರ್ಯಕ್ರಮ ನಡೆಸುವ ಬಗ್ಗೆ ಈಗಾಗಲೇ ಆಯವ್ಯಯದಲ್ಲಿ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲರ ಸಲಹೆ ಕ್ರೋಢೀಕರಿಸಿ ಕರ್ನಾಟಕ ಸುವರ್ಣ ಸಂಭ್ರಮದ ವಿಶೇಷ ಲೋಗೊ ಕೂಡ ಬಿಡುಗಡೆ ಮಾಡಲಾಗುವುದು. ಕರ್ನಾಟಕ ಹೆಸರು ನಾಮಕರಣಗೊಳ್ಳಲು ಕಾರಣರಾದ ದೇವರಾಜ ಅರಸ್ ಪ್ರತಿಮೆಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪನೆ ಮಾಡಲಾಗುವುದು. ಕುವೆಂಪು ಅವರ ಸಾಹಿತ್ಯವನ್ನು ಕೇಂದ್ರವಾಗಿಟ್ಟುಕೊಂಡು ಕಾರ್ಯಕ್ರಮ ಆಯೋಜನೆ ಮಾಡಲಾಗುವುದು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗಿಯಾಗಿದ್ದ ಗಣ್ಯರಿಗೆ ಸನ್ಮಾನ ಹಾಗೂ ಗಡಿನಾಡಿನಲ್ಲಿ ಕನ್ನಡ ಭಾಷೆಯ ಜಾಗೃತಿ ಸೇರಿದಂತೆ ಹಲವು ಕಾರ್ಯಕ್ರಮ ರೂಪಿಸಲಾಗುವುದು ಎಂದರು.

ಕರ್ನಾಟಕ ಸುವರ್ಣ ಸಂಭ್ರಮ ಅಧಿಕಾರಿಗಳ ಸಂಭ್ರಮವಾಗದೆ, ಜನ ಸಾಮಾನ್ಯರ ಸಂಭ್ರಮವಾಗಬೇಕು ಎಂದು ಈಗಾಗಲೇ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ಕರ್ನಾಟಕದ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರೊಟ್ಟಿಗೆ ಸೇರಿ ಕರ್ನಾಟಕ ಸುವರ್ಣ ಸಂಭ್ರಮವನ್ನು ಅದ್ದೂರಿಯಿಂದ ಆಚರಣೆ ಮಾಡಲಾಗುವುದು. ಕರ್ನಾಟಕ ಸುವರ್ಣ ಸಂಭ್ರಮ ಆಚರಣೆಗೆ ಎಷ್ಟು ಹಣ ಬೇಕಾಗುತ್ತದೆ ಎಂದು ಇನ್ನು ತೀರ್ಮಾನ ಮಾಡಿಲ್ಲ. ಈ ಕಾರ್ಯಕ್ರಮಗಳಿಗಾಗಿ ಸರ್ಕಾರದಿಂದ ಪ್ರತ್ಯೇಕ ಹಣ ದೊರೆಯಲಿದೆ ಎಂದು ಸ್ಪಷ್ಟಪಡಿಸಿದರು.

ಹೊರ ರಾಜ್ಯದಿಂದ ಬಂದವರಿಗೆ ಕನ್ನಡ ಭಾಷೆ ಕಲಿಯುವ ಆಸಕ್ತಿ ಇರುತ್ತದೆ. ಆದರೆ ಅದರ ವಿಧಾನ ತಿಳಿದಿರುವುದಿಲ್ಲ. ಈ ಕಾರಣದಿಂದ ಕನ್ನಡ ಕಲಿಕೆಗೆ ವಿಶೇಷ ಆ್ಯಪ್ ಬಿಡುಗಡೆ ಮಾಡಲಾಗುವುದು. ಕನ್ನಡ ಕಲಿಕೆಗೆ ತಂತ್ರಾಂಶ ಪರಿಚಯಿಸುವ ಸಂಬಂಧ ಈಗಾಗಲೇ ಅಧಿಕಾರಿಗಳ ಜೊತೆ ಸಭೆ ಕೂಡ ನಡೆಸಿದ್ದೇನೆ. ಈ ಬಾರಿಯ ಬಜೆಟ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 247 ಕೋಟಿ ರೂ. ನೀಡಲಾಗಿದೆ. ಕನ್ನಡ ಭಾಷೆಯ ಅಭಿವೃದ್ಧಿಗೆ ಮತ್ತಷ್ಟು ಹಣ ಕೊಡಲು ಸಿದ್ದರಾಮಯ್ಯ ಉದಾರ ಮನಸು ಹೊಂದಿದ್ದಾರೆ ಎಂದು ಶಿವರಾಜ್ ತಂಗಡಗಿ ಹೇಳಿದರು.

ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಮುಂದಿನ ಪ್ರಕ್ರಿಯೆಗಳು ಕೇಂದ್ರ ಸರ್ಕಾರದಿಂದ ನಡೆಯಬೇಕಿದೆ. ಇದಕ್ಕಾಗಿ ಕೇಂದ್ರ ಸರ್ಕಾರ ಕಾಳಜಿ ತೋರಿಸುತ್ತಿಲ್ಲ. ನಮ್ಮ ಕರ್ನಾಟಕದ 25 ಬಿಜೆಪಿ ಸಂಸದರಿಗೆ ಪ್ರಧಾನಿ ನರೇಂದ್ರ ಮೋದಿ ಮುಂದೆ ನಿಂತು ಕರ್ನಾಟಕದ ಬೇಡಿಕೆಗಳನ್ನು ಈಡೇರಿಸುವಂತೆ ಕೇಳುವ ಧೈರ್ಯವಿಲ್ಲ ಎಂದು ಶಿವರಾಜ್ ತಂಗಡಗಿ ವ್ಯಂಗ್ಯವಾಡಿದರು.

ಮೈಸೂರಿನ ರಂಗಾಯಣಕ್ಕೆ ನಿರ್ದೇಶಕರ ನೇಮಕ ಸೇರಿದಂತೆ ಎಲ್ಲಾ ಅಕಾಡೆಮಿಗಳಿಗೆ ಅಧ್ಯಕ್ಷರ ನೇಮಕಾತಿ ಸಂಬಂಧ ಶೀಘ್ರದಲ್ಲೆ ತೀರ್ಮಾನ ಮಾಡಲಾಗುವುದು. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದು 3 ತಿಂಗಳಾಗಿದ್ದು, ಕಾಲಾವಕಾಶ ಬೇಕಾಗಿದೆ. ಆದರೂ ಕೆಲವೇ ದಿನಗಳಲ್ಲಿ ಈ ಬಗ್ಗೆ ತೀರ್ಮಾನ ಮಾಡಲಾಗುವುದು. ಮೈಸೂರಿನ ರಂಗಾಯಣಕ್ಕೆ ನಿರ್ದೇಶಕರು ಇಲ್ಲದಿದ್ದರೂ ಇಲ್ಲಿನ ಯಾವುದೇ ಕೆಲಸ ಕಾರ್ಯಗಳಿಗೂ ತೊಡಕಾಗದಂತೆ ಕಡತಗಳನ್ನು ಶೀಘ್ರ ವಿಲೇವಾರಿ ಮಾಡುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ್ ಹಿರೇಮಠ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಚಿವ ಶಿವರಾಜ್ ತಂಗಡಗಿ ಮಾತನಾಡಿದರು.

ಕಾಂಗ್ರೆಸ್‌ನ ಬರೀ ನಾಲ್ವರು ಶಾಸಕರ ಕರಕೊಂಡು ಹೋಗ್ಲಿ ನೋಡೋಣ...

ಬಿ.ಎಲ್.ಸಂತೋಷ್‌ಗೆ ಸಚಿವ ಶಿವರಾಜ್ ತಂಗಡಗಿ ಸವಾಲು

ಮೈಸೂರು, ಸೆ.4(ಬಿಎಲ್‌ಯು)– ಕಾಂಗ್ರೆಸ್ ಪಕ್ಷದ 40 ಶಾಸಕರಲ್ಲ, ನಾಲ್ವರು ಶಾಸಕರನ್ನು ಕರೆದುಕೊಂಡು ಹೋಗಲಿ ನೋಡೋಣ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್‌ಗೆ ಸವಾಲು ಹಾಕಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಿಜೆಪಿ ಮುಳುಗುವ ದೋಣಿಯಾಗಿದ್ದು, ಅಲ್ಲಿಗೆ ಯಾರು ತಾನೆ ಹತ್ತುತ್ತಾರೆ ಎಂದು ಗೇಲಿ ಮಾಡಿದರು. ಕಾಂಗ್ರೆಸ್ ಪಕ್ಷದ 40 ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ ಎಂಬ ಸಂತೋಷ್ ಹೇಳಿಕೆ ಶುದ್ಧ ಸುಳ್ಳು. ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಅಲ್ಲೇ ಇದ್ದ ನನಗೆ ಬಿಜೆಪಿಯವರ ಬಗ್ಗೆ ಚೆನ್ನಾಗಿ ಗೊತ್ತಿದೆ. ಅವರ ಸಹವಾಸ ಮಾಡಿದ ನನ್ನನ್ನು ಬೀದಿಗೆ ಬಿಟ್ಟರು. ಉಪಯೋಗಿಸಿ ಬಿಸಾಡುವ ಧೋರಣೆ ಹೊಂದಿರುವ ಬಿಜೆಪಿಯವರ ಒಳಮರ್ಮ ಎಲ್ಲರಿಗೂ ತಿಳಿದಿದೆ. ಆದ ಕಾರಣ ಕಾಂಗ್ರೆಸ್ ಪಕ್ಷದ ಯಾರೂ ಬಿಜೆಪಿಗೆ ಹೋಗುವುದಿಲ್ಲ ಎಂದರು.

ಈಗ ನಮ್ಮ ಪಕ್ಷಕ್ಕೆ ಬರುವವರ ಸಂಖ್ಯೆ ಹೆಚ್ಚಿದೆಯೇ ಹೊರತು, ನಮ್ಮ ಪಕ್ಷದಿಂದ ಬೇರೆ ಪಕ್ಷಕ್ಕೆ ಯಾರೂ ಹೋಗುವುದಿಲ್ಲ. ಎಲ್ಲರೂ ಪ್ರೀತಿ ವಿಶ್ವಾಸದಿಂದ ಇರುವುದು ಇದಕ್ಕೆ ಕಾರಣ ಎಂದು ಸ್ಪಷ್ಟಪಡಿಸಿದರು. ಇನ್ನು ನಮಗೆ ಆಪರೇಷನ್ ಹಸ್ತ ಮಾಡುವ ಪರಿಸ್ಥಿತಿ ಬಂದಿಲ್ಲ. ನಮಗೆ ಸ್ಪಷ್ಟ ಬಹುಮತ ಇರುವಾಗ ನಾವೇಕೆ ಆಪರೇಷನ್ ಹಸ್ತ ಮಾಡಬೇಕು. ನಮ್ಮ ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಕೆಲವರು ಕಾಂಗ್ರೆಸ್ ಸೇರುವುದಾದರೆ ನಮ್ಮ ಸ್ವಾಗತವಿದೆ ಎಂದು ಹೇಳಿದರು.

ಪ್ರಧಾನಿ ಮೋದಿ ಹಾಗೂ ಗೃಹಸಚಿವ ಅಮಿತ್ ಶಾ ಕರ್ನಾಟಕದ ಗಲ್ಲಿ ಗಲ್ಲಿ ಸುತ್ತಿದರೂ 66 ಸ್ಥಾನಗಳಲ್ಲಿ ಮಾತ್ರ ಗೆಲ್ಲಲು ಸಾಧ್ಯವಾಯಿತು. ಕರ್ನಾಟಕದಲ್ಲಿ ಚುನಾವಣಾ ಚಾಣಕ್ಯನ ಆಟ ನಡೆಯುವುದಿಲ್ಲ ಎಂದು ಶಿವರಾಜ್ ತಂಗಡಗಿ ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು. ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ. ಪ್ರತಿಯೊಬ್ಬರ ಬ್ಯಾಂಕ್ ಅಕೌಂಟ್‌ಗೆ 15 ಲಕ್ಷ ರೂಪಾಯಿ ಹಾಕುತ್ತೇವೆ ಎಂದೆಲ್ಲಾ ಬುರುಡೆ ಬಿಟ್ಟರು. ಆದರೆ ನಾವು ನುಡಿದಂತೆ ನಡೆದಿದ್ದೇವೆ. ಅಧಿಕಾರಕ್ಕೆ ಬಂದ ಮೂರು ತಿಂಗಳ ಅವಧಿಯಲ್ಲಿ ನಾಲ್ಕು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದೇವೆ ಎಂದು ಶಿವರಾಜ್ ತಂಗಡಗಿ ಹೇಳಿದರು.

ಅಧಿಕಾರಿಗಳು ತಮ್ಮ ಮನವಿಗೆ ಸ್ಪಂದಿಸುತ್ತಿಲ್ಲ ಎಂದು ಶಾಸಕ ಬಸವರಾಜ ರಾಯರೆಡ್ಡಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವನಾಗಿರುವ ನಾನು ಬಸವರಾಜ ರಾಯರೆಡ್ಡಿ ಅವರೊಡನೆ ಚರ್ಚೆ ಮಾಡಿ ಸಮಸ್ಯೆ ಪರಿಹಾರ ಮಾಡುತ್ತೇನೆ ಎಂದರು. ಕೊಪ್ಪಳದ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ವಿಚಾರವಾಗಿ ಯಾವುದೇ ಗೊಂದಲವಿಲ್ಲ. ಹಲವು ಆರೋಪಗಳಿರುವ ಆ ಅಧಿಕಾರಿ ನಮ್ಮ ಜಿಲ್ಲೆಗೆ ಬೇಡ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪಗೆ ಪತ್ರ ಬರೆದಿರುವುದು ನಿಜ. ಪತ್ರ ಬರೆದಾಕ್ಷಣ ನಮ್ಮಲ್ಲಿ ಸಮನ್ವಯತೆ ಇಲ್ಲ ಎಂಬುದು ಸುಳ್ಳು. ನಾನು ಬರೆದಿರುವ ಪತ್ರಕ್ಕೆ ಡಾ.ಮಹದೇವಪ್ಪ ಸ್ಪಂದಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಶಿವರಾಜ್ ತಂಗಡಗಿ ಸ್ಪಷ್ಟಪಡಿಸಿದರು.

ಸಚಿವರಾದ ನಂತರ ಮೈಸೂರಿಗೆ ಮೊದಲ ಬಾರಿಗೆ ಆಗಮಿಸಿದ್ದ ಶಿವರಾಜ್ ತಂಗಡಗಿ ಅವರನ್ನು ಕಾಂಗ್ರೆಸ್ ಭವನದಲ್ಲಿ ಇಂದು ಸನ್ಮಾನಿಸಲಾಯಿತು. ಇದೇ ವೇಳೆ ಮಾತನಾಡಿದ ಶಿವರಾಜ್ ತಂಗಡಗಿ, ನಿಮ್ಮ ಯಾವುದೇ ಅಹವಾಲು ಇದ್ದರೂ ನನಗೆ ಸಲ್ಲಿಸಿ. ಅದನ್ನು ಪರಿಹಾರ ಮಾಡಲು ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ಸೀತಾರಾಮು ಸೇರಿದಂತೆ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಧಾರ್ಮಿಕ ಭಾವನೆಗೆ ಧಕ್ಕೆ

ನ್ಯಾಯಾಲಯದಲ್ಲಿ ತಮಿಳುನಾಡು ಸಿಎಂ ಸ್ಟಾಲಿನ್, ಸಚಿವ ಉದಯನಿಧಿ ವಿರುದ್ಧ ದೂರು ದಾಖಲು

ಪಟ್ನಾ: ಸನಾತನ ಧರ್ಮ ನಿರ್ಮೂಲನೆ ಕುರಿತು ವಿವಾದಾತ್ಮಕ ಹೇಳಿಕೆ ನೀಡಿರುವ ಆರೋಪದ ಮೇಲೆ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಹಾಗೂ ಅವರ ಪುತ್ರ, ಸಚಿವ ಉದಯನಿಧಿ ವಿರುದ್ಧ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಲಾಗಿದೆ.



ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ವಕೀಲ ಸುಧೀರ್ ಕುಮಾರ್ ಓಜಾ ಎಂಬುವವರು ಬಿಹಾರದ ಮುಜಾಫರ್‌ಪುರ ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಜಿಲ್ಲಾ ಮ್ಯಾಜಿಸ್ಟ್ರೇಟ್ ಪಂಕಜ್ ಕುಮಾರ್ ಲಾಲ್ ಅವರಿಗೆ ದೂರು ಸಲ್ಲಿಸಿದ ವಕೀಲ ಸುಧೀರ್‌ಕುಮಾರ್, ತಮಿಳುನಾಡು ಸಿಎಂ ಸ್ಟಾಲಿನ್ ಹಾಗೂ ಸಚಿವ ಉದಯನಿಧಿ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ಆಗ್ರಹಿಸಿದ್ದಾರೆ. ರಾಜಕೀಯ ನಾಯಕರು ಹಾಗೂ ಸೆಲೆಬ್ರಿಟಿಗಳ ವಿರುದ್ಧ ದಾವೆ ಹೂಡುವ ಮೂಲಕ ವಕೀಲ ಸುಧೀರ್ ಕುಮಾರ್ ಖ್ಯಾತಿ ಪಡೆದಿದ್ದಾರೆ.

ಡಿಎಂಕೆ ಯುವ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ತಮಿಳುನಾಡು ಸರ್ಕಾರದಲ್ಲಿ ಕ್ರೀಡಾ ಸಚಿವರಾಗಿರುವ ಉದಯನಿಧಿ ಸ್ಟಾಲಿನ್ ಪ್ರಗತಿಪರ ಲೇಖಕರು ಹಾಗೂ ಕಲಾವಿದರು ಆಯೋಜನೆ ಮಾಡಿದ್ದ ಸನಾತನ ಧರ್ಮ ನಿರ್ಮೂಲನಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಅವರು ಸನಾತನ ಧರ್ಮ ಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿದೆ. ಮಲೇರಿಯಾ, ಡೆಂಘಿ, ಕೋವಿಡ್‌ನಂತಹ ಸೋಂಕನ್ನು ವಿರೋಧಿಸಬಾರದು. ಬದಲಿಗೆ ಅವುಗಳನ್ನು ನಿರ್ಮೂಲನೆ ಮಾಡಬೇಕು. ಅದೇ ರೀತಿ ನಾವು ಸನಾತನ ಧರ್ಮವನ್ನು ವಿರೋಧಿಸುವ ಬದಲು ನಿರ್ಮೂಲನೆ ಮಾಡಬೇಕು ಎಂದು ಸಮಾವೇಶದಲ್ಲಿ ನೀಡಿದ ಹೇಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು ಮತ್ತು ಹೊಸ ವಿವಾದ ಹುಟ್ಟು ಹಾಕಿತ್ತು.

ತುಮಕೂರಲ್ಲಿ ಪತ್ರಿಕಾ ವಿತರಕರ ದಿನಾಚರಣೆ

ಮೈಸೂರು ಪತ್ರಿಕಾ ವಿತರಕರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು,ಸೆ.4(ಎಸ್‌ಬಿಡಿ)– ತುಮಕೂರಿನಲ್ಲಿ ನಡೆದ ಪತ್ರಿಕಾ ವಿತರಕರ ದಿನಾಚರಣೆಯಲ್ಲಿ ಮೈಸೂರಿನ ಪತ್ರಿಕಾ ವಿತರಕರ ಪ್ರತಿಭಾವಂತ ಮಕ್ಕಳನ್ನು ಪುರಸ್ಕರಿಸಲಾಯಿತು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಮತ್ತು ತುಮಕೂರು ಜಿಲ್ಲಾ ಪತ್ರಿಕೆ ಹಂಚಿಕೆದಾರರ ಸಂಘದ ಸಹಯೋಗದಲ್ಲಿ ಸೋಮವಾರ ಆಯೋಜಿಸಿದ್ದ ಅದ್ದೂರಿ ಕಾರ್ಯಕ್ರಮದಲ್ಲಿ ಮೈಸೂರಿನ ಭವಾನಿ, ದೀಕ್ಷಾ ಹಾಗೂ ಶರಣ್ಯ ಸೇರಿದಂತೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಇದೇ ವೇಳೆ ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್.ಹೋಮದೇವ ಸೇರಿದಂತೆ ಒಕ್ಕೂಟದ ಎಲ್ಲಾ ಜಿಲ್ಲಾಧ್ಯಕ್ಷರುಗಳನ್ನೂ ಗೌರವಿಸಲಾಯಿತು. ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ, ಮೈಸೂರು ಉಪಾಧ್ಯಕ್ಷ ಉಪಾಧ್ಯಕ್ಷ ಎಂ.ನಾಗರಾಜು, ಖಜಾಂಚಿ ಸಿ.ಡಿ.ಹರೀಶ್, ರವಿ ಗಾಂಧಿನಗರ, ರಾಜಶೇಖರ್, ಪವನ್, ಮಂಜುನಾಥ, ಶಿವಣ್ಣ, ಎಲ್.ರಮೇಶ್, ಗೋವಿಂದ ಶೆಟ್ಟಿ, ಪಾರ್ಶ್ವನಾಥ ಮತ್ತಿತರರು ಭಾಗವಹಿಸಿದ್ದರು.



ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಧಿಕೃತ ನಿವಾಸ ಕಾವೇರಿಗೆ ಪಾದಾರ್ಪಣೆ ಮಾಡಿದ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಶುಭ ಕೋರಿದರು. ಈ ವೇಳೆ ಕಾಂಗ್ರೆಸ್ ಯುವ ಮುಖಂಡ ಶಿವಸಾಗರ್ ಇದ್ದಾರೆ.

ಇಂದು ಶಿಕ್ಷಕರ ದಿನಾಚರಣೆ

ಮೈಸೂರು, ಸೆ.4– ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಸೆ.5ರಂದು ಬೆಳಗ್ಗೆ 10 ಗಂಟೆಗೆ ಕಲಾಮಂದಿರದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನದ ಅಂಗವಾಗಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಹಾಗೂ ನಿವೃತ್ತ ಶಿಕ್ಷಕರಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ನಾಳೆ ಮಾಂಸ ಮಾರಾಟ ನಿಷೇಧ

ಮೈಸೂರು,ಸೆ.4–ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಸೆ.6ರಂದು ಮೈಸೂರು ಪಾಲಿಕೆಗೆ ಸೇರಿದ ವಿವಿಧ ಮಾಂಸದ ಅಂಗಡಿಗಳನ್ನು, ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ಮೈಸೂರು ನಗರದಲ್ಲಿ ನಿಷೇಧಿಸಲಾಗುತ್ತಿದೆ ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಕಾಮಗಾರಿಗೆ ಶಾಸಕ ಶ್ರೀವತ್ಸ ಗುದ್ದಲಿ ಪೂಜೆ

ಮೈಸೂರು,ಸೆ.4(ಎಸ್‌ಬಿಡಿ)– ಕೃಷ್ಣರಾಜ ಕ್ಷೇತ್ರದ ಅಗ್ರಹಾರ ವಾರ್ಡ್ ನಂ.51ರಲ್ಲಿ ಒಟ್ಟು 4 ಕೋಟಿ ರೂ. ಅಂದಾಜು ಮೊತ್ತದ ವಿವಿಧ ಕಾಮಗಾರಿಗೆ ಶಾಸಕ ಟಿ.ಎಸ್. ಶ್ರೀವತ್ಸ ಗುದ್ದಲಿ ಪೂಜೆ ಮೂಲಕ ಚಾಲನೆ ನೀಡಿದರು.

ಹರಿಶ್ಚಂದ್ರ ಘಾಟ್ ರಸ್ತೆಯಲ್ಲಿ ಸುಡುವ ಸ್ಮಶಾನದ ಅಭಿವೃದ್ಧಿ, ಕಂಸಾಳೆ ಮಹದೇವಯ್ಯ ವೃತ್ತದಿಂದ ಪಾತಾಳಾಂಜನೇಯ ದೇವಸ್ಥಾನದವರೆಗೆ ಒಳಚರಂಡಿ, ರಾಮಾನುಜ ರಸ್ತೆ 7ನೇ ಕ್ರಾಸ್‌ನಲ್ಲಿ ಮಳೆ ನೀರು ಚರಂಡಿ, ಪಾತಾಳಾಂಜನೇಯ ದೇವಸ್ಥಾನದಿಂದ ಜೆಎಸ್‌ಎಸ್ ಮಹಾವಿದ್ಯಾಪೀಠದವರೆಗೆ ಮಳೆ ನೀರು ಚರಂಡಿ ಮತ್ತು ಫುಟ್‌ಪಾತ್, ನ್ಯೂ ಸಯ್ಯಾಜಿರಾವ್ ರಸ್ತೆ ಮತ್ತು ತ್ಯಾಗರಾಜ ರಸ್ತೆಯಲ್ಲಿ 4 ಡಕ್ ಲೈನ್ ನಿರ್ಮಾಣ, ಹಳೆ ವಲಯ ಕಚೇರಿ–1ರ ಜಾಗದಲ್ಲಿ ಉದ್ಯಾನವನ ಅಭಿವೃದ್ಧಿ, ಬಸವೇಶ್ವರ ವೃತ್ತದಿಂದ ಬಿ.ರಾಚಯ್ಯ ವೃತ್ತದವರೆಗೆ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ದೊರಕಿತು. ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಪಾಲಿಕೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಸಿಂಧು, ಎಕ್ಸಿಕ್ಯೂಟಿವ್ ಇಂಜಿನಿಯರ್ ನಾಗರಾಜ್, ಅಭಿವೃದ್ಧಿ ಅಧಿಕಾರಿ ಸುಶ್ರುತ್, ಧನುಷ್, ಅಂಕಯ್ಯ, ಸೌಮ್ಯ, ವಾರ್ಡ್ ಅಧ್ಯಕ್ಷ ಆಟೋ ಮಂಜು, ವೆಂಕಟೇಶ್, ಕಾವೇರಿ, ರಾಜ್ ಕುಮಾರ್, ಶಿವರಾಜ್, ಲಕ್ಷ್ಮೀನಾರಾಯಣ್, ಕೇಬಲ್ ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ನಕಲಿ ಕೀ ಬಳಸಿ ಮೀನಿನಂಗಡಿಯಲ್ಲಿ 11 ಲಕ್ಷ ರೂ. ನಗದು ಕದ್ದಿದ್ದವನ ಸೆರೆ

ಮೈಸೂರು, ಸೆ.4(ಆರ್‌ಕೆ)– ನಕಲಿ ಕೀ ಬಳಸಿ ಮೀನು ಮಾರಾಟ ಅಂಗಡಿಯಲ್ಲಿ 11 ಲಕ್ಷ ರೂ. ನಗದು ಕಳವು ಮಾಡಿದ್ದ ಅಂಗಡಿಯ ಮಾಜಿ ಕೆಲಸಗಾರನೋರ್ವನನ್ನು ಮಂಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕ್ರೈಂ ಬಾಕ್ಸ್

ಮೈಸೂರಿನ ಮಂಡಿ ಮೊಹಲ್ಲಾ ನಿವಾಸಿ ಫಾರುಖ್ ಖಾನ್ (33) ಬಂಧಿತ ಆರೋಪಿಯಾಗಿದ್ದು, ತಲೆಮರೆಸಿಕೊಂಡಿರುವ ಅಂಗಡಿ ಕೆಲಸಗಾರನ ಪತ್ತೆಗೆ ಪೊಲೀಸರು ಶೋಧ ಮುಂದುವರಿಸಿದ್ದಾರೆ. ಮಂಡಿಮೊಹಲ್ಲಾದ ಅಮ್ಜದ ಎಂಬುವರ ಮೀನಿನ ಅಂಗಡಿಯ ಬಾಗಿಲು ಮೀಟಿ, ನಕಲಿ ಕೀಲಿಯಿಂದ ಗಲ್ಲಾ ಪೆಟ್ಟಿಗೆ ಬಾಗಿಲು ತೆಗೆದು ಆ.28ರಂದು ರಾತ್ರಿ 11 ಲಕ್ಷ ರೂ. ಹಣವನ್ನು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಸಹಚರನ ನೆರವಿನಿಂದ ಕಳವು ಮಾಡಿ ತಲೆಮರೆಸಿಕೊಂಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ, ಮಂಡಿ ಠಾಣೆ ಇನ್‌ಸ್ಪೆಕ್ಟರ್ ನಾಗೇಶ್, ತನಿಖೆ ಕೈಗೊಂಡು ಫಾರುಖ್‌ನನ್ನು ಬಂಧಿಸಿದ್ದಾರೆ. ಆರೋಪಿಯನ್ನು ವಿಚಾರಣೆಗೊಳಪಡಿಸಿದಾಗ ಈ ಹಿಂದೆ ಅದೇ ಮೀನಿನಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಆತ, ಕೆಲಸ ಬಿಟ್ಟ ನಂತರ ಪ್ರಸ್ತುತ ಕೆಲಸ ಮಾಡುತ್ತಿದ್ದವನ ಜೊತೆ ಸೇರಿ ನಗದು ಕಳವು ಮಾಡಿದ್ದರು ಎಂಬುದು ತಿಳಿಯಿತು. ಕಳವು ಮಾಡಿದ ಹಣದಲ್ಲಿ ಫಾರುಖ್ ಕೆಲವು ವಸ್ತುಗಳನ್ನು ಖರೀದಿಸಿದ್ದನು. ತನಗೆ ಸಹಾಯ ಮಾಡಿದ್ದ ಹಾಲಿ ಕೆಲಸಗಾರನಿಗೂ ಸ್ವಲ್ಪ ಹಣ ಕೊಟ್ಟಿದ್ದೇನೆಂದು ಹೇಳಿಕೆ ನೀಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುರುಬಾರಹಳ್ಳಿ ದೇವಸ್ಥಾನದ ಹುಂಡಿ ಹಣ ಕಳವು

ಮೈಸೂರು, ಸೆ.4(ಆರ್‌ಕೆ)– ಮೈಸೂರಿನ ಕುರುಬಾರಹಳ್ಳಿಯ ಬನ್ನಿಕಾಳೇಶ್ವರಿ ದೇವಾಲಯದ ಹುಂಡಿ ಒಡೆದು ಹಣ ಕಳವು ಮಾಡಿರುವ ಘಟನೆ ಇಂದು ಮುಂಜಾನೆ ಸಂಭವಿಸಿದೆ.

ದೇವಾಲಯದ ಆವರಣದಲ್ಲಿರುವ ಶನಿಮಹಾತ್ಮ, ಗಣಪತಿ ಹಾಗೂ ಆಂಜನೇಯಸ್ವಾಮಿ ದೇವಸ್ಥಾನಗಳಿಗೆ ನುಗ್ಗಿರುವ ಖದೀಮರು ಹುಂಡಿಗಳನ್ನು ಒಡೆದು ಹಣ ದೋಚಿದ್ದಾರೆ. ಮುಂಜಾನೆ ಸುಮಾರು 2 ಗಂಟೆಯಿಂದಲೇ ಕಾರ್ಯಾಚರಣೆ ನಡೆಸಿರುವ ಖದೀಮರು, ಕಡೆಯದಾಗಿ ಬನ್ನಿಕಾಳೇಶ್ವರಿ ದೇವಸ್ಥಾನದ ಹುಂಡಿ ಒಡೆಯುವಾಗ ಶಬ್ದ ಕೇಳಿ ಎಚ್ಚರಗೊಂಡ ನಿವಾಸಿಗಳು ಕೂಗಿಕೊಂಡಾಗ ಹುಂಡಿ ಬಿಟ್ಟು ಪರಾರಿಯಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ರಾತ್ರಿ ಗಸ್ತಿನಲ್ಲಿದ್ದ ನಜರ್‌ಬಾದ್ ಠಾಣೆ ಪೊಲೀಸರು ಶೋಧಿಸಿದರಾದರೂ ಖದೀಮರು ಪತ್ತೆಯಾಗಲಿಲ್ಲ. ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿರುವ ಇನ್‌ಸ್ಪೆಕ್ಟರ್ ಜೀವನ್, ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಹೋಂ ಸ್ಟೇನಲ್ಲಿ ವೈದ್ಯರ ಉಂಗುರ ಕಳವು

ಮೈಸೂರು, ಸೆ. 4– ಹೋಂ ಸ್ಟೇನಲ್ಲಿ ವಾಸವಾಗಿದ್ದ ವೈದ್ಯರ ಚಿನ್ನದ ಉಂಗುರ ಕಳವು ಮಾಡಿರುವ ಬಗ್ಗೆ ತಡವಾಗಿ ಪೊಲೀಸರಿಗೆ ದೂರು ನೀಡಲಾಗಿದೆ.

ವಿವರ: ಡಾ.ಅಪ್ಪಣ್ಣ ಚೋಟಿರಾ ಅವರು ತಮ್ಮ ಪತ್ನಿ ಶೋಭಾ ಅವರೊಂದಿಗೆ ವಿವಿ ಮೊಹಲ್ಲಾದ ಅನ್‌ಮೋಲ್ ಹೋಂ ಸ್ಟೇನಲ್ಲಿ ಕಳೆದ ಜು.20ರಂದು 2 ಕೊಠಡಿಗಳನ್ನು 4 ತಿಂಗಳ ಅವಧಿಗೆ ಬಾಡಿಗೆಗೆ ಪಡೆದು ವಾಸ್ತವ್ಯವಿದ್ದರು. ಇವರು ಆ.8ರಂದು ಸಂಜೆ 4.30ರಲ್ಲಿ ತಮ್ಮ ಕೈಯ್ಯಲ್ಲಿದ್ದ 12 ಗ್ರಾಂ ತೂಕದ ಚಿನ್ನದ ಉಂಗುರವನ್ನು ಕಳಚಿ ಟೀಪಾಯ್ ಮೇಲಿಟ್ಟು ವಾಯುವಿಹಾರಕ್ಕೆ ತೆರಳಿ ರಾತ್ರಿ 8 ಗಂಟೆಗೆ ಹಿಂತಿರುಗುವಷ್ಟರಲ್ಲಿ ಅವರ ಉಂಗುರ ಕಳವು ಮಾಡಲಾಗಿದೆ ಈ ವಿಚಾರವನ್ನು ಅವರು ಹೋಂ ಸ್ಟೇ ಮಾಲೀಕ ರಾಜೇಶ್‌ಕುಮಾರ್‌ರಿಗೆ ತಿಳಿಸಿ ಆ.17ರಂದು ಅಮೆರಿಕಾಗೆ ತೆರಳಿದ್ದಾರೆ. ಈ ಕಳವಿನ ಬಗ್ಗೆ ಹೋಂ ಸ್ಟೇ ಮಾಲೀಕ ರಾಜೇಶ್ ಕುಮಾರ್ ಸೆ.2ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ

ಬಿಜೆಪಿ ಸಂಪತ್ತು 6,046 ಕೋಟಿ, ಕಾಂಗ್ರೆಸ್ 805 ಕೋಟಿ ಆಸ್ತಿ ಹೊಂದಿದೆ

ನವದೆಹಲಿ: ದೇಶದ ಎಂಟು ರಾಷ್ಟ್ರೀಯ ಪಕ್ಷಗಳು 2021–22ರಲ್ಲಿ ಒಟ್ಟು 8,829.16 ಕೋಟಿ ರೂ. ಆಸ್ತಿ ಘೋಷಿಸಿಕೊಂಡಿವೆ. ಈ ಪೈಕಿ ಆಡಳಿತರೂಢ ಬಿಜೆಪಿ ಅತ್ಯಂತ ಶ್ರೀಮಂತ ಪಕ್ಷವಾಗಿದ್ದು, 6,046 ಕೋಟಿ ರೂಪಾಯಿ ಆಸ್ತಿ ಘೋಷಿಸಿಕೊಂಡಿದೆ.

2020–21ರಲ್ಲಿ ಈ 8 ರಾಷ್ಟ್ರೀಯ ಪಕ್ಷಗಳ ಒಟ್ಟು ಆಸ್ತಿ 7,297.62 ಕೋಟಿ ರೂ.ಗಳಷ್ಟಿತ್ತು ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ಎಡಿಆರ್) ವರದಿ ಮಾಡಿದೆ. ಎಂಟು ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್, ಎನ್‌ಸಿಪಿ, ಬಿಎಸ್‌ಪಿ, ಸಿಪಿಐ, ಸಿಪಿಐ(ಎಂ), ಎಐಟಿಸಿ ಮತ್ತು ಎನ್‌ಪಿಇಪಿ ಘೋಷಿಸಿದ 2020–21 ಮತ್ತು 2021–22ನೇ ಸಾಲಿನ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಎಡಿಆರ್ ವಿಶ್ಲೇಷಿಸಿದೆ. ಎಡಿಆರ್ ಪ್ರಕಾರ, 2020–21ರ ಆರ್ಥಿಕ ವರ್ಷದಲ್ಲಿ, ಬಿಜೆಪಿಯು 4,990 ಕೋಟಿ ರೂಪಾಯಿ ಮೌಲ್ಯದ ಆಸ್ತಿಯನ್ನು ಘೋಷಿಸಿಕೊಂಡಿತ್ತು. 2021–22 ರಲ್ಲಿ ಕೇಸರಿ ಪಕ್ಷದ ಆಸ್ತಿ 6,046.81 ಕೋಟಿಗೆ ಅಂದರೆ ಶೇ. 21.17 ರಷ್ಟು ಹೆಚ್ಚಾಗಿದೆ.

2020–21ರಲ್ಲಿ ಕಾಂಗ್ರೆಸ್ ಘೋಷಿತ ಆಸ್ತಿ 691.11 ಕೋಟಿ ರೂ. ಗಳಷ್ಟಿತ್ತು. ಇದು 2021–22ರಲ್ಲಿ ಶೇ.16.58ರಷ್ಟು ಏರಿಕೆಯಾಗಿ 805.68 ಕೋಟಿ ರೂ.ಗೆ ತಲುಪಿದೆ. ಬಿಎಸ್ಪಿ ತನ್ನ ವಾರ್ಷಿಕ ಘೋಷಿತ ಆಸ್ತಿಯಲ್ಲಿ ಇಳಿಕೆಯನ್ನು ತೋರಿಸಿರುವ ಏಕೈಕ ರಾಷ್ಟ್ರೀಯ ಪಕ್ಷವಾಗಿದೆ ಎಂದು ವರದಿ ಹೇಳಿದೆ. 2020–21 ಮತ್ತು 2021–22ರ ನಡುವೆ BSP ಯ ಒಟ್ಟು ಆಸ್ತಿ 732.79 ಕೋಟಿ ರೂ. ನಿಂದ 690.71 ಕೋಟಿಗೆ ಶೇಕಡಾ ಅಂದರೆ 5.74ರಷ್ಟು ಕಡಿಮೆಯಾಗಿದೆ. ಟಿಎಂಸಿಯ ಒಟ್ಟು ಆಸ್ತಿ 2020–21ರಲ್ಲಿ ರೂ.182.001 ಕೋಟಿ ರೂ.ನಿಂದ ರೂ.458.10 ಕೋಟಿ ರೂ.ಗೆ ಏರಿಕೆಯಾಗಿದ್ದು, ಶೇ.151.70ರಷ್ಟು ಹೆಚ್ಚಳವಾಗಿದೆ ಎಂದು ಎಡಿಆರ್ ತಿಳಿಸಿದೆ.

ದಸರಾ ವಸ್ತುಪ್ರದರ್ಶನವನ್ನು ಮದುವೆ, ಧಾರ್ಮಿಕ ಕಾರ್ಯಗಳಿಗೆ ಕಲ್ಪಿಸಲಿ


ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅಭಿಮತ

ಮೈಸೂರು,ಸೆ.4–ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿರುವ ಶ್ರೀವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ 3ನೇ ಶ್ರಾವಣ ಶನಿವಾರ, ಅಂಗವಾಗಿ ವೀರಾಂಜನೇಯ ಸ್ವಾಮಿಗೆ ಕದಳಿ ವಿಳ್ಯೆದೆಲೆ ಅಲಂಕಾರ ಮತ್ತು ಹನುಮಾನ್ ಚಾಲೀಸ್ ಪಠಣ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಧಾರ್ಮಿಕ ಕಾರ್ಯಕ್ರಮಗಳನ್ನು ವೀರಾಂಜನೇಯಸ್ವಾಮಿ ಸೇವಾಭಕ್ತ ಮಂಡಳಿ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಈ ವೇಳೆ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಮಾತನಾಡಿ, 1840ರಲ್ಲಿ ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನವನ್ನು ಅರಮನೆ ಆಸ್ಥಾನ ಸಂಗೀತ ಶಿಕ್ಷಕರು ರಾಜಗುರುಗಳಾಗಿದ್ದ ವೀಣೆ ವೆಂಕಟಕೃಷ್ಣಯ್ಯನವರ ನೆನಪಾಗಿ ಅವರ ಧರ್ಮಪತ್ನಿ ನಿರ್ಮಿಸಿದರು. 182 ವರ್ಷಗಳ ಇತಿಹಾಸವಿದೆ. ಶತಮಾನಗಳ ಹಿಂದೆಯೇ ಸಾವಿರಾರು ಮದುವೆ ನಾಮಕರಣ ಧಾರ್ಮಿಕ ಕಾರ್ಯಕ್ರಮಗಳು ನಡೆದಿರುವ ಉಲ್ಲೇಖವಿದೆ. ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ 10ನೇ ಚಾಮರಾಜ ಒಡೆಯರ್ ಅವರು 1880ರಲ್ಲಿ ಜೀವಣ್ಣರಾಯನಕಟ್ಟೆ (ಜೆಕೆಮೈದಾನ) ಜಾಗದಲ್ಲಿ ಮೈಸೂರು ದಸರಾ ಪ್ರಾರಂಭಿಸಿದರು. ನಂತರದಲ್ಲಿ ರಾಜಾಳ್ವಿಕೆಯಿಂದ ಪ್ರಜಾಪ್ರಭುತ್ವ ಸರ್ಕಾರ ಬಂದರೂ ಮೈಸೂರು ದಸರಾ ಮುಂದುವರೆಯಬೇಕು ಎನ್ನುವ ಸದುದ್ದೇಶದಿಂದ ದೊಡ್ಡಕೆರೆ ಮೈದಾನ 80 ಎಕರೆಯನ್ನು 1975–76ರಲ್ಲಿ ಮಹಾರಾಜರು ದಾನ ನೀಡಿದರು. ಮೈಸೂರು ದಸರಾ ಇಂಡಸ್ಟ್ರಿಯಲ್ ಕಲ್ಚರಲ್ ಎಕ್ಸಿಬಿಷನ್ ಮೂಲಕ ಆಯೋಜಿಸಲಾಗುತ್ತಿತ್ತು. ಅದರಲ್ಲಿ ಬಹುಮುಖ್ಯವಾಗಿ ಡಿಟಿಎಸ್ ರಾವ್, ಎಫ್‌ಕೆ ಇರಾನಿ ಸುಬ್ಬರಾವ್ ಅವರು ನೇತೃತ್ವ ವಹಿಸಿದ್ದರು. ಮುಖ್ಯಮಂತ್ರಿಯಾಗಿದ್ದ ಆರ್. ಗುಂಡೂರಾವ್ ಅವರ ಕಾಳಜಿಯಿಂದಾಗಿ 1980ರಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಸ್ಥಾಪನೆಯಾಯಿತು. ಮುಂದಿನ ದಿನದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ವೀರಾಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಸಣ್ಣಪುಟ್ಟ ಮದುವೆ, ನಾಮಕರಣ ಹಲವಾರು ಧಾರ್ಮಿಕ ಕಾರ್ಯಕ್ರಮಗಳು ನಡೆಯಲು ಜನಸಾಮಾನ್ಯರಿಗೆ ನೀಡಿದರೆ ಕಡಿಮೆ ದರದಲ್ಲಿ ಅನೂಕೂಲವಾಗುತ್ತದೆ. ಪ್ರಾಧಿಕಾರಕ್ಕೆ ಆದಾಯವೂ ಬರುತ್ತದೆ. ಇದರ ಬಗ್ಗೆ ಸಮಿತಿ ರಚಿಸಿ ಯೋಜನೆ ಜಾರಿಗೆ ತರಲಿ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಹಳೇ ಮೈಸೂರು ಭಾಗದ ವಿವಿಧೆಡೆ ಕೆರೆ ನಾಲೆ ರಾಜಕಾಲುವೆ ಬೆಟ್ಟಗುಡ್ಡಗಳನ್ನು ಗಮನಿಸಿದರೆ ಅಲ್ಲಲ್ಲಿ ನೂರಕ್ಕೂ ಹೆಚ್ಚು ಶ್ರೀವೀರಾಂಜನೇಯಸ್ವಾಮಿ ಗುಡಿಯನ್ನು ಕಾಣಬಹುದು. ಅಂದರೆ ಹಿಂದಿನ ಕಾಲದಲ್ಲಿ ಬರಗಾಲ ಅಥವಾ ಮಾರಣಾಂತಿಕ ರೋಗಗಳು ಬಂದಾಗ ಧೈರ್ಯ ನೀಡುವ ಮಾನಸಿಕ ಶಕ್ತಿಯನ್ನು ಹೆಚ್ಚಿಸುವ ಶ್ರದ್ಧಾಭಕ್ತಿ ಕೇಂದ್ರವಾಗಿ ನಡೆದುಕೊಂಡು ಬಂದಿದೆ. ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಶ್ರೀವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಮದುವೆ, ನಾಮಕರಣ, ಧಾರ್ಮಿಕ ಆಚರಣೆಗಳಿಗೆ ಅನೂಕೂಲವಾಗುವಂತೆ ಜಾಗದ ವ್ಯವಸ್ಥೆ, ಸ್ವಚ್ಛತೆ, ಮೂಲ ಸೌಲಭ್ಯ ವಿಚಾರವಾಗಿ ಜನಸಾಮಾನ್ಯರು ಮನವಿ ಮಾಡುತ್ತಾ ಬಂದಿದ್ದಾರೆ. ಮುಂದಿನ ಸಭೆಯಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ ಯೋಜನೆ ಕಾರ್ಯರೂಪಕ್ಕೆ ತರಲಾಗುವುದು ಎಂದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ, ಬಿಜೆಪಿ ಮಾಧ್ಯಮ ವಕ್ತಾರ ಎಂ.ಎ.ಮೋಹನ್, ಬಿಜೆಪಿ ಹಿಂದುಳಿದ ವರ್ಗದ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ಪ್ರಾಧಿಕಾರದ ಅಧೀಕ್ಷಕ ವೆಂಕಟೇಶ್, ವ್ಯವಸ್ಥಾಪಕ ನಂದಕುಮಾರ್, ನವೀನ್, ಶ್ರೀನಿಧಿ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ದಸರಾ ವಸ್ತುಪ್ರದರ್ಶನ ನಿರೂಪಕ ಅಜಯ್ ಶಾಸ್ತ್ರಿ, ಕೆಎಂ ನಿಶಾಂತ್, ಚಕ್ರಪಾಣಿ, ಅರ್ಚಕ ಪಣೀಶ್, ಅಂಬಾರಿ ಪುರೋಹಿತ ಪ್ರಹಲ್ಲಾದ್, ವಿಶ್ವೇಶ್ವರಭಟ್, ಶಿವರಾಜ್, ಪ್ರದೀಪ್, ಕಿಶೋರ್, ಕೀರ್ತಿ ಇನ್ನಿತರರು ಉಪಸ್ಥಿತರಿದ್ದರು.



ಐದನೇ ದಿನಕ್ಕೆ ಕಾಲಿಟ್ಟ ಧರಣಿ



ಮಂಡ್ಯ, ಸೆ.4– ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರದ ಕ್ರಮ ಖಂಡಿಸಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಡೆಸುತ್ತಿರುವ ಧರಣಿ ಸೋಮವಾರ ಐದನೇ ದಿನಕ್ಕೆ ಕಾಲಿಟ್ಟಿದೆ.

ನಗರದ ಸರ್‌ಎಂವಿ ಪ್ರತಿಮೆ ಎದುರು ನಡೆಯುತ್ತಿರುವ ಧರಣಿಯಲ್ಲಿ ಪಾಲ್ಗೊಂಡಿದ್ದ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಮಾತನಾಡಿ, ರೈತರ ವಿರೋಧದ ನಡುವೆಯೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸುತ್ತಿರುವುದು ರೈತರಿಗೆ ಮಾಡಿದ ದ್ರೋಹವಾಗಿದೆ. ಕಾವೇರಿ ನದಿ ನೀರು ಸಮಸ್ಯೆ ಎದುರಾದಾಗ ಎಲ್ಲರೂ ಒಗ್ಗೂಡಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಪ್ರತಿಭಟನೆ ಮಾಡಲಾಗುತ್ತಿತ್ತು. ಆದರೆ ಈ ಬಾರಿ ಸಂಘಟನೆಗಳು ಬೇರೆ ಬೇರೆ ಕಡೆ ಪ್ರತ್ಯೇಕವಾಗಿ ಪ್ರತಿಭಟನೆ ಮಾಡುತ್ತಿವೆ. ಇದರಿಂದಾಗಿ ನಮ್ಮನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದಂತೆ ಕಾಣುತ್ತಿಲ್ಲ. ರೈತ ಹಿತರಕ್ಷಣಾ ಸಮಿತಿ ಆಶ್ರಯದಲ್ಲಿ ಎಲ್ಲಾ ಸಂಘಟನೆಗಳು ಒಗ್ಗೂಡಿ ಹೋರಾಟ ಮಾಡುವಂತೆ ಕರೆ ನೀಡಿದರು.

ಧರಣಿಯಲ್ಲಿ ಮಾಜಿ ಶಾಸಕ ಜಿ.ಬಿ. ಶಿವಕುಮಾರ್, ಮೈಶುಗರ್ ಮಾಜಿ ಅಧ್ಯಕ್ಷ ಸಿದ್ದರಾಮೇಗೌಡ, ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ರಮೇಶ್‌ಗೌಡ, ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸುನಂದಾ ಜಯರಾಂ, ಕೆ. ಬೋರಯ್ಯ, ಇಂಡುವಾಳು ಚಂದ್ರಶೇಖರ್, ಕಿರಂಗೂರು ಪಾಪು, ತುಳಸೀದರ್, ಸಿ.ಟಿ. ಮಂಜುನಾಥ್ ಸೇರಿದಂತೆ ಇತರರಿದ್ದರು.

ರಾಜ್ಯದ ಪರ ಕಾವೇರಿ ತೀರ್ಪು ಬರಲೆಂದು ಪ್ರಾರ್ಥಿಸಿ

ಮಂಡ್ಯದಲ್ಲಿ ಕಾವೇರಿ ಮಾತೆಗೆ ಅಭಿಷೇಕ

ಮಂಡ್ಯ, ಸೆ.4– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನಿರಂತರ ನೀರು ಹರಿಸಿ ಕಾವೇರಿ ಕೊಳ್ಳದ ಜಲಾಶಯ ಬರಿದು ಮಾಡಿರುವ ಸರ್ಕಾರದ ಮೇಲಿನ ನಂಬಿಕೆ ಹುಸಿಯಾದ ಹಿನ್ನೆಲೆಯಲ್ಲಿ ಕಸ್ತೂರಿ ಕರ್ನಾಟಕ ಜನಪರ ವೇದಿಕೆ ಕಾರ್ಯಕರ್ತರು ಕಾವೇರಿ ಮಾತೆಗೆ ಅಭಿಷೇಕ ಮಾಡಿ, ಸರ್ವೋಚ್ಚ ನ್ಯಾಯಾಲಯದ ತೀರ್ಪು ಕರ್ನಾಟಕದ ಪರ ಬರಲಿ ಎಂದು ಪ್ರಾರ್ಥಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಎದುರಿನ ಕಾವೇರಿ ಉದ್ಯಾನವನದಲ್ಲಿರುವ ಕಾವೇರಿ ಮಾತೆಗೆ ಕಾವೇರಿ ನದಿಯಿಂದ ತಂದಿದ್ದ ನೀರಿನಿಂದ ಜಲಾಭಿಷೇಕ ಮಾಡಿ, ಹಾಲು, ಅರಿಶಿನ–ಕುಂಕುಮ, ತುಪ್ಪ, ಸಕ್ಕರೆ, ಜೇನುತುಪ್ಪ ಮತ್ತು ಎಳನೀರಿನ ಅಭಿಷೇಕ ಮಾಡಿ ಹಸಿರು ಸೀರೆ ಹೊದಿಸಿ ಪುಷ್ಪಾರ್ಚನೆ ಮೂಲಕ ವಿಶೇಷ ಪೂಜೆ ಸಲ್ಲಿಸಿ ಕಾವೇರಿ ವಿಚಾರದಲ್ಲಿ ರಾಜ್ಯಕ್ಕೆ ನ್ಯಾಯ ದೊರಕಿಸಿಕೊಡುವಂತೆ ಪ್ರಾರ್ಥನೆ ಮಾಡಿದರು.

ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ರಮೇಶ್‌ಗೌಡ ಮಾತನಾಡಿ, ಕಾವೇರಿ ಕೊಳ್ಳದ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯದ ಮೂಲಕ ತಮಿಳುನಾಡಿಗೆ ನೀರು ಹರಿಸುತ್ತಿರುವ ರಾಜ್ಯ ಸರ್ಕಾರ ರೈತರಿಗೆ ದ್ರೋಹ ಮಾಡಿದೆ. ಜಲಾಶಯದಲ್ಲಿ ನೀರಿನ ಪ್ರಮಾಣ ಗಣನೀಯವಾಗಿ ಕುಸಿತವಾಗುತ್ತಿದ್ದರೂ, ಇಂದಿಗೂ ಸಹ ಪ್ರತಿನಿತ್ಯ ನೀರು ಬಿಡುಗಡೆ ಮಾಡುತ್ತಿದೆ. ಇದ್ದ ನೀರೆಲ್ಲಾ ಖಾಲಿಯಾಗುತ್ತಿದೆ. ಆಳುವ ಸರ್ಕಾರ, ರಾಜಕೀಯ ಪಕ್ಷಗಳು ಹಾಗೂ ರಾಜಕಾರಣಿಗಳ ಮೇಲೆ ಇಟ್ಟಿದ್ದ ನಂಬಿಕೆ ಸಂಪೂರ್ಣ ಹುಸಿಯಾಗಿರುವುದರಿಂದ ನಮಗೆ ಕಾವೇರಿ ಮಾತೆಯೇ ದಿಕ್ಕು ಎಂದರು.

ಕಾವೇರಿ ಮಾತೆ ನಂಬಿ ಬದುಕುತ್ತಿರುವ ರೈತರ ಕಾಪಾಡಲು ಕಾವೇರಮ್ಮ ಮಳೆಯನ್ನಾದರೂ ಸುರಿಸಿ ಸಮಸ್ಯೆಗೆ ಪರಿಹಾರ ರೂಪಿಸಲಿ ಎಂದು ಪ್ರಾರ್ಥಿಸುತ್ತಿದ್ದೇವೆ ಇದರ ಜೊತೆಗೆ ಸೆ.6ರಂದು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ತೀರ್ಪು ಕರ್ನಾಟಕದ ಪರ ಬರಲಿ ಎಂದು ಆಶಿಸಿ ವಿಶೇಷ ಪೂಜೆ ಸಲ್ಲಿಸಿದ್ದೇವೆ ಎಂದರು.

ಈ ವೇಳೆ ವೇದಿಕೆ ರಾಜ್ಯ ಉಪಾಧ್ಯಕ್ಷ ರಂಜಿತ್ ಗೌಡ, ಸಂಘಟನಾ ಕಾರ್ಯದರ್ಶಿ ಕೃಷ್ಣೇಗೌಡ, ಜಿಲ್ಲಾಧ್ಯಕ್ಷ ಉಮಾಶಂಕರ್, ಯೋಗೇಶ್‌ಗೌಡ, ಅಜಯ್, ಗೌಡಗೆರೆ ಧನಂಜಯ, ರೋಸಿ, ನಿರ್ಮಲ, ಮಂಗಳಮ್ಮ, ರಾಜಮ್ಮ, ಚಿಕ್ಕೇನಹಳ್ಳಿ ಸಿದ್ದಪ್ಪಾಜಿ, ನಂದನ್‌ಗೌಡ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಕೆಆರ್‌ಎಸ್‌ಗೆ ಮುತ್ತಿಗೆ ಯತ್ನ: ರೈತರ ಬಂಧನ



ಶ್ರೀರಂಗಪಟ್ಟಣ: ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ಖಂಡಿಸಿ ಕೆಆರ್‌ಎಸ್‌ಗೆ ಮುತ್ತಿಗೆ ಹಾಕಲು ಯತ್ನಿಸಿದ ಮೇಲುಕೋಟೆ ಕ್ಷೇತ್ರ ವ್ಯಾಪ್ತಿಯ ರಾಜ್ಯ ರೈತ ಸಂಘದ ಮುಖಂಡರನ್ನು ಪೊಲೀಸರು ಬಂಧಿಸಿದರು.

ಸಂಘದ ರಾಜ್ಯಾಧ್ಯಕ್ಷ ಇ.ಎನ್.ಕೃಷ್ಣೇಗೌಡ, ರಾಜ್ಯ ಮಹಿಳಾ [illegible] ನೇತೃತ್ವದಲ್ಲಿ 200ಕ್ಕೂ ಹೆಚ್ಚು ರೈತರು ಹಾಗೂ ಮಹಿಳೆಯರು ಖಾಲಿ ಕೊಡ ಹಿಡಿದು ತಾಲೂಕಿನ ಕೆಆರ್‌ಎಸ್ ಪೊಲೀಸ್ ಠಾಣೆಯಿಂದ ಕನ್ನಂಬಾಡಿ ಅಣೆಕಟ್ಟೆವರೆಗೂ ಮೆರವಣಿಗೆ ನಡೆಸಿ ಅಣೆಕಟ್ಟೆ ಎದುರು ಕೆಲಕಾಲ ಪ್ರತಿಭಟನೆ ನಡೆಸಿ ಅಣೆಕಟ್ಟೆಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಮುಂಜಾಗ್ರತಾ ಕ್ರಮವಾಗಿ ರೈತ ಮುಖಂಡರನ್ನು ಬಂಧಿಸಿ, ಠಾಣೆಗೆ ಕರೆದೊಯ್ದು ಷರತ್ತು ಬದ್ಧ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಡಿಕೆಶಿ ಭೇಟಿ: ಮಂಡ್ಯಕ್ಕೆ ಅನ್ಯಾಯವಾಗದಂತೆ ಒತ್ತಾಯ

ಮಂಡ್ಯ, ಸೆ.4– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಹೋರಾಟ ವ್ಯಾಪಕವಾಗಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮಂಡ್ಯ ನಗರಾಭಿವೃದ್ಧಿ ಮಾಜಿ ಅಧ್ಯಕ್ಷ ಅಸಾದುಲ್ಲಾ ಖಾನ್ ಭೇಟಿ ಮಾಡಿ, ನೀರು ಬಿಡುಗಡೆ ವಿಚಾರದಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದಾರೆ.



ಪ್ರಾಧಿಕಾರದ ಸೂಚನೆಯಂತೆ ತಮಿಳುನಾಡಿಗೆ ನೀರು ಬಿಡುತ್ತಿರುವುದರಿಂದ ಜಿಲ್ಲೆಯ ರೈತರ ಕೃಷಿ ಹಾಗೂ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ. ನಾಲೆಗಳಿಗೆ ಈಗಾಗಲೇ ನೀರನ್ನು ನಿಲ್ಲಿಸಿ ತಮಿಳುನಾಡಿಗೆ ಬಿಡಲಾಗುತ್ತಿದೆ. ಮಳೆ ಪ್ರಮಾಣವು ಕಡಿಮೆಯಾಗಿರುವುದರಿಂದ ರೈತರಿಗೆ ತೀವ್ರ ಸಂಕಷ್ಟ ಉಂಟಾಗಿ ಹೋರಾಟದ ಹಾದಿ ಹಿಡಿದಿದ್ದು, ಸರ್ಕಾರ ನೀರು ನಿಲ್ಲಿಸುವ ಬಗ್ಗೆ ಕ್ರಮಕೈಗೊಂಡು ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥವಾದ ಮಂಡಿಸಿ, ರಾಜ್ಯಕ್ಕೆ ನ್ಯಾಯ ಒದಗಿಸಿಕೊಡಬೇಕೆಂದು ಒತ್ತಾಯ ಮಾಡಿದ್ದಾರೆ. ಒತ್ತಾಯಕ್ಕೆ ಸ್ಪಂದಿಸಿರುವ ಡಿಕೆಶಿ, ಸರ್ಕಾರ ಪ್ರಾಧಿಕಾರದ ಮನವಿಗೆ ಮಣಿದು ನೀರು ಬಿಡುತ್ತಿದ್ದು, ಮಳೆಯಾಗುವ ಮುನ್ಸೂಚನೆಯಿದ್ದು, ರಾಜ್ಯಕ್ಕೆ ಹಾಗೂ ಮಂಡ್ಯ ಜಿಲ್ಲೆಗೆ ಒಳಿತಾಗಲಿದೆ. ಜೊತೆಗೆ ಸುಪ್ರೀಂ ಕೋರ್ಟ್‌ನಲ್ಲಿ ಈ ಬಗ್ಗೆ ವಾದ ನಡೆಯುತ್ತಿದ್ದು, ನಮ್ಮ ಪರ ತೀರ್ಪು ಬರುವ ವಿಶ್ವಾಸವಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಭಾರತೀನಗರದಲ್ಲೂ ರೈತರಿಂದ ಪ್ರತಿಭಟನೆ



ಭಾರತೀನಗರ, ಸೆ.4– ತಮಿಳುನಾಡಿಗೆ ಕಾವೇರಿ ನೀರು ಬಿಟ್ಟಿರುವ ರಾಜ್ಯ ಸರ್ಕಾರದ ವಿರುದ್ಧ ಭಾರತೀ ನಗರದಲ್ಲಿ ರೈತರು ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು.

ಇಲ್ಲಿನ ವಿಶ್ವೇಶ್ವರಯ್ಯ ಪುತ್ಥಳಿ ಬಳಿ ಜಮಾಯಿಸಿದ ರೈತ ಸಂಘದ ಕಾರ್ಯಕರ್ತರು ಅರ್ಧ ಗಂಟೆಗೂ ಹೆಚ್ಚು ಕಾಲ ರಸ್ತೆ ತಡೆ ನಡೆಸಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ರೈತ ಸಂಘದ ತಾಲೂಕು ಅಧ್ಯಕ್ಷ ಸಿ.ಕೆ.ರಾಮಕೃಷ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗಪ್ಪಾಜಿ, ರೈತ ಸಂಘದ ಪ್ರಧಾನ ಕಾರ್ಯದರ್ಶಿ ವಿನೋದ್ ಬಾಬು, ಮಂಡ್ಯ ಜಿಲ್ಲಾ ಖಜಾಂಚಿ ರವಿಕುಮಾರ್, ಪುಟ್ಟಸ್ವಾಮಯ್ಯ, ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಜಿ.ಎ.ಶಂಕರ್, ಮಹಿಳಾ ಸಂಘದ ಸಂಚಾಲಕಿ ನಾಗರತ್ನಮ್ಮ, ದಯಾನಂದ, ಪಟೇಲ್ ಬೋರೇಗೌಡ ಸೇರಿದಂತೆ ಹಲವರಿದ್ದರು.

ಪಾಂಡವಪುರದಲ್ಲಿ ಬಿಜೆಪಿಯಿಂದ ರಸ್ತೆ ತಡೆ

ಪಾಂಡವಪುರ, ಸೆ.4– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ರಸ್ತೆ ತಡೆದು ಪ್ರತಿಭಟನೆ ನಡೆಸಿದರು.



ಪಟ್ಟಣದ ಐದು ದೀಪ ವೃತ್ತದಲ್ಲಿ ಜಮಾಯಿಸಿದ ನೂರಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ಶ್ರೀರಂಗಪಟ್ಟಣ–ಜೇವರ್ಗಿ ಮುಖ್ಯರಸ್ತೆ ತಡೆದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರಕ್ಕೆ ಚಪ್ಪಲಿ ಸೇವೆ ಮಾಡಿ, ಬೆಂಕಿ ಹಚ್ಚಲು ಮುಂದಾದ ವೇಳೆ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ ಬೆಂಕಿ ಹಂಚದಂತೆ ತಡೆವೊಡ್ಡಿದರು. ಬಳಿಕ ಅಲ್ಲಿಂದ ಮೆರವಣಿಗೆ ಮೂಲಕ ಮಿನಿವಿಧಾನಸೌಧಕ್ಕೆ ತೆರಳಿದ ಕಾರ್ಯಕರ್ತರು ಪ್ರತಿಭಟನೆ ನಡೆಸಿ ತಹಸೀಲ್ದಾರ್ ಸಂತೋಷ್‌ಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಡಾ.ಎನ್.ಎಸ್. ಇಂದ್ರೇಶ್, ಮೈಶುಗರ್ ಮಾಜಿ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಬಿಜೆಪಿ ತಾ.ಅಧ್ಯಕ್ಷ ಅಶೋಕ್, ಜಿಲ್ಲಾ ಕಾರ್ಯದರ್ಶಿ ಮಂಗಳ, ರೈಸ್‌ಮಿಲ್ ತಮ್ಮೇಗೌಡ, ಅಶೋಕ್, ರಾಘವೇಂದ್ರ, ಧರ್ಮಪಾಲ್, ಈರೇಗೌಡ, ಸಣ್ಣೇಗೌಡ, ವೀರಭದ್ರಸ್ವಾಮಿ, ಮುರುಳಿ, ಕೃಷ್ಣಪ್ರಸಾದ್, ಚಿಕ್ಕಮರಳಿ ನವೀನ್‌ಕುಮಾರ್, ಸೋಮಣ್ಣ ಸೇರಿದಂತೆ ಹಲವರಿದ್ದರು.

ಬಿಸ್ಲೆರಿಯಲ್ಲಿ ನಾಟಿ ಮಾಡಿ ಕರವೇ ಪ್ರತಿಭಟನೆ

ಶ್ರೀರಂಗಪಟ್ಟಣ: ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸಿ ಸರ್ಕಾರ ರೈತರ ಜಮೀನುಗಳಿಗೆ ನೀರಿಲ್ಲದ ಪರಿಸ್ಥಿತಿ ತಂದೊಡ್ಡಿದೆ. ಬೇಸಾಯಕ್ಕೆ ಬಿಸ್ಲೆರಿ ನೀರೇ ಗತಿ ಎಂದು ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ತಾಲೂಕಿನ ಹನುಮಂತ ನಗರದಲ್ಲಿ ಬಿಸ್ಲೆರಿ ನೀರು ಬಳಸಿ ನಾಟಿ ಮಾಡುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು. ಗ್ರಾಮದ ರಾಮಚಂದ್ರ ಎಂಬುವರ ಜಮೀನಿನಲ್ಲಿ ಅಧ್ಯಕ್ಷ ಶಂಕರ್‌ಬಾಬು ನೇತೃತ್ವದಲ್ಲಿ ಕಾರ್ಯಕರ್ತರು ಭತ್ತ ನಾಟಿ ಮಾಡುವ ಮೂಲಕ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಾವೇರಿ ನೀರು ಇಲ್ಲದೆ ಭತ್ತದ ನಾಟಿ ಮಾಡಲು ಆಗುತ್ತಿಲ್ಲ. ಬಿಸ್ಲೆರಿ ನೀರಿನಲ್ಲಿ ನಾಟಿ ಮಾಡುವ ಪರಿಸ್ಥಿತಿ ಬಂದಿದೆ ಎಂದು ದೂರಿದರು.



ನೇರ ಸಂದರ್ಶನ

ಮಂಡ್ಯ, ಸೆ.4– ಎಸ್‌ಎಸ್‌ಎಲ್‌ಸಿ (ಉತ್ತೀರ್ಣ) ಮೇಲ್ಪಟ್ಟು ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಸೆ.8 ರಂದು ಬೆಳಗ್ಗೆ 10.30ಕ್ಕೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆಸಕ್ತರು 2 ಭಾವಚಿತ್ರ, ಬಯೋ ಡೇಟಾ ಪ್ರತಿ, ವಿದ್ಯಾರ್ಹತೆ ಅಂಕಪಟ್ಟಿ ಪ್ರತಿ, ಆಧಾರ್ ಕಾರ್ಡ್ ಪ್ರತಿ ಯೊಂದಿಗೆ ಭಾಗವಹಿಸಬಹುದು. ವಿವರಗಳಿಗಾಗಿ ದೂ: 9164642684, 08232–295124 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಹಿಂದುಳಿದ ವರ್ಗಗಳ ಕಲ್ಯಾಣ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬ ಸಲ್ಲದು

● ಆಯಾಯ ವರ್ಷವೇ ಕಾರ್ಯಕ್ರಮ ಅನುಷ್ಠಾನಗೊಳ್ಳುವಂತೆ ಅಧಿಕಾರಿಗಳು ಕ್ರಮ ವಹಿಸಬೇಕು; ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ಎಸ್.ತಂಗಡಗಿ ● ಇಲಾಖೆಯ ಮೈಸೂರು ವಿಭಾಗೀಯ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಕಟ್ಟುನಿಟ್ಟಿನ ಸೂಚನೆ

ಮೈಸೂರು, ಸೆ.4(ಪಿಎಂ)– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಯಾವುದೇ ಯೋಜನೆ ಅನುಷ್ಠಾನದಲ್ಲಿ ವಿಳಂಬ ಮಾಡಬಾರದು. ಒಂದು ವರ್ಷದ ಯೋಜನೆಯನ್ನು ಮತ್ತೊಂದು ವರ್ಷದಲ್ಲಿ ಅನುಷ್ಠಾನ ಮಾಡುವಂತೆ ಆಗಬಾರದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ಎಸ್. ತಂಗಡಗಿ ತಮ್ಮ ಇಲಾಖಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೈಸೂರು ವಿಭಾಗೀಯ ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸ್ವಯಂ ಉದ್ಯೋಗ ಮತ್ತು ಗಂಗಾ ಕಲ್ಯಾಣ ಯೋಜನೆಗಳ ಸಂಬಂಧ ಫಲಾನುಭವಿಗಳ ಪಟ್ಟಿಗೆ ಶಾಸಕರಿಂದ ಅನುಮೋದನೆ ಪಡೆಯಬೇಕು. ಎಲ್ಲಾ ನಿಗಮದ ಅಧಿಕಾರಿಗಳು ಕಡ್ಡಾಯವಾಗಿ ಆಯಾಯ ಶಾಸಕರಿಗೆ ಮನವಿ ಸಲ್ಲಿಸಿ ಪಟ್ಟಿಗೆ ಅನುಮೋದನೆ ಪಡೆಯಬೇಕು. ಒಟ್ಟಾರೆ ಡಿಸೆಂಬರ್ ಅಂತ್ಯದೊಳಗೆ ಯೋಜನೆಗಳಿಗೆ ಹಣ ವಿನಿಯೋಗಿಸಲು ಕ್ರಮ ವಹಿಸಬೇಕು. ಈ ಬಾರಿ ಯಾವುದೇ ಕಾರಣಕ್ಕೂ ಒಂದು ವರ್ಷದ ಯೋಜನೆಯನ್ನು ಮತ್ತೊಂದು ವರ್ಷ ಮಾಡುವುದು ಆಗಬಾರದು. ಎಲ್ಲಾ ಅಧಿಕಾರಿಗಳೂ ಇದನ್ನು ಪಾಲಿಸಬೇಕು. ಈ ವರ್ಷದ ಕಾರ್ಯಕ್ರಮ ಈ ವರ್ಷವೇ ಮುಗಿಸ ಬೇಕು ಎಂದು ಸೂಚಿಸಿದರು.

ಮಧ್ಯವರ್ತಿಗಳಿದ್ದರೆ ಅಧಿಕಾರಿಗಳ ವಿರುದ್ಧ ಕ್ರಮ: ಗಂಗಾ ಕಲ್ಯಾಣಯಡಿ ಕೊಳವೆ ಬಾವಿ, ನೇರ ಸಾಲ ಯೋಜನೆ ಸಂಬಂಧ ಮಧ್ಯವರ್ತಿಗಳ ಹಾವಳಿ ಇರಕೂಡದು. ಇದ್ದರೆ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಸಚಿವ ಶಿವರಾಜ ಎಸ್.ತಂಗಡಗಿ ಎಚ್ಚರಿಸಿದರು.

ಗಂಗಾ ಕಲ್ಯಾಣ ಯೋಜನೆಯ ಘಟಕ ಅನುದಾನ ಕೂಡ ಹೆಚ್ಚು ಮಾಡಲಾಗಿದೆ. 3.75 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಬೋರ್ ಹಾಕಿಸಿ ತತ್‌ಕ್ಷಣ ರೈತರಿಗೆ ಮೋಟರ್ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸಿ, ನೀರು ದೊರೆಯುವಂತೆ ಮಾಡಬೇಕು. ಈ ಯೋಜನೆಯಡಿ ಸಹಾಯ ಧನದ ಮೊತ್ತ 3.25 ಲಕ್ಷ ರೂ. ಇದ್ದರೆ, ಸಾಲ 50 ಸಾವಿರ ರೂ. ದೊರೆಯಲಿದೆ ಎಂದು ತಿಳಿಸಿದರು. ಸ್ವಯಂ ಉದ್ಯೋಗ, ನೇರ ಸಾಲ ಯೋಜನೆ ಸಾಲದ ಮೊತ್ತ 50 ಸಾವಿರದಿಂದ 2 ಲಕ್ಷ ರೂ.ಗೆ ಹೆಚ್ಚಿಸಲಾಗಿದೆ. ಈ ಬಗ್ಗೆ ಫಲಾನುಭವಿಗಳಿಗೆ ಸೂಕ್ತ ಮಾಹಿತಿ ನೀಡಿ, ಅರ್ಜಿ ಸಲ್ಲಿಸುವವರ ಸಂಖ್ಯೆಯಲ್ಲಿ ಹೆಚ್ಚಳ ಮಾಡಬೇಕು ಎಂದು ಸೂಚಿಸಿದರು.



ಮೈಸೂರು ಜಿಪಂ ಸಭಾಂಗಣದಲ್ಲಿ ಸೋಮವಾರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೈಸೂರು ವಿಭಾಗೀಯ ಮಟ್ಟದ ಅಧಿಕಾರಿಗಳ ಸಭೆಯು ಸಚಿವ ಶಿವರಾಜ ಎಸ್.ತಂಗಡಗಿ ಅಧ್ಯಕ್ಷತೆಯಲ್ಲಿ ನಡೆಯಿತು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸರ್ಕಾರದ ಕಾರ್ಯದರ್ಶಿ ತುಲಸಿ ಮದ್ದಿನೇನಿ ಮಾತನಾಡಿ, ಈ ವರ್ಷ ಅರ್ಜಿ ಸಲ್ಲಿಕೆಯನ್ನು ಸಾಕಷ್ಟು ಸುಲಭ ಮಾಡಲಾಗಿದೆ. ಈ ವರ್ಷ ಯಾವ ನಿಗಮಕ್ಕೆ ಎಷ್ಟು ಗುರಿ ಇದೆ ಎಂಬ ಬಗ್ಗೆ ಏಕೀಕೃತ ವ್ಯವಸ್ಥೆ ಮಾಡಲಾಗಿದೆ. ಅರ್ಜಿಗಳನ್ನು ಈ ವಾರಾಂತ್ಯದಲ್ಲಿ ಕರೆದರೆ, 45 ದಿನಗಳ ಕಾಲಾವಕಾಶ ಇರುತ್ತದೆ. ನ.15ರೊಳಗೆ ಸಂಬಂಧಿಸಿದ ಅಧಿಕಾರಿಗಳು, ಶಾಸಕರಿಂದ ಪಟ್ಟಿ ಪಡೆಯಬೇಕು ಎಂದು ನಿರ್ದೇಶನ ನೀಡಿದರು.

ಬೃಹತ್ ಫಲಕಗಳಲ್ಲಿ ಯೋಜನೆಗಳ ಪ್ರಚಾರ: ಇಲಾಖೆಯ ಯೋಜನೆಗಳ ಬಗ್ಗೆ ಜನರಿಗೆ ಪರಿಣಾಮಕಾರಿಯಾಗಿ ಮಾಹಿತಿ ಒದಗಿಸಲು ಮಾಧ್ಯಮಗಳಿಗೆ ಜಾಹೀರಾತು ನೀಡುವ ಜೊತೆಗೆ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಬೃಹತ್ ಫಲಕಗಳಲ್ಲಿ ಜಾಹೀರಾತು ಪ್ರಕಟಿಸಲು ಉದ್ದೇಶಿಸಲಾಗಿದೆ. ಇದೇ ವಾರದೊಳಗೆ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ಇದೇ ವೇಳೆ ತಿಳಿಸಿದರು.

ಇದಕ್ಕೂ ಮುನ್ನ ಚಾಮರಾಜನಗರ ಜಿಲ್ಲೆಯ ಪ್ರಗತಿ ಪರಿಶೀಲನೆ ಬಗ್ಗೆ ಇಲಾಖೆಯ ಇಲ್ಲಿನ ಡಿಓ (ಜಿಲ್ಲಾ ಅಧಿಕಾರಿ) ಸಭೆಗೆ ಮಾಹಿತಿ ನೀಡಿದರು. ಜಿಲ್ಲೆಯಲ್ಲಿ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಸೌಲಭ್ಯಕ್ಕೆ ಹೆಚ್ಚಿನ ಬೇಡಿಕೆ ಇದೆ. ಜಿಲ್ಲೆಯಲ್ಲಿ ಇಲಾಖೆಯ ಒಟ್ಟು 31 ಹಾಸ್ಟೆಲ್‌ಗಳಿದ್ದು, ಈ ಪೈಕಿ 26ಕ್ಕೆ ಸ್ವಂತ ಕಟ್ಟಡ ಇವೆ. 5 ಹಾಸ್ಟೆಲ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ ಎಂದು ಮಾಹಿತಿ ನೀಡಿದರು.

ಅಲ್ಲದೆ, 4 ಕಟ್ಟಡಗಳ ನಿರ್ಮಾಣ ಪ್ರಗತಿಯಲ್ಲಿದೆ. ಇದರಲ್ಲಿ ಒಂದು ಪೂರ್ಣಗೊಂಡಿದೆ. ಆದರೆ ಯುಜಿಡಿ ಸೌಲಭ್ಯ ಕಲ್ಪಿಸದ ಹಿನ್ನೆಲೆಯಲ್ಲಿ ಅದನ್ನು ಇಲಾಖೆಯ ಸ್ವಾಧೀನಕ್ಕೆ ಪಡೆದಿಲ್ಲ. ಕಟ್ಟಡದ ಸುತ್ತಮುತ್ತ ಬಂಡೆಗಳಿರುವ ಹಿನ್ನೆಲೆಯಲ್ಲಿ ಯುಜಿಡಿ ಸಮಸ್ಯೆ ಉದ್ಭವಿಸಿದೆ ಎಂದು ತಿಳಿಸಿದರು. ಇದಕ್ಕೆ ಪ್ರತಿಯಾಗಿ ಮಾತನಾಡಿದ ಸಚಿವರು, ಹಣ ವೆಚ್ಚ ಮಾಡಿ ಕಟ್ಟಡ ನಿರ್ಮಿಸಿ ಸುಮ್ಮನೆ ಇರುವುದು ಸರಿಯಲ್ಲ. ಕೂಡಲೇ ಪರಿಹಾರ ಹುಡುಕಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಚಾ.ನಗರದಲ್ಲಿಲ್ಲ ದೇವರಾಜ ಅರಸು ಭವನ

ಮುಂದುವರೆದು ಮಾಹಿತಿ ನೀಡಿದ ಚಾ.ನಗರ ಡಿಓ, ಜಿಲ್ಲೆಯಲ್ಲಿ ದೇವರಾಜ ಅರಸು ಭವನ ಯಾವುದೂ ಇಲ್ಲ. ನಿರ್ಮಾಣಕ್ಕೆ ನಿವೇಶನವೂ ಲಭ್ಯವಿಲ್ಲ. 2007–08ನೇ ಸಾಲಿನಿಂದ ಜಿಲ್ಲೆಯಲ್ಲಿ ವಿವಿಧ ಸಮುದಾಯಗಳ ಅಭಿವೃದ್ಧಿಗಾಗಿ 226 ಸಮುದಾಯ ಭವನಗಳು ಮಂಜೂರಾಗಿವೆ. ಈ ಪೈಕಿ 54 ಭವನಗಳು ಪೂರ್ಣಗೊಂಡಿದ್ದು, 145 ಭವನಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 6 ಸಮುದಾಯಗಳ ಭವನಗಳ ನಿರ್ಮಾಣಕ್ಕೆ ನಿವೇಶನ ಲಭ್ಯವಿದ್ದು, ಕಾಮಗಾರಿ ಆರಂಭಿಸಬೇಕಿದೆ. 21 ಭವನಗಳ ನಿರ್ಮಾಣಕ್ಕೆ ನಿವೇಶನ ಸದ್ಯ ಲಭ್ಯವಿಲ್ಲ. ಪ್ರಸಕ್ತ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆಯಾಗಿಲ್ಲ ಎಂದು ತಿಳಿಸಿದರು.

ಚಾ.ನಗರ ಜಿಲ್ಲೆಯಲ್ಲಿ ವರ್ಷವಾದರೂ ನಿಗದಿತ ಗುರಿಯಡಿ ಶೇ.50ರಷ್ಟು ಬೋರ್‌ವೆಲ್ ಕೊರೆಸಲಾಗಿಲ್ಲ. ಸಾಲಸೌಲಭ್ಯಗಳ ಮರುಪಾವತಿ ಮಾಡಿಸುವಲ್ಲಿ ಶೇ.12ರಷ್ಟು ಮಾತ್ರ ಪ್ರಗತಿ ಇದೆ ಎಂದು ಸಚಿವರು, ಜಿಲ್ಲೆಯ ಡಿಓ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಪ್ರಗತಿಗೆ ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಡಾ.ಸಿ.ಕೆ.ಜಗದೀಶ್ ಕುಮಾರ್, ಸಚಿವರ ಆಪ್ತ ಕಾರ್ಯದರ್ಶಿ ಜಿ.ಎಸ್.ಮಧುಸೂದನ ರೆಡ್ಡಿ, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕಾಂತರಾಜು ಸೇರಿದಂತೆ ಮೈಸೂರು ಕಂದಾಯ ವಿಭಾಗದ ಎಲ್ಲಾ ಜಿಲ್ಲೆಗಳ ಇಲಾಖಾಧಿಕಾರಿಗಳು ಹಾಗೂ ವಿವಿಧ ನಿಗಮದ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಖಾಲಿ ಹುದ್ದೆಗಳ ಭರ್ತಿಗೆ ಶೀಘ್ರ ಕ್ರಮ

ಮೈಸೂರು, ಸೆ.4(ಪಿಎಂ)– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಶೀಘ್ರ ಕ್ರಮ ವಹಿಸಲಾಗುವುದು. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖಾ ಸಚಿವ ಶಿವರಾಜ ಎಸ್.ತಂಗಡಗಿ ಹೇಳಿದರು.

ಸಭೆಯಲ್ಲಿ ಹಾಸ್ಟೆಲ್ ವಾರ್ಡನ್ ಸೇರಿದಂತೆ ವಿವಿಧ ಸಿಬ್ಬಂದಿ ಕೊರತೆ ವಿಚಾರ ಕೇಳಿ ಬಂದಾಗ, ಸಿಬ್ಬಂದಿ ಭರ್ತಿಗೆ ಕ್ರಮ ವಹಿಸುವುದಾಗಿ ಅವರು ತಿಳಿಸಿದರು. ಎಲ್ಲಾ ಅಧಿಕಾರಿ, ಸಿಬ್ಬಂದಿ ಸಮನ್ವಯತೆಯಿಂದ ಕೆಲಸ ಮಾಡಬೇಕು. ಕಚೇರಿಗೆ ಬರುವ ಜನರಿಗೆ ಉತ್ತಮವಾಗಿ ಸ್ಪಂದಿಸಬೇಕು. ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಬೇಕು ಎಂದರು.

ಕಾರ್ಯನಿಮಿತ್ತ ನಿರ್ಗಮನ: ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಸಂಬಂಧ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ಕಾರ್ಯನಿಮಿತ್ತ ಉಳಿದ ಜಿಲ್ಲೆಗಳ ಪ್ರಗತಿ ಪರಿಶೀಲನೆ ಕುರಿತಂತೆ ಸಭೆ ಮುಂದುವರೆಸಲು ಅಧಿಕಾರಿಗಳಿಗೆ ಸೂಚಿಸಿ ನಿರ್ಗಮಿಸಿದರು.

ವಿಶೇಷಚೇತನ ಉದ್ಯೋಗಿಯ ಚಾಕಚಕ್ಯತೆಗೆ ಸಚಿವರ ಅಚ್ಚರಿ–ಶಹಬ್ಬಾಸ್‌ಗಿರಿ



ಮೈಸೂರು,ಸೆ.4(ಪಿಎಂ)– ದಕ್ಷಿಣ ಕನ್ನಡ ಜಿಲ್ಲೆಯ ದೇವರಾಜ ಅರಸು ನಿಗಮದ ಸಹಾಯಕ ಅಭಿವೃದ್ಧಿ ಅಧಿಕಾರಿ (ಎಡಿಓ) ನಾರಾಯಣ ಮಾರುತಿ ಕುದುರೆಮನಿ ಹುಟ್ಟು ಅಂಧತ್ವ ಹೊಂದಿರುವ ವಿಶೇಷಚೇತನರು. ಅವರ ಕರ್ತವ್ಯನಿಷ್ಠೆ ಹಾಗೂ ಚಾಕಚಕ್ಯತೆ ಬಗ್ಗೆ ಕೇಳಿ 'ಕಣ್ಣು ಇದ್ದವರೂ ಇವರಷ್ಟು ಚುರುಕಾಗಿ ಕೆಲಸ ಮಾಡಲಿಕ್ಕೆ ಆಗೋಲ್ಲ. ಭಾರೀ ಗ್ರೇಟ್ ರೀ... ಒಳ್ಳೆಯದಾಗಲಿ...' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ಎಸ್.ತಂಗಡಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಅಲ್ಲದೆ, ಅವರ ಕೋರಿಕೆಯಂತೆ ಬೆಳಗಾವಿಗೆ ವರ್ಗಾವಣೆ ಮಾಡಲೂ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು. ಮೈಸೂರು ಜಿಪಂ ಸಭಾಂಗಣದಲ್ಲಿ ಸೋಮವಾರ ನಡೆದ ವಿಭಾಗ ಮಟ್ಟದ ಪ್ರಗತಿ ಪರಿಶೀಲನೆ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಇಲಾಖೆ ಡಿಓ ಅವರು, ನಾರಾಯಣ ಮಾರುತಿ ಕುದುರೆಮನಿಯವರ ಕಾರ್ಯವೈಖರಿ ಬಗ್ಗೆ ಸಚಿವರಿಗೆ ತಿಳಿಸಿದರು.

ಫೋನ್ ಆಪರೇಟ್ ಹೇಗೆ ಮಾಡುತ್ತೀರಾ? ಎಂದು ಕೇಳಿದ ಸಚಿವರು, ತಮ್ಮ ಮೊಬೈಲ್ ಸಂಖ್ಯೆ ಹೇಳಿದರು. ಆಗ ನಾರಾಯಣ ಅವರು ತಮ್ಮ ಮೊಬೈಲ್ ಫೋನ್ ಮೂಲಕ ಕರೆ ಮಾಡಿದ್ದನ್ನು ಕಂಡು ಸಚಿವರು ಅಚ್ಚರಿಗೊಂಡರು. ಟೈಪ್ ಮಾಡುವುದನ್ನು ರೀಡ್ ಮಾಡುವ ಆಪ್, ಸಾಫ್ಟ್‌ವೇರ್ ಸಹಾಯದಿಂದ ಕೆಲಸ ಮಾಡುತ್ತಿದ್ದೇನೆ. ಡೆಸ್ಕ್‌ಟಾಪ್‌ಗಿಂತ ಲ್ಯಾಪ್‌ಟಾಪ್ ಕೊಟ್ಟರೆ ಅನುಕೂಲ. ಡೆಸ್ಕ್‌ಟಾಪ್ ಇದ್ದರೂ ಅದಕ್ಕೆ ಸ್ಪೀಕರ್ ಸೌಲಭ್ಯ ಇಲ್ಲ ಎಂದು ನಾರಾಯಣ ಮನವಿ ಮಾಡಿದಾಗ, ಲ್ಯಾಪ್‌ಟಾಪ್ ಕೊಡಿಸಲು ಕ್ರಮ ವಹಿಸುವಂತೆ ಇಲಾಖೆಯ ಸರ್ಕಾರದ ಕಾರ್ಯದರ್ಶಿ ತುಲಸಿ ಮದ್ದಿನೇನಿ, ಅಧಿಕಾರಿಗಳಿಗೆ ಸೂಚಿಸಿದರು.

ಬೆಳಗಾವಿ ಜಿಲ್ಲೆಯ ಬೆಳಗಾವಿ ತಾಲೂಕಿನ ಪುಟ್ಟ ಗ್ರಾಮ ನನ್ನದು. ಅಲ್ಲಿಗೆ ಹೋಗಿ ಬರಲು ತೊಂದರೆ ಆಗುತ್ತಿದೆ. ಹಾಗಾಗಿ ಅಲ್ಲಿಗೆ ವರ್ಗ ಮಾಡಿಸಿಕೊಡಿ ಎಂದು ನಾರಾಯಣರವರು ಸಚಿವರಲ್ಲಿ ಮನವಿ ಮಾಡಿದಾಗ, ಅದಕ್ಕೂ ಸಚಿವರು ಸಮ್ಮತಿಸಿದರು.

ನೇಪಾಳ ವಿರುದ್ಧ ಜಯ: ಸೂಪರ್–4 ಹಂತಕ್ಕೇರಿದ ಟೀಂ ಇಂಡಿಯಾ



ಶ್ರೀಲಂಕಾ, ಸೆ.4– ಏಷ್ಯಾಕಪ್‌ನ 5ನೇ ಪಂದ್ಯದಲ್ಲಿ ಟೀಮ್ ಇಂಡಿಯಾ ನೇಪಾಳ ವಿರುದ್ಧ 10 ವಿಕೆಟ್‌ಗಳ ಅಮೋಘ ಗೆಲುವು ದಾಖಲಿಸಿದೆ. ಆ ಮೂಲಕ ಭಾರತ ಸೂಪರ್–4 ಸುತ್ತಿಗೆ ಪ್ರವೇಶಿಸಿದೆ. ಇದಕ್ಕೂ ಮುನ್ನ ಈ ಪಂದ್ಯದಲ್ಲಿ ಟಾಸ್ ಗೆದ್ದ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಬೌಲಿಂಗ್ ಆಯ್ದುಕೊಂಡಿದ್ದರು. ಅದರಂತೆ ಮೊದಲು ಬ್ಯಾಟ್ ಮಾಡಿದ ನೇಪಾಳ ತಂಡವು ಉತ್ತಮ ಆರಂಭ ಪಡೆಯಿತು.

ಆರಂಭದಲ್ಲೇ ಟೀಮ್ ಇಂಡಿಯಾ ಆಟಗಾರರು ಕೈಚೆಲ್ಲಿದ ಮೂರು ಕ್ಯಾಚ್‌ಗಳ ಸಂಪೂರ್ಣ ಲಾಭ ಪಡೆದ ಕುಶಾಲ್ ಭುರ್ಟೆಲ್ ಹಾಗೂ ಆಸಿಫ್ ಶೇಖ್ ಮೊದಲ ವಿಕೆಟ್‌ಗೆ 65 ರನ್‌ಗಳ ಜೊತೆಯಾಟವಾಡಿದರು. ಈ ಹಂತದಲ್ಲಿ ದಾಳಿಗಿಳಿದ ಶಾರ್ದೂಲ್ ಠಾಕೂರ್, ಕುಶಾಲ್ (38) ವಿಕೆಟ್ ಪಡೆದು ಟೀಮ್ ಇಂಡಿಯಾಗೆ ಮೊದಲ ಯಶಸ್ಸು ತಂದುಕೊಟ್ಟರು.

ಮತ್ತೊಂದೆಡೆ ಆಸಿಫ್ ಶೇಖ್ 97 ಎಸೆತಗಳಲ್ಲಿ 8 ಫೋರ್‌ಗಳೊಂದಿಗೆ 58 ರನ್ ಬಾರಿಸಿದರು. ಈ ಹಂತದಲ್ಲಿ ಸ್ಪಿನ್ ಮೋಡಿ ಮಾಡಿದ ರವೀಂದ್ರ ಜಡೇಜಾ ಮೂರು ವಿಕೆಟ್‌ಗಳನ್ನು ಪಡೆದು ನೇಪಾಳ ತಂಡಕ್ಕೆ ಶಾಕ್ ನೀಡಿದರು.

ಆದರೆ 8ನೇ ಕ್ರಮಾಂಕದಲ್ಲಿ ಕಣಕ್ಕಿಳಿದ ಸೋಂಪಾಲ್ ಕಮಿ 56 ಎಸೆತಗಳಲ್ಲಿ 48 ರನ್ ಬಾರಿಸುವ ಮೂಲಕ ತಂಡದ ಮೊತ್ತವನ್ನು 200 ರ ಗಡಿದಾಟಿಸಿದರು. ಈ ವೇಳೆ ದಾಳಿಗಿಳಿದ ಮೊಹಮ್ಮದ್ ಶಮಿ ಸೋಂಪಾಲ್ ವಿಕೆಟ್ ಪಡೆದರು. ಅಲ್ಲದೆ 48.2 ಓವರ್‌ಗಳಲ್ಲಿ ನೇಪಾಳ ತಂಡವನ್ನು 230 ರನ್‌ಗಳಿಗೆ ಆಲೌಟ್ ಮಾಡಿದರು. ಟೀಮ್ ಇಂಡಿಯಾ ಪರ ರವೀಂದ್ರ ಜಡೇಜಾ ಹಾಗೂ ಮೊಹಮ್ಮದ್ ಸಿರಾಜ್ ತಲಾ 3 ವಿಕೆಟ್ ಪಡೆದರೆ, ಶಮಿ, ಹಾರ್ದಿಕ್ ಪಾಂಡ್ಯ ಹಾಗೂ ಶಾರ್ದೂಲ್ ಠಾಕೂರ್ ಒಂದೊಂದು ವಿಕೆಟ್ ಕಬಳಿಸಿದರು.

ಡಕ್‌ವರ್ತ್ ಲೂಯಿಸ್ ನಿಯಮದಂತೆ ಟಾರ್ಗೆಟ್: 231 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾ ಬ್ಯಾಟಿಂಗ್ ವೇಳೆ ಮಳೆ ಬಂದಿದ್ದರಿಂದ ಕೆಲ ಕಾಲ ಪಂದ್ಯವು ಸ್ಥಗಿತಗೊಂಡಿತು. ಮಳೆ ನಿಂತ ಬಳಿಕ ಡಕ್‌ವರ್ತ್ ಲೂಯಿಸ್ ನಿಯಮದ ಪ್ರಕಾರ 23 ಓವರ್‌ಗಳಲ್ಲಿ ಟೀಮ್ ಇಂಡಿಯಾ 145 ರನ್‌ಗಳ ಗುರಿ ನೀಡಲಾಯಿತು.

ಈ ಸುಲಭ ಗುರಿಯನ್ನು ಬೆನ್ನತ್ತಿದ ಟೀಮ್ ಇಂಡಿಯಾಗೆ ಶುಭ್‌ಮನ್ ಗಿಲ್ ಹಾಗೂ ರೋಹಿತ್ ಶರ್ಮಾ ಉತ್ತಮ ಆರಂಭ ಒದಗಿಸಿದ್ದರು. ಕೇವಲ 39 ಎಸೆತಗಳಲ್ಲಿ ಅರ್ಧಶತಕ ಸಿಡಿಸುವ ಮೂಲಕ ಹಿಟ್‌ಮ್ಯಾನ್ ನೇಪಾಳ ಬೌಲರ್‌ಗಳ ಬೆಂಡೆತ್ತಿದರು. ಮತ್ತೊಂದೆಡೆ ಶುಭ್‌ಮನ್ ಗಿಲ್ 47 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.

ಅಂತಿಮ ಹಂತದವರೆಗೆ ಅಜೇಯರಾಗಿ ಉಳಿದ ರೋಹಿತ್ ಶರ್ಮಾ (74) ಹಾಗೂ ಶುಭ್‌ಮನ್ ಗಿಲ್ (67) 20.1 ಓವರ್‌ಗಳಲ್ಲಿ ತಂಡವನ್ನು ಗುರಿ ಮುಟ್ಟಿಸುವ ಮೂಲಕ ಟೀಮ್ ಇಂಡಿಯಾಗೆ 10 ವಿಕೆಟ್‌ಗಳ ಭರ್ಜರಿ ಜಯ ತಂದುಕೊಟ್ಟರು. ಈ ಗೆಲುವಿನೊಂದಿಗೆ ಭಾರತ ತಂಡವು ಸೂಪರ್–4 ಹಂತಕ್ಕೇರಿದೆ.

ಸನಾತನ ಧರ್ಮ ನಿರ್ಮೂಲನೆ ಹೇಳಿಕೆ: ಕಾಂಗ್ರೆಸ್ ಎಲ್ಲಾ ಧರ್ಮಗಳನ್ನು ಗೌರವಿಸುತ್ತದೆ

ನವದೆಹಲಿ: ಸನಾತನ ಧರ್ಮ ನಿರ್ಮೂಲನೆ ಮಾಡಬೇಕು ಎಂದಿರುವ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ನಾಯಕ ಕೆ ಸಿ ವೇಣುಗೋಪಾಲ್ ಅವರು, ತಮ್ಮ ಪಕ್ಷ ಎಲ್ಲ ಧರ್ಮಗಳನ್ನು ಗೌರವಿಸುತ್ತದೆ ಮತ್ತು ಇತರರಿಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ ಎಂದು ಸೋಮವಾರ ಹೇಳಿದ್ದಾರೆ. ಉದಯನಿಧಿ ಹೇಳಿಕೆ ಬಗ್ಗೆ ಕಾಂಗ್ರೆಸ್ ನಾಯಕರ ಮೌನವನ್ನು ಬಿಜೆಪಿ ಪ್ರಶ್ನಿಸಿತ್ತು. ವಿರೋಧ ಪಕ್ಷವು ಹಿಂದೂ ಧರ್ಮದ ವಿರುದ್ಧವಾಗಿದೆ ಎಂದು ಆರೋಪಿಸುತ್ತಿದ್ದಂತೆ ಕಾಂಗ್ರೆಸ್ ಈ ಪ್ರತಿಕ್ರಿಯೆ ನೀಡಿದೆ.



ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ ಸಿ ವೇಣುಗೋಪಾಲ್ ಮಾತನಾಡಿ, ಕಾಂಗ್ರೆಸ್ ನಿಲುವು ಸ್ಪಷ್ಟವಾಗಿದ್ದರೂ ಉಳಿದೆಲ್ಲ ರಾಜಕೀಯ ಪಕ್ಷಗಳಿಗೆ ತನ್ನದೇ ಆದ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ ಎಂದು ಬಿಜೆಪಿಗೆ ತಿರುಗೇಟು ನೀಡಿದ್ದಾರೆ. "ವಾಸ್ತವವಾಗಿ, ನಮ್ಮ ದೃಷ್ಟಿಕೋನವು ತುಂಬಾ ಸ್ಪಷ್ಟವಾಗಿದೆ – ಸರ್ವಧರ್ಮ ಸಂಭವ (ಎಲ್ಲಾ ಧರ್ಮಗಳಿಗೆ ಸಮಾನ ಗೌರವ) ಕಾಂಗ್ರೆಸ್ ಸಿದ್ಧಾಂತವಾಗಿದೆ. ಆದರೆ, ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸ್ವಾತಂತ್ರ್ಯವಿದೆ ಎಂದು ನೀವು ಅರ್ಥಮಾಡಿಕೊಳ್ಳಬೇಕು. ನಾವು ಪ್ರತಿಯೊಬ್ಬರ ನಂಬಿಕೆಗಳನ್ನು ಗೌರವಿಸುತ್ತೇವೆ ಎಂದು ಕಾಂಗ್ರೆಸ್ ನಾಯಕ ಹೇಳಿದ್ದಾರೆ.

ಮೈಸೂರು ಪಾಲಿಕೆ ಕೌನ್ಸಿಲ್ ಸಭೆ ಮುಂದೂಡಿದ್ದರ ಬಗ್ಗೆ ಪ್ರಶ್ನಿಸುವ ನೈತಿಕ ಹಕ್ಕು ಮೇಯರ್ ಶಿವಕುಮಾರ್‌ಗಿಲ್ಲ

● ಮಾಜಿ ಮೇಯರ್, ಪಾಲಿಕೆ ಕಾಂಗ್ರೆಸ್ ನಾಯಕ ಅಯೂಬ್ ಖಾನ್ ಎದಿರೇಟು ● ಹಲವು ಬಾರಿ ಮನಸ್ಸಿಗೆ ಬಂದಂತೆ ಕೌನ್ಸಿಲ್ ಮುಂದೂಡಿಲ್ಲವೇ? ಸ್ಥಾಯಿ ಸಮಿತಿಗಳ ಚುನಾವಣೆ ಮುಂದಕ್ಕೆ ಹಾಕಿಲ್ಲವೇ?



ಮೈಸೂರು, ಸೆ4(ಎಸ್‌ಬಿಡಿ)– ಮೈಸೂರು ನಗರ ಪಾಲಿಕೆ ಕೌನ್ಸಿಲ್ ಸಭೆ ಮುಂದೂಡಿದ್ದರ ಹಿನ್ನೆಲೆಯಲ್ಲಿ ಆಯುಕ್ತರ ವಿರುದ್ಧ ಆರೋಪ ಮಾಡಲು ಮೇಯರ್ ಶಿವಕುಮಾರ್ ಅವರಿಗೆ ಯಾವ ನೈತಿಕತೆ ಇದೆ ಎಂದು ಪಾಲಿಕೆಯ ಕಾಂಗ್ರೆಸ್ ನಾಯಕ ಅಯೂಬ್ ಖಾನ್ ಪ್ರಶ್ನಿಸಿದ್ದಾರೆ.

ಪಾಲಿಕೆಯ ತಮ್ಮ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಯೂಬ್ ಖಾನ್, ಆ.31ರ ಕೌನ್ಸಿಲ್ ಸಭೆ ಮುಂದೂಡಿದ್ದರ ಬಗ್ಗೆ ಹೇಳಿಕೆ ನೀಡಿರುವ ಮೇಯರ್ ಶಿವಕುಮಾರ್ ಹಾಗೂ ಸಂಸದ ಪ್ರತಾಪ್ ಸಿಂಹ, ಪಾಲಿಕೆ ಆಯುಕ್ತರು ಹಾಗೂ ಸರ್ಕಾರದ ವಿರುದ್ಧ ಆರೋಪ ಮಾಡಿದ್ದಾರೆ. 'ಗ್ರೇಟರ್ ಮೈಸೂರು' ಸಂಬಂಧಿತ ಕಾರ್ಯಸೂಚಿ ಮಂಡಿಸಲಾಗುತ್ತದೆ ಎಂಬುದೇ ಇದಕ್ಕೆ ಕಾರಣ ಎಂದು ಹೇಳಿದ್ದಾರೆ. ಆದರೆ ಕೌನ್ಸಿಲ್ ಸಭೆ ಮುಂದೂಡಿದ್ದರ ಬಗ್ಗೆ ಮಾತನಾಡಲು ಮೇಯರ್ ಶಿವಕುಮಾರ್‌ಗೆ ನೈತಿಕತೆ ಇಲ್ಲ ಎಂದರು.

ಶಿವಕುಮಾರ್ ಅವರ ಆಡಳಿತ ಅವಧಿಯಲ್ಲಿ ಹಲವು ಬಾರಿ ಇದ್ದಕ್ಕಿದ್ದಂತೆ ಕೌನ್ಸಿಲ್ ಸಭೆ ಮುಂದೂಡಿದ್ದಾರೆ. ಒಮ್ಮೆ ಕೌನ್ಸಿಲ್ ಸಭಾಂಗಣದೊಳಗೆ ಹೋದಾಗ ಸಭೆ ಮುಂದೂಡಿದ ನೋಟಿಸ್ ನೀಡಿದ್ದೂ ಇದೆ. ಅಲ್ಲದೆ 8–9 ತಿಂಗಳು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಆಯ್ಕೆ ಮಾಡದೆ ಆಡಳಿತ ನಡೆಸಿದ್ದಾರೆ. ಈ ಸಂಬಂಧ ಸಭೆ ನಡೆಯುವಾಗ ಮೇಯರ್ ದಿಢೀರ್ ಹೊರನಡೆದಿದ್ದರು. ಆಗ 64 ಸದಸ್ಯರ ಹಕ್ಕು ದಮನವಾಗಲಿಲ್ಲವೇ?. ಆ.31ರ ಸಭೆ ಮುಂದೂಡಿದ್ದರ ಬಗ್ಗೆ ಮಾತನಾಡುವಾಗ ಇದೆಲ್ಲವೂ ನೆನಪಾಗಲಿಲ್ಲವೇ? ಎಂದು ಪ್ರಶ್ನಿಸಿದರು.

ನಿಯಮಬಾಹಿರವಾಗಿ ಸಭೆ ಕರೆದಿದ್ದರು: ಕೌನ್ಸಿಲ್ ಸಭೆ ಮುಂದೂಡಿದ್ದರ ಬಗ್ಗೆ ನಾವು ವಿಚಾರಿಸಿದಾಗ ಒಂದಷ್ಟು ವಿಚಾರಗಳು ಗಮನಕ್ಕೆ ಬಂದವು. ನಿಯಮಾನುಸಾರ ಕೌನ್ಸಿಲ್ ಸಭೆಗೆ 7 ದಿನ ಮುಂಚಿತವಾಗಿ ಎಲ್ಲಾ ಸದಸ್ಯರಿಗೆ ಅಜೆಂಡಾ ಕಳುಹಿಸಬೇಕು. ಆದರೆ ಮೇಯರ್ ಶಿವಕುಮಾರ್, ಅಧಿಕಾರಿಗಳ ಮೇಲೆ ದಬ್ಬಾಳಿಕೆ ಮಾಡಿ, ಅಜೆಂಡಾದಲ್ಲಿನ ದಿನಾಂಕ ತಿದ್ದಿಸಿದ್ದಾರೆ. ಆ.26 ಅನ್ನು ಆ.24 ಎಂದು ತಿದ್ದಿ, 2 ದಿನದ ಬಳಿಕ ಸದಸ್ಯರಿಗೆ ಕಳುಹಿಸಲಾಗಿದೆ. ಇಂತಹ ನಿಯಮಬಾಹಿರ ಕೌನ್ಸಿಲ್ ಸಭೆಯನ್ನು ಮುಂದೂಡುವ ಅಧಿಕಾರ ಆಯುಕ್ತರಿಗಿದೆ. ಆದರೆ ಈ ವಿಚಾರವಾಗಿ ಮೇಯರ್ ಹಾಗೂ ಸಂಸದರು ಪಾಲಿಕೆ ಆಯುಕ್ತರ ವಿರುದ್ಧ ಆರೋಪ ಮಾಡುವ ಮೂಲಕ ಮೈಸೂರು ನಾಗರಿಕರಿಗೆ ಸುಳ್ಳು ಮಾಹಿತಿ ನೀಡಿದ್ದಾರೆ. ಬಿಜೆಪಿ ಆಡಳಿತಾವಧಿಯಲ್ಲಿ ಇಂತಹ ಸಾಕಷ್ಟು ಲೋಪಗಳಾಗಿವೆ. ಮೇಯರ್ ಸ್ಥಾನ ಅತ್ಯಂತ ಗೌರವಯುತವಾದದ್ದು. ಯಾರೇ ಆದರೂ ಕಾನೂನು ಚೌಕಟ್ಟಿನಲ್ಲಿ ನಿಯಮಾನುಸಾರ ಕಾರ್ಯ ನಿರ್ವಹಿಸಬೇಕು ಎಂದರು.

ಸಚಿವರು ಸಭೆ ಕರೆಯಬಾರದೆ?: 'ಗ್ರೇಟರ್ ಮೈಸೂರು' ಯೋಜನೆ ಸರ್ಕಾರಕ್ಕೆ ಇಷ್ಟವಿಲ್ಲದ ಕಾರಣ ನಗರಾಭಿವೃದ್ಧಿ ಸಚಿವರು ಅಧಿಕಾರಿಗಳ ಸಭೆ ಕರೆದು, ಪಾಲಿಕೆ ಕೌನ್ಸಿಲ್ ಸಭೆಗೆ ಬ್ರೇಕ್ ಹಾಕಿದ್ದಾರೆ ಎಂದು ಮೇಯರ್ ಹಾಗೂ ಸಂಸದರು ಆರೋಪಿಸಿದ್ದಾರೆ. ಆದರೆ ದಸರಾ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಸಚಿವರು ಅಧಿಕಾರಿಗಳ ಸಭೆ ನಡೆಸುವುದು ಸಹಜ. ಹಾಗಾದರೆ ಸಚಿವರು ಅಧಿಕಾರಿಗಳ ಸಭೆ ಕರೆಯಬಾರದೇ ಎಂದು ಪ್ರಶ್ನಿಸಿದರು.

8 ತಿಂಗಳಿಂದ ಸುಮ್ಮನಿದ್ದರು: ಗ್ರೇಟರ್ ಮೈಸೂರು ಅರ್ಥಾತ್ ಬೃಹತ್ ಮೈಸೂರು ಮಹಾನಗರ ಪಾಲಿಕೆ ಪ್ರಸ್ತಾವನೆ ಜಿಲ್ಲಾಧಿಕಾರಿಗಳಿಂದ ಪಾಲಿಕೆಗೆ ಬಂದು 8–9 ತಿಂಗಳಾಗಿದೆ. ಈವರೆಗೆ ಮೇಯರ್ ಮಲಗಿದ್ದರಾ? ಪ್ರತಾಪ್ ಸಿಂಹ ಏನು ಮಾಡುತ್ತಿದ್ದರು?. ಕೌನ್ಸಿಲ್‌ನಲ್ಲಿ ಮಂಡಿಸಿ, ಏಕೆ ಚರ್ಚೆ ನಡೆಸಲಿಲ್ಲ?. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗಲೂ ಏಕೆ ಕ್ರಮ ವಹಿಸಲಿಲ್ಲ?. ಕೊನೆ ಕ್ಷಣದಲ್ಲಿ ಏಕಾಏಕಿ ಚರ್ಚೆಗೆ ತಂದರೆ ಏನರ್ಥ. ಮೈಸೂರು ಸದ್ಯ 87 ಚದರ ಕಿ.ಮೀ ಇದೆ. ಗ್ರೇಟರ್ ಮೈಸೂರು ಪ್ರಸ್ತಾವನೆಯಲ್ಲಿ 187 ಚದರ ಕಿ.ಮೀ. ಹೆಚ್ಚುವರಿಯಾಗಿ ಸೇರ್ಪಡೆಯಾಗಲಿದೆ. ಈಗಿರುವ ಮಾನವ ಶಕ್ತಿ ಮೂರು ಪಟ್ಟು ಹೆಚ್ಚಿಗೆ ಬೇಕಾಗುತ್ತದೆ. ಇಂತಹ ಗಂಭೀರ ವಿಷಯದ ಬಗ್ಗೆ ಸಮಗ್ರ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು. ಕಾಂಗ್ರೆಸ್ ಸದಸ್ಯರಾದ ಆರೀಫ್ ಹುಸೇನ್, ಪುಷ್ಪಲತಾ ಜಗನ್ನಾಥ್, ಸಿ.ಶ್ರೀಧರ್, ಸೈಯದ್ ಹಸ್ರತ್ ಉಲ್ಲಾ ಸುದ್ದಿಗೋಷ್ಠಿಯಲ್ಲಿದ್ದರು.

ಏಕೆ ಸೋಲಿಸಬೇಕು ಎಂದು ಹೇಳುತ್ತೇವೆ

ಪ್ರತಾಪ್ ಸಿಂಹನನ್ನು ಸೋಲಿಸಿ ಎಂಬ ಮುಖ್ಯಮಂತ್ರಿ ಹೇಳಿಕೆಗೆ ಸಂಸದ ಪ್ರತಾಪ್ ಸಿಂಹ ಖಾರವಾಗಿ ಪ್ರತಿಕ್ರಿಯಿಸಿದ್ದರು. ಈ ಬಗ್ಗೆ ಅಯೂಬ್ ಖಾನ್ ಮಾತನಾಡಿ, ಪ್ರತಾಪ್ ಸಿಂಹ ಅವರೇ, ಸಿಎಂ ಸಿದ್ದರಾಮಯ್ಯ ನಿಮ್ಮ ಹಾಗೆ ಒಂದು ಜಾತಿ ಅಥವಾ ಧರ್ಮಕ್ಕೆ ಸೇರಿದವರಲ್ಲ. ಅವರಿಗೆ ಎಲ್ಲರೂ ಬೇಕು. ಅವರು ಬೇರೆಲ್ಲೂ ಅಲ್ಲ ನಿಮ್ಮ ಕ್ಷೇತ್ರ ವ್ಯಾಪ್ತಿಯಲ್ಲೇ ಮಾತನಾಡಿದ್ದಾರೆ. ಅಲ್ಲಿ ಹಿಂದು–ಮುಸ್ಲಿಮ್ ಸಾಮರಸ್ಯದಿಂದ ಜೀವನ ನಡೆಸುತ್ತಿದ್ದಾರೆ. ಉದಯಗಿರಿ, ರಾಜೀವ್‌ನಗರವೂ ನಿಮ್ಮ ವ್ಯಾಪ್ತಿಗೆ ಬರುತ್ತದೆ. ಸಮಯ ಬಂದಾಗ ನಾವು ಎಲ್ಲಾ ಕಡೆ ಬಂದು, ನಿಮ್ಮನ್ನು ಏಕೆ ಸೋಲಿಸಬೇಕೆಂದು ಜನರಿಗೆ ತಿಳಿಸುತ್ತೇವೆ. - ಅಯೂಬ್ ಖಾನ್

ಅಕ್ರಮ ಮದ್ಯ ನಾಶ: ಅವೈಜ್ಞಾನಿಕ ವಿಧಾನದ ಮೂಲಕ ನಾಶಕ್ಕೆ ಆಕ್ಷೇಪ



ಮೈಸೂರು, ಸೆ. 4– ನಂಜನಗೂಡಿನ ಯುನೈಟೆಡ್ ಬ್ರೇವರಿಸ್ ಲಿಮಿಟೆಡ್‌ನಲ್ಲಿ ಕಳೆದ ಜುಲೈ 15ರಂದು ತಯಾರಿಸಲ್ಪಟ್ಟ 10.48 ಲಕ್ಷ ರೂ. ಮೌಲ್ಯದ 3658.200 ಲೀಟರ್ ಮಾನವ ಸೇವನೆಗೆ ಯೋಗ್ಯವಲ್ಲದ ಕಿಂಗ್ ಫಿಷರ್ ಅಲ್ಟ್ರಾ ಲಾರ್ಜ್ ಬಿಯರ್ ಅನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಇಂದು ನಾಶಪಡಿಸಿದರು.

ಈ ಬಿಯರ್ ಅನ್ನು ವಶಪಡಿಸಿಕೊಂಡಿದ್ದ ಅಬಕಾರಿ ಇಲಾಖೆ ಅಧಿಕಾರಿಗಳು ಮೈಸೂರು ಹೆಬ್ಬಾಳು ಮದ್ಯ ಮಳಿಗೆಯಲ್ಲಿ ದಾಸ್ತಾನು ಮಾಡಿದ್ದರು. ಬೆಂಗಳೂರಿನ ಅಬಕಾರಿ ಆಯುಕ್ತರು ಮತ್ತು ಮೈಸೂರಿನ ಅಬಕಾರಿ ಉಪ ಆಯುಕ್ತರ ಆದೇಶದ ಮೇರೆಗೆ ಮೈಸೂರು ನಗರ ಅಬಕಾರಿ ಉಪ ಆಯುಕ್ತ ಮಹೇಶ್ ಕುಮಾರ್, ಅಬಕಾರಿ ಉಪ ಅಧೀಕ್ಷಕ ಆನಂದಕುಮಾರ್, ಅಬಕಾರಿ ನಿರೀಕ್ಷಕರಾದ ರಮೇಶ್, ಶ್ರೀಮತಿ ಟಿ.ವಿ. ಸರಸ್ವತಿ, ಕೆಎಸ್‌ಬಿಸಿಎಲ್ ಮದ್ಯ ಮಳಿಗೆ ವ್ಯವಸ್ಥಾಪಕ ಎನ್. ಲೋಕೇಶ್ ಸಮ್ಮುಖದಲ್ಲಿ ಮಾನವ ಸೇವನೆಗೆ ಯೋಗ್ಯವಲ್ಲದ ಬಿಯರ್ ಅನ್ನು ನಾಶಪಡಿಸಲಾಯಿತು.

ಅವೈಜ್ಞಾನಿಕ ವಿಧಾನ: ಮಾನವ ಸೇವನೆಗೆ ಯೋಗ್ಯವಲ್ಲದ ಹಾಗೂ ನಕಲಿ ಮದ್ಯವನ್ನು ವೈಜ್ಞಾನಿಕವಾಗಿ ನಾಶಪಡಿಸಲು ಅದರದೇ ಆದ ವಿಧಿವಿಧಾನಗಳಿರುತ್ತವೆ. ಹೀಗೆ ಮದ್ಯವನ್ನು ಅದು ಮಾನವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರದಿರುವಂತೆ ಹಾಗೂ ಪರಿಸರಕ್ಕೆ ಹಾನಿಯಾಗದಂತೆ ನಾಶಪಡಿಸಬೇಕಾಗುತ್ತದೆ. ಆದರೆ, ಅಬಕಾರಿ ಅಧಿಕಾರಿಗಳಿಗೆ ಇದರ ಪರಿವೇ ಇಲ್ಲವೆನಿಸುತ್ತದೆ. ಈ ಅಧಿಕಾರಿಗಳು 469 ಪೆಟ್ಟಿಗೆಗಳಲ್ಲಿದ್ದ 3658.200 ಲೀಟರ್ ಬೃಹತ್ ಪ್ರಮಾಣದ ಬಿಯರ್ ಬಾಟಲ್‌ಗಳನ್ನು ಓಪನ್ ಮಾಡಿ, ಚರಂಡಿಗೆ ಸುರಿಯುವ ಮೂಲಕ ಅವೈಜ್ಞಾನಿಕವಾಗಿ ನಾಶ ಮಾಡಿರುವುದು ಕಂಡುಬಂದಿದೆ. ಅದರಲ್ಲಿ ಇನ್ನೂ ಶೋಚನೀಯ ವಿಷಯವೆಂದರೆ ಬಿಯರ್ ಸುರಿಯಲ್ಪಟ್ಟ ಚರಂಡಿಯಲ್ಲಿ ಗಿಡಗಂಟಿಗಳು ಬೆಳೆದು ನಿಂತಿದ್ದು, ಸುರಿಯಲ್ಪಟ್ಟ ಬಿಯರ್ ಅಲ್ಲೇ ಸಂಗ್ರಹವಾಗಿ ಸುತ್ತಮುತ್ತಲ ಪರಿಸರಕ್ಕೆ ಹಾನಿ ಉಂಟುಮಾಡುತ್ತದೆ, ಅಲ್ಲಿ ಖಾಲಿ ಬಾಟಲ್‌ಗಳು ತುಂಬಿರುವುದು ಕಂಡು ಬರುತ್ತಿದೆ. ಇದರ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಸ್ರೋ ವಿಜ್ಞಾನಿ, ಚಂದ್ರಯಾನ–3ರ ಕೌಂಟ್‌ಡೌನ್ ಹಿಂದಿನ ಧ್ವನಿಯಾಗಿದ್ದ ವಲರ್ಮತಿ ನಿಧನ



ಶ್ರೀಹರಿಕೋಟ: ಚಂದ್ರಯಾನ–3 ಉಡಾವಣೆ ಕ್ಷಣಗಣನೆಯ ಹಿಂದಿನ ಧ್ವನಿಯಾಗಿದ್ದ ಇಸ್ರೋ ವಿಜ್ಞಾನಿ ನಿಧನರಾಗಿದ್ದಾರೆ. ಭಾರತದ ಸ್ಥಾನಮಾನವನ್ನು ಉತ್ತುಂಗಕ್ಕೇರಿಸಿದ ಚಂದ್ರಯಾನ–3 ಉಡಾವಣೆ ಸಮಯದಲ್ಲಿ ಹಿಂದಿನ ಧ್ವನಿಯಾಗಿದ್ದ ವಿಜ್ಞಾನಿ ಕೊನೆಯುಸಿರೆಳೆದಿದ್ದಾರೆ.

ಶ್ರೀಹರಿಕೋಟಾದಲ್ಲಿ ರಾಕೆಟ್ ಉಡಾವಣೆಗಾಗಿ ಕ್ಷಣಗಣನೆಯಲ್ಲಿ ಧ್ವನಿ ನೀಡಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವಿಜ್ಞಾನಿ ವಲರ್ಮತಿ ಅವರು ಹೃದಯ ಸ್ತಂಭನದಿಂದ ನಿಧನರಾಗಿದ್ದಾರೆ. ಇವರು ಕೊನೆಯ ಕ್ಷಣದವರೆಗೂ ದೇಶದ ಮೂರನೇ ಚಂದ್ರಯಾನ–3ರ ಉಡಾವಣೆಯಲ್ಲಿ ಹಿನ್ನೆಲೆ ಧ್ವನಿ ನೀಡಿದ್ದರು. ಮೂಲತಃ ತಮಿಳುನಾಡಿನ ಅರಿಯಾಲೂರ್‌ನವರಾದ ಇವರು, ಶನಿವಾರ ಮೃತಪಟ್ಟಿದ್ದಾರೆ ಎಂದು ವರದಿ ತಿಳಿಸಿದೆ.

ಇಸ್ರೊ ಮಾಜಿ ನಿರ್ದೇಶಕ ಪಿ.ವಿ ವೆಂಕಟಕೃಷ್ಣನ್ ಅವರು ಟ್ವಿಟರ್ ಖಾತೆಯಲ್ಲಿ, 'ಶ್ರೀಹರಿಕೋಟಾದಿಂದ ಇಸ್ರೊ ಭವಿಷ್ಯದ ಮಿಷನ್‌ಗಳ ಕ್ಷಣಗಣನೆಗೆ ವಲರ್ಮತಿ ಮೇಡಂ ಅವರ ಧ್ವನಿ ಇರುವುದಿಲ್ಲ. ಚಂದ್ರಯಾನ–3ರ ಅಂತಿಮ ಕ್ಷಣಗಣನೆ ಅವರ ಕೊನೆಯ ಘೋಷಣೆಯಾಗಿತ್ತು. ಅನಿರೀಕ್ಷಿತ ನಿಧನ. ತುಂಬಾ ದುಃಖವಾಗುತ್ತಿದೆ. ಪ್ರಣಾಮಗಳು' ಎಂದು ಬರೆದುಕೊಂಡಿದ್ದಾರೆ. ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ ಅಬ್ದುಲ್ ಕಲಾಂ ಅವರ ಸ್ಮರಣಾರ್ಥವಾಗಿ ತಮಿಳುನಾಡು ಸರ್ಕಾರ ನೀಡುವ ಪ್ರತಿಷ್ಠಿತ ಅಬ್ದುಲ್ ಕಲಾಂ ಪ್ರಶಸ್ತಿಗೆ ವಲರ್ಮತಿ ಅವರು ಭಾಜನರಾಗಿದ್ದರು. 31 ಜುಲೈ 1959 ರಂದು ಜನಿಸಿದ ವಲರ್ಮತಿ ಅವರು 1984 ರಲ್ಲಿ ಇಸ್ರೋಗೆ ಸೇರಿ, ಹಲವಾರು ಕಾರ್ಯಾಚರಣೆಗಳಲ್ಲಿ ಭಾಗವಹಿಸಿದರು.

ಕೆಎಸ್‌ಆರ್‌ಟಿಸಿ ವಿದ್ಯಾರ್ಥಿ ಪಾಸ್ ಅವಧಿ ವಿಸ್ತರಣೆ; ಅಕ್ಟೋಬರ್‌ವರೆಗೆ ಪ್ರಯಾಣಕ್ಕೆ ಅವಕಾಶ

ಬೆಂಗಳೂರು: ರಾಜ್ಯದ ಕೆಲವು ಕಾಲೇಜುಗಳು ಇನ್ನೂ ಪರೀಕ್ಷೆಗಳನ್ನು ನಡೆಸದ ಕಾರಣ 2022–23ನೇ ಶೈಕ್ಷಣಿಕ ವರ್ಷಕ್ಕೆ ನೀಡಲಾದ ಕೆಎಸ್‌ಆರ್‌ಟಿಸಿ ವಿದ್ಯಾರ್ಥಿ ಬಸ್ ಪಾಸ್‌ಗಳ ಅವಧಿಯನ್ನು ಅಕ್ಟೋಬರ್‌ವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ಯಾವುದೇ ವೆಚ್ಚವಿಲ್ಲದೆ ಪಾಸ್‌ಗಳ ಅವಧಿಯನ್ನು ವಿಸ್ತರಿಸಲಾಗಿತ್ತು. ಆದರೆ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಿನಲ್ಲಿ ಪಾಸ್‌ಗಳ ಬಳಕೆಗೆ ಹಣವನ್ನು ನೀಡಬೇಕಿದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಹೇಳಿದ್ದಾರೆ.

ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಕಾನೂನು, ಬಿ.ಫಾರ್ಮ್, ಕಾನೂನು ಮತ್ತಿತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪದವಿ ಇನ್ನೂ ಪೂರ್ಣಗೊಂಡಿಲ್ಲ. ಪರೀಕ್ಷೆ ಹಿನ್ನೆಲೆಯಲ್ಲಿ ಈ ಹಿಂದೆ ಜುಲೈ ಮತ್ತು ಆಗಸ್ಟ್‌ವರೆಗೆ ಪಾಸ್ ಅವಧಿಯನ್ನು ವಿಸ್ತರಣೆ ಮಾಡಲಾಗಿತ್ತು. ಆದರೆ, ಇನ್ನೂ ಕೆಲ ಕಾಲೇಜುಗಳು ಪರೀಕ್ಷೆಯನ್ನು ನಡೆಸಿಲ್ಲ. ಹೀಗಾಗಿ ಪಾಸ್ ಅವಧಿ ವಿಸ್ತರಿಸುವಂತೆ ಕಾಲೇಜು ವಿದ್ಯಾರ್ಥಿಗಳಿಂದ ಪದೇ ಪದೆ ಮನವಿಗಳು ಬರುತ್ತಿದ್ದವು. ಹೀಗಾಗಿ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ಆಯಾ ಕಾಲೇಜುಗಳಿಂದ ಪರೀಕ್ಷಾ ದಿನಾಂಕಗಳ ವಿವರಗಳೊಂದಿಗೆ ಪತ್ರವನ್ನು ಪಡೆದ ವಿದ್ಯಾರ್ಥಿಗಳ ಪಾಸ್ ಅವಧಿಯನ್ನು ಅಕ್ಟೋಬರ್‌ವರೆಗೆ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ಆದರೆ, ವಿದ್ಯಾರ್ಥಿಗಳು ತಮ್ಮ ಪಾಸ್ ಅವಧಿಯನ್ನು ವಿಸ್ತರಿಸಲು ಹಳೆಯ ಬಸ್‌ಪಾಸ್‌ಗಳನ್ನು ಸಲ್ಲಿಸಿ, ಪಾಸ್ ಅವಧಿ ವಿಸ್ತರಿಸಲು ಹಣವನ್ನು ಕಟ್ಟಬೇಕಾಗುತ್ತದೆ ಎಂದು ಹೇಳಿದ್ದಾರೆ.

ಪಶ್ಚಿಮ ಘಟ್ಟ ಸಂರಕ್ಷಣೆಗೆ 30 ಲಕ್ಷ ಡಾಲರ್ ಹೂಡಿಕೆ ಮಾಡಲಿರುವ ಅಮೆಜಾನ್



ನವದೆಹಲಿ: ಪ್ರಕೃತಿ ಸಂಬಂಧ ಯೋಜನೆಗಳಲ್ಲಿ ಭಾರತದಲ್ಲಿ 30 ಲಕ್ಷ ಡಾಲರ್ ಹೂಡಿಕೆ ಮಾಡುವುದಾಗಿ ಇ–ಕಾಮರ್ಸ್ ದೈತ್ಯ ಅಮೆಜಾನ್ ಹೇಳಿದೆ.

ಏಷ್ಯಾ ಪೆಸಿಫಿಕ್ ವಲಯದಲ್ಲಿ ಪರಿಸರ ಸಂಬಂಧಿ ಯೋಜನೆಗಳಿಗಾಗಿ ಒಟ್ಟು 1.5 ಕೋಟಿ ಡಾಲರ್ ಹೂಡಿಕೆ ಮಾಡಲು ಅಮೆಜಾನ್ ಉದ್ದೇಶಿಸಿದ್ದು, ಇದರ ಭಾಗವಾಗಿ ಭಾರತದಲ್ಲೂ ಹೂಡಿಕೆ ಮಾಡುವುದಾಗಿ ಹೇಳಿದೆ.

ವನ್ಯಜೀವಿ ಅಧ್ಯಯನ ಕೇಂದ್ರದ (Centre for Wildlife Studies) ಸಹಯೋಗದೊಂದಿಗೆ ಪಶ್ಚಿಮ ಘಟ್ಟದಲ್ಲಿನ ಸಮುದಾಯಗಳನ್ನು ಮತ್ತು ಸಂರಕ್ಷಣಾ ಪ್ರಯತ್ನಗಳನ್ನು ಬೆಂಬಲಿಸಲು ಈ ಹೂಡಿಕೆ ಮಾಡಲಾಗುತ್ತಿದೆ. ಪಶ್ಚಿಮ ಘಟ್ಟವು ವಿಶ್ವದಲ್ಲೇ ಅತೀ ಹೆಚ್ಚು ಆನೆ ಹಾಗೂ ಹುಲಿಗಳ ಆವಾಸಸ್ಥಾನವಾಗಿದ್ದು, ದೇಶದ ಶೇ 30ಕ್ಕೂ ಅಧಿಕ ವನ್ಯಜೀವಿಗಳು ಇಲ್ಲಿವೆ ಎಂದು ಅಮೆಜಾನ್ ಪ್ರಕಟಣೆಯಲ್ಲಿ ತಿಳಿಸಿದೆ.

10 ಲಕ್ಷ ಡಾಲರ್ ವೆಚ್ಚದಲ್ಲಿ 'ವೈಲ್ಡ್ ಕಾರ್ಬನ್' ಯೋಜನೆ ಕೈಗೊಳ್ಳಲಿದೆ. ಇದರಲ್ಲಿ 10,000 ರೈತರಿಗೆ 10 ಲಕ್ಷ ಹಣ್ಣು ನೀಡುವ, ಮರಮಟ್ಟುಗಳಿಗೆ ಉಪಯೋಗವಾಗುವಂಥ ಮತ್ತು ಔಷಧೀಯ ಸಸಿಗಳ ನೆಡಲು ಹಾಗೂ ಪಾಲನೆ ಮಾಡಲು ಬೆಂಬಲ ನೀಡಲಾಗುತ್ತದೆ ಎಂದು ಅಮೆಜಾನ್ ಹೇಳಿದೆ.

ಏಷ್ಯಾ–ಪೆಸಿಫಿಕ್ ವಲಯದಲ್ಲಿ ದಟ್ಟ ಕಾಡು ಹಾಗೂ ಕರಾವಳಿ ಪ್ರದೇಶಗಳು ಇದ್ದರೂ, ಹವಾಮಾನ ಬದಲಾವಣೆ, ಜೀವವೈವಿಧ್ಯದ ನಷ್ಟ ಮತ್ತು ಮಣ್ಣಿನ ಸವಕಳಿಯಿಂದಾಗಿ ಹೆಚ್ಚು ದುರ್ಬಲವಾಗಿದೆ. ಹವಾಮಾನ ಬದಲಾವಣೆಯ ದುಷ್ಪರಿಣಾಮಗಳಿಂದ ರಕ್ಷಿಸಲು ಹಾಗೂ ಜೀವವೈವಿಧ್ಯಗಳನ್ನು ಕಾಪಾಡಲು, ಭಾರಿ ಹಾಗೂ ಸಣ್ಣ ಯೋಜನೆಗಳು ಬೇಕಾಗಿವೆ. ನಾವು ಎರಡಲ್ಲೂ ಹೂಡಿಕೆ ಮಾಡಲು ಬದ್ಧರಾಗಿದ್ದೇವೆ ಎಂದು ಅಮೆಜಾನ್‌ನ ಜಾಗತಿಕ ಸುಸ್ಥಿರ ಯೋಜನೆಯ ಉಪಾಧ್ಯಕ್ಷೆ ಕಾರಾ ಹಸ್ಟ್ ಹೇಳಿದ್ದಾರೆ.

'ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ' ಲೋಕಾರ್ಪಣೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅನಾವರಣ



ಮೈಸೂರು, ಸೆ.4(ಸಿಎನ್)–ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ದಕ್ಷಿಣ ಕರ್ನಾಟಕ ಭಾಗಕ್ಕೆ ಮಾತ್ರ ಸೀಮಿತವಾಗಿರದೆ, ಉತ್ತರ ಕರ್ನಾಟಕ ಭಾಗದಲ್ಲೂ ರಂಗ ಶಿಕ್ಷಣ ಪಸರಿಸಬೇಕಿದೆ. ನಮ್ಮ ಭಾಗದಲ್ಲೂ ರಂಗ ಕಲಾವಿದರ ದಂಡೇ ಇದೆ. ಅವರಿಗೆ ಮತ್ತಷ್ಟು ಉತ್ತೇಜನ ದೊರಕಿದರೆ ಮುಖ್ಯ ವಾಹಿನಿಗೆ ಬರುತ್ತಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅಭಿಪ್ರಾಯಪಟ್ಟರು.

ನಗರದ ಹಾರ್ಡ್ವಿಕ್ ಶಾಲೆಯ ಆವರಣದಲ್ಲಿ ಇಂಡಿಯನ್ ಥಿಯೇಟರ್ ಫೌಂಡೇಷನ್ ಹಾಗೂ ಹಾರ್ಡ್ವಿಕ್ ಪಿಯು ಕಾಲೇಜಿನ ಸಹಯೋಗದಲ್ಲಿ ನೂತನ 'ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ'ಯನ್ನು ಸೋಮವಾರ ಉದ್ಘಾಟಿಸಿ ಅವರು ಮಾತನಾಡಿದರು.

ಸೆ.19 ರಿಂದ 24 ರವರೆಗೆ ಮೈಸೂರು, ಬೆಂಗಳೂರು, ಮಂಡ್ಯ ಮತ್ತು ಚಾಮರಾಜನಗರದಲ್ಲಿ ನಡೆಯುವ ರಾಷ್ಟ್ರೀಯ ಮಕ್ಕಳ ರಂಗೋತ್ಸವ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾತನಾಡಿದ ಅವರು, ಸಮಾಜವನ್ನು ಜಾಗೃತಗೊಳಿಸುವ ನಿಟ್ಟಿನಲ್ಲಿ ರಂಗಭೂಮಿ ಪಾತ್ರ ಮಹತ್ತರವಾಗಿದೆ. ಈ ನಿಟ್ಟಿನಲ್ಲಿ ರಂಗಭೂಮಿಯನ್ನು ಸದೃಢ ಪಡಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದ್ದು, ರಂಗಭೂಮಿ ಚಟುವಟಿಕೆಗೆ ಬೇಕಾದ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.

ಇಂಡಿಯನ್ ಥಿಯೇಟರ್ ಫೌಂಡೇಶನ್, ಮ್ಯಾನೇಜಿಂಗ್ ಟ್ರಸ್ಟಿ, ಹಿರಿಯ ರಂಗಕರ್ಮಿ ಪ್ರಸನ್ನ ಮಾತನಾಡಿ, ಈ ಸಂಸ್ಥೆಯು ಕರ್ನಾಟಕ ಸರ್ಕಾರದ ಸಹಯೋಗದಲ್ಲಿ ಆರಂಭವಾಗಿದೆ. ಅಲ್ಲದೇ ಇದೇ ತಿಂಗಳು 19 ರಿಂದ 24 ರವರೆಗೆ ನಡೆಯುವ ಮಕ್ಕಳ ರಂಗೋತ್ಸವದ ಭಿತ್ತಿಚಿತ್ರಗಳನ್ನು ಸಚಿವ ಶಿವರಾಜ್ ತಂಗಡಗಿ ಅವರೇ ಅನಾವರಣಗೊಳಿಸಿದ್ದಾರೆ. ಸರ್ಕಾರ ನಮ್ಮೊಡನೆ ಕೈ ಜೋಡಿಸಿದರೆ ಭಾರತದಲ್ಲೇ ಉತ್ತಮ ಶೈಕ್ಷಣಿಕ ರಂಗ ಸಂಸ್ಥೆಯಾಗಿ ಹೊರಹೊಮ್ಮಲಿದೆ ಎಂದರು.

ಭಾರತೀಯ ಶೈಕ್ಷಣಿಕ ರಂಗಭೂಮಿ ದೇಶದಲ್ಲೇ ಪ್ರಥಮ ಸಂಸ್ಥೆಯಾಗಿದ್ದು, ಇದೊಂದು ಪಿಪಿಪಿ(ಸಾರ್ವಜನಿಕ, ಖಾಸಗಿ ಪಾಲುದಾರಿಕೆ) ಮಾದರಿಯ ರಂಗ ಸಂಸ್ಥೆಯಾಗಿದೆ. ದೇಶ ವಿದೇಶಗಳ ತಜ್ಞರು ಸಮಾಲೋಚನಾ ಸಭೆಯಲ್ಲಿ ಭಾಗವಹಿಸುತ್ತಾರೆ. ರಂಗೋತ್ಸವಕ್ಕೆ 1.25 ಕೋಟಿ ರೂ ವೆಚ್ಚವಾಗಲಿದ್ದು, ಅಜೀಂ ಪ್ರೇಮ್‌ಜೀ ಫೌಂಡೇಷನ್ ಸಂಸ್ಥೆಯು ಮಕ್ಕಳ ರಂಗೋತ್ಸವ ಕಾರ್ಯಕ್ರಮಕ್ಕೆ ಬರೋಬ್ಬರಿ 25 ಲಕ್ಷ ರೂ. ದೇಣಿಗೆ ನೀಡಿದೆ. ಅಲ್ಲದೇ ವಿವಿಧ ರಂಗ ಕಲಾವಿದರು, ನಾಗರಿಕರೂ ಸಹ ಧನ ಸಹಾಯ ಮಾಡುತ್ತಿದ್ದಾರೆ. ಅರ್ಧದಷ್ಟು ಮೊತ್ತವನ್ನು ನಾವು ಹೊಂದಿಸಲಿದ್ದೇವೆ. ಉಳಿದ ಅರ್ಧಭಾಗ ಕನ್ನಡ ಸಂಸ್ಕೃತಿ ಇಲಾಖೆಯಿಂದ ನೀಡಬೇಕು ಎಂದು ಮನವಿ ಮಾಡಿದರು.

ಕರ್ನಾಟಕವು ದೇಶದಲ್ಲಿಯೇ ಶೈಕ್ಷಣಿಕ ರಂಗಭೂಮಿಯ ತವರಾಗಿದೆ. ಶೈಕ್ಷಣಿಕ ರಂಗಭೂಮಿಯ ಚಟುವಟಿಕೆಗಳನ್ನು ಮುನ್ನೆಲೆಗೆ ತರುವುದು ಸಂಸ್ಥೆಯ ಮೂಲ ಉದ್ದೇಶ. ಮಕ್ಕಳಲ್ಲಿ ಈಗಿರುವ ಕಲಿಕೆಯ ಹೊರೆಯನ್ನು ಹಗುರಾಗಿಸಿ, ಲವಲವಿಕೆಯಿಂದ ಕಲಿಸಲು ಉತ್ತೇಜಿಸುವುದು ಇದರಿಂದ ಸಾಧ್ಯವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಂಗಕರ್ಮಿಗಳಾದ ನೀಮಾ, ಇಂದ್ರನಾಯರ್, ಮೈಸೂರು ಲಿಟರರಿ ಫೌಂಡೇಷನ್‌ನ ಶುಭ ಅರಸ್ ಮುಂತಾದವರು ಹಾಜರಿದ್ದರು. ಕಾರ್ಯಕ್ರಮದ ಬಳಿಕ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಕಲಾವಿದರಿಂದ 'ಕುಪ್ಪಳ್ಳಿ ಪುಟ್ಟ' ನಾಟಕ ಪ್ರದರ್ಶನ ಮಾಡಿದರು.

ಬರ ಪೀಡಿತ ತಾಲೂಕುಗಳಿಗೆ ಹಣದ ಬದಲು 10 ಕೆಜಿ ಅಕ್ಕಿ

ಆಹಾರ ಸಚಿವ ಕೆ.ಎಚ್. ಮುನಿಯಪ್ಪ



ಬೆಂಗಳೂರು: ರಾಜ್ಯದ ಬರ ಪೀಡಿತ ತಾಲೂಕುಗಳಿಗೆ ಹಣದ ಬದಲು 10 ಕೆಜಿ ಅಕ್ಕಿ ನೀಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಸೋಮವಾರ ಹೇಳಿದ್ದಾರೆ. ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ರಾಜ್ಯದ 114 ತಾಲೂಕುಗಳಲ್ಲಿ ಬರದ ಪರಿಸ್ಥಿತಿ ಇದೆ ಈ ತಾಲೂಕುಗಳಿಗೆ 10 ಕೆಜಿ ಅಕ್ಕಿ ವಿತರಣೆ ಮಾಡಲು ಸಿದ್ಧತೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಬರಪೀಡಿತ ತಾಲೂಕುಗಳಲ್ಲಿ ಐದು ಕೆಜಿ ಅಕ್ಕಿಗೆ ಹಣದ ಬದಲು ಅಕ್ಕಿಯನ್ನೇ ಪೂರೈಕೆ ಮಾಡಲಾಗುತ್ತದೆ. ಬರ ಪೀಡಿತ ತಾಲೂಕುಗಳಲ್ಲಿ ಒಟ್ಟು ಹತ್ತು ಕೆಜಿ ಅಕ್ಕಿ ಪೂರೈಕೆ ಮಾಡುತ್ತೇವೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಇದೇ ವೇಳೆ ಅಕ್ಕಿ ಖರೀದಿ ವಿಚಾರವಾಗಿ ಮಾತನಾಡಿದ ಸಚಿವ ಕೆ.ಎಚ್. ಮುನಿಯಪ್ಪ, ಮುಂದಿನ ಒಂದು ವಾರದಲ್ಲಿ ಅಕ್ಕಿ ಖರೀದಿ ಫೈನಲ್ ಆಗಲಿದೆ. ಆಂಧ್ರ ಪ್ರದೇಶ, ತೆಲಂಗಾಣ, ಛತ್ತೀಸ್‌ಗಢ ಸರ್ಕಾರ ಅಕ್ಕಿ ನೀಡಲು ಮುಂದೆ ಬಂದಿವೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಬೆಲೆ ನಿಗದಿ ವಿಚಾರವಾಗಿ ಮಾತುಕತೆ ನಡೆಯುತ್ತಿದೆ. ಆದಷ್ಟು ಬೇಗ ಹತ್ತು ಕೆಜಿ ಅಕ್ಕಿ ಕೊಡುವ ಕೆಲಸ ಮಾಡುತ್ತೇವೆ ಎಂದರು. ಇನ್ನು ಉಚಿತ ಯೋಜನೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಟೀಕೆಗೆ ಪ್ರತಿಕ್ರಿಯಿಸಿದ ಸಚಿವ ಮುನಿಯಪ್ಪ, ದೇಶದಲ್ಲಿ ಶೇ. 35 ರಿಂದ 37 ರಷ್ಟು ಜನ ಬಡತನ ರೇಖೆಗಿಂತ ಕೆಳಗಿದ್ದಾರೆ. ಯುಪಿಎ ಇದ್ದಾಗ ಆಹಾರ ಭದ್ರತಾ ಕಾಯ್ದೆ ತರಲಾಗಿತ್ತು. ಯಾರೂ ಕೂಡ ಕೆಲಸ ಇಲ್ಲದೆ ಮಲಗಬಾರದು ಅಂತ ನರೇಗಾ ಯೋಜನೆ ತಂದಿದ್ದೆವು. ಈ ಆಹಾರ ಭದ್ರತಾ ಕಾಯ್ದೆಯಿಂದ ಜನರಿಗೆ ಅನುಕೂಲ ಆಗುತ್ತಿದೆ ಎಂದರು.

ಲಾರಿಗೆ ಕಾರು ಡಿಕ್ಕಿ: ನಾಲ್ವರ ದುರ್ಮರಣ

ಚಿತ್ರದುರ್ಗ: ತಾಲೂಕಿನ ಮಲ್ಲಾಪುರ ಗ್ರಾಮದ ಬಳಿ ನಡೆದ ಭೀಕರ ಅಪಘಾತದಲ್ಲಿ ನಾಲ್ವರು ಸಾವನ್ನಪ್ಪಿರುವ ಘಟನೆ ನಡೆದಿದೆ. ಚಿತ್ರದುರ್ಗ ತಾಲೂಕಿನ ಮಲ್ಲಾಪುರ ಗ್ರಾಮದ ಬಳಿಯ ರಾಷ್ಟ್ರೀಯ ಹೆದ್ದಾರಿ–13ರಲ್ಲಿ ವೇಗವಾಗಿ ಬಂದ ಕಾರು, ಲಾರಿಗೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಇದರಿಂದ ಕಾರಿನಲ್ಲಿದ್ದ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.ಮೂವರು ಗಂಭೀರವಾಗಿ ಗಾಯಗೊಂಡಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ದಾವಣಗೆರೆ ಕಡೆಯಿಂದ ಬೆಂಗಳೂರು ಕಡೆಗೆ ಕಾರ್ ತೆರಳುತ್ತಿತ್ತು. ಅಪಘಾತದ ತೀವ್ರತೆಗೆ ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ.

ಕಾರು 7 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದಾಗ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಕಾರು ಹೊಸಪೇಟೆಯಿಂದ ತುಮಕೂರು ಕಡೆಗೆ ಚಲಿಸುತ್ತಿತ್ತು ಎಂದು ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂದ್ರ ಕುಮಾರ್ ಮೀನಾ ತಿಳಿಸಿದ್ದಾರೆ. ಮೃತರನ್ನು ಸಂಸುದ್ದೀನ್ (40), ಮಲ್ಲಿಕಾ (37), ಖಲೀಲ್ (42), ತಬ್ರೇಜ್ (13) ಎಂದು ತಿಳಿದು ಬಂದಿದೆ. ಗಾಯಗೊಂಡಿರುವ ನರ್ಗೀಶ್, ರೆಹಾನ್ ಮತ್ತು ರೆಹಮಾನ್ ಅವರನ್ನು ಚಿಕಿತ್ಸೆಗಾಗಿ ಚಿತ್ರದುರ್ಗ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದರು. ಲಾರಿ ಚಾಲಕನನ್ನು ಬಂಧಿಸಲಾಗಿದೆ. ಚಿತ್ರದುರ್ಗ ಗ್ರಾಮಾಂತರ ಪೊಲೀಸರು ಘಟನೆ ಕುರಿತು ತನಿಖೆ ನಡೆಸುತ್ತಿದ್ದಾರೆ.

ಕಲೆ, ಸಾಹಿತ್ಯ, ಸಂಗೀತ ಬೆಳವಣಿಗೆಯಲ್ಲಿ ರಂಗಾಯಣದ ಪಾತ್ರವಿದೆ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅಭಿಮತ



ಮೈಸೂರು, ಸೆ.4(ಎಸ್‌ಪಿಎನ್)– ಕಲೆ, ಸಾಹಿತ್ಯ, ಸಂಗೀತ ಸೇರಿದಂತೆ ಇತರೆ ಕಲೆಗಳ ಬೆಳವಣಿಗೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕೊಡುಗೆ ಅಪಾರ. ಇದರಲ್ಲಿ ಮೈಸೂರು ರಂಗಾಯಣದ ಕೊಡುಗೆಯೂ ಇದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ಎಸ್ ತಂಗಡಗಿ ಅಭಿಪ್ರಾಯಪಟ್ಟರು.

ಮೈಸೂರು ರಂಗಾಯಣ ಭೂಮಿಗೀತಾದಲ್ಲಿ ಬಿ.ವಿ.ಕಾರಂತ ಕಾಲೇಜು ರಂಗ ತರಬೇತಿ ಶಿಬಿರ ಹಾಗೂ ಸುಬ್ಬಯ್ಯನಾಯ್ಡು ಮತ್ತು ಪದ್ಮಶ್ರೀ ನಾಗರತ್ನಮ್ಮ ಹವ್ಯಾಸಿ ರಂಗ ತರಬೇತಿ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ರಂಗಾಯಣದಲ್ಲಿ ಬಹುರೂಪಿ ರಾಷ್ಟ್ರೀಯ ರಂಗೋತ್ಸವ, ಚಿಣ್ಣರಮೇಳ, ನವರಾತ್ರಿ ರಂಗೋತ್ಸವ, ಕಾಲೇಜು ಹಾಗೂ ಹವ್ಯಾಸಿ ರಂಗ ತರಬೇತಿ ಶಿಬಿರ, ವಿಚಾರ ಸಂಕಿರಣ, ವಸ್ತು ಪ್ರದರ್ಶನ, ರಂಗ ಪ್ರಯೋಗಗಳು ಸೇರಿದಂತೆ ಅನೇಕ ರಂಗಭೂಮಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಲೆ, ಸಾಹಿತ್ಯ, ಸಂಗೀತ, ನೃತ್ಯ ಕಲೆಗಳ ಬೆಳವಣಿಗೆಗೆ ರಂಗಾಯಣ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಮೈಸೂರಿನಲ್ಲಿ ರಂಗಭೂಮಿ ಬೆಳವಣಿಗೆ, ಕನ್ನಡ ನೆಲ, ಜಲ ಭಾಷೆ ಉಳಿವಿಗಾಗಿ ಕೆಲ ಸಾಹಿತಿಗಳು, ಹಿರಿಯ ರಂಗಕರ್ಮಿಗಳ ಜೊತೆ ಸಂವಾದ ನಡೆಸಿದ್ದು, ಅನೇಕ ಸಲಹೆಗಳು ಬಂದಿವೆ. ಈ ಸಲಹೆಗಳನ್ನು ಪರಿಶೀಲಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಳವಣಿಗೆಗೆ ಅಳವಡಿಸಿಕೊಳ್ಳಲಾಗುವುದು. ರಂಗಾಯಣದ ಅಭಿವೃದ್ಧಿಗೆ ಪೂರಕವಾಗಿ ನಿರ್ದೇಶಕರ ನೇಮಿಸುವಂತೆ ಸಾಕಷ್ಟು ಒತ್ತಡಗಳು ಬರುತ್ತಿವೆ. ಇದನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಆದಷ್ಟು ಬೇಗನೆ ನಿರ್ದೇಶಕರ ನೇಮಿಸುವುದಾಗಿ ಘೋಷಿಸಿದರು.

ರಂಗಾಯಣ ಚಟುವಟಿಕೆಗಳ ಕುರಿತು ಉಪ ನಿರ್ದೇಶಕಿ ನಿರ್ಮಲ ಮಠಪತಿ ಅವರು ಸಂಪೂರ್ಣ ಮಾಹಿತಿ ನೀಡಿದ್ದಾರೆ. ಅಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾದೇಶಿಕ ಕಚೇರಿಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ ಅವರೂ ಈ ಭಾಗದ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಇಂದಿನ ಸುಬ್ಬಯ್ಯನಾಯ್ಡು ಮತ್ತು ಪದ್ಮಶ್ರೀ ನಾಗರತ್ನಮ್ಮ ಹವ್ಯಾಸಿ ರಂಗತರಬೇತಿ ಶಿಬಿರ ಉದ್ಘಾಟಿಸುವಂತೆ ಉಪ ನಿರ್ದೇಶಕರು, ಮನವಿ ಮಾಡಿದ ಹಿನ್ನೆಲೆಯಲ್ಲಿ ಬಿಡುವಿಲ್ಲದ ಕಾರ್ಯಕ್ರಮದ ನಡುವೆಯೂ ಆಗಮಿಸಿದ್ದೇನೆ. ಅಲ್ಲದೆ, ರಂಗಾಯಣ ನಿರ್ದೇಶಕ ಜವಾಬ್ದಾರಿ ನನ್ನ ಮೇಲಿರುವುದರಿಂದ ಇಲ್ಲಿನ ಚಟುವಟಿಕೆಗಳ ಕುರಿತು ಹತ್ತಿರದಿಂದ ನೋಡುವ ಸದಾವಕಾಶ ನನಗೆ ದೊರೆತಿರುವುದು ಸೌಭಾಗ್ಯ ಎಂದು ತಿಳಿಸಿದರು.

ನಾನು ರಾಜಕೀಯ ಜನ್ಮ ಪಡೆದ ಇಳಕಲ್ ತಾಲೂಕಿನಲ್ಲಿ ಸ್ನೇಹರಂಗ ಎಂಬ ರಂಗ ತಂಡವಿತ್ತು. ಈಗಲೂ ಇದೆ. ಆ ತಂಡ ಕಲಾವಿದರು 'ಜೋ ಕುಮಾರಸ್ವಾಮಿ' ನಾಟಕವನ್ನು ಪ್ರದರ್ಶಿಸುತ್ತಿದ್ದರು. ಅದನ್ನು ನಾನು ಸಹ ಕಾಲೇಜು ದಿನಗಳಲ್ಲಿ ನೋಡುತ್ತಿದ್ದೆ. ಅಲ್ಲದೆ, ಇಳಕಲ್‌ನಲ್ಲಿ ಅತೀ ಹೆಚ್ಚು ಕಲಾವಿದರು ನೆಲೆಸಿರುವ ಪಟ್ಟಣವಾಗಿರುವುದರಿಂದ ನನಗೂ ಕಲೆಗಳ ಬಗ್ಗೆ ಆಸಕ್ತಿ ಇದೆ ಎಂದು ತಿಳಿಸಿದರು.

ನಾನು ಪ್ರತಿನಿಧಿಸುವ ಕನಕಗಿರಿ ಕ್ಷೇತ್ರದಲ್ಲಿ ಮುಂದಿನ ದಿನಗಳಲ್ಲಿ 'ಕನಕಗಿರಿ ಸಾಂಸ್ಕೃತಿಕ ಉತ್ಸವ'ವನ್ನು ಮಾಡುವ ಉದ್ದೇಶವಿದೆ. ಇದಕ್ಕೆ ನಮ್ಮ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳ ಸಲಹೆ ಪಡೆದು ಬೃಹತ್ ಉತ್ಸವ ಆಯೋಜನೆ ಮಾಡುತ್ತೇನೆ ಎಂದರಲ್ಲದೆ, ದಸರಾ ಕಾರ್ಯಕ್ರಮ ಕುರಿತು ಹೆಚ್ಚಿನ ಮಾಹಿತಿ ಪಡೆಯಬೇಕಾಗಿರುವುದರಿಂದ ಸದ್ಯದಲ್ಲೇ ಅಧಿಕಾರಿಗಳ ಸಭೆ ನಡೆಸುತ್ತೇನೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ವಿಶ್ವನಾಥ ಪಿ.ಹಿರೇಮಠ, ಹಿರಿಯ ರಂಗಕರ್ಮಿ ವೆಂಕಟರಮಣ ಐತಾಳ, ಶಿಬಿರದ ಸಂಚಾಲಕ ಅರಸೀಕೆರೆ ಯೋಗಾನಂದ, ಹಿರಿಯ ಕಲಾವಿದೆ ಸೌಮ್ಯ ಪಾಣಾಜೆ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಮಂಗಳವಾರ 5 ಸೆಪ್ಟೆಂಬರ್ 2023



ಕೈಲ್ ಮುಹೂರ್ತ ಅಂಗವಾಗಿ

ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ



ವಿರಾಜಪೇಟೆ, ಸೆ.4– ಕೊಡಗಿನ ವಿಶೇಷ ಹಬ್ಬವಾದ ಕೈಲ್ ಮುಹೂರ್ತ ಹಬ್ಬದ ಅಂಗವಾಗಿ ಕೂರ್ಗ್ ಮಾರ್ಕ್ಸ್‌ಮೆನ್ ಸಂಸ್ಥೆ ವತಿಯಿಂದ ವಿರಾಜಪೇಟೆ ಜೂನಿಯರ್ ಕಾಲೇಜು ಮೈದಾನದಲ್ಲಿ ಏರ್ಪಡಿಸಲಾಗಿದ್ದ 9ನೇ ವರ್ಷದ ತೆಂಗಿನ ಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ಚಟ್ಟಳ್ಳಿಯ ಮುತ್ತರೀರ ನಂಜಪ್ಪ ಅವರು ಪ್ರಥಮ ಸ್ಥಾನ ಪಡೆದುಕೊಂಡರು, ನಾಪೋಕ್ಲುವಿನ ಅಜ್ಜೇಟ್ಟಿರ ಸೋಮಯ್ಯ ದ್ವಿತೀಯ ಸ್ಥಾನ ಪಡೆದರೆ, ವಿರಾಜಪೇಟೆ ಮಂಡೂಡ ಅಜೀತ್ ಅವರು ತೃತೀಯ ಸ್ಥಾನ ಪಡೆದು ನಗದು ಮತ್ತು ಟ್ರೋಫಿಯನ್ನು ಪಡೆದುಕೊಂಡಿದ್ದಾರೆ.

ಸ್ಪರ್ಧೆಯಲ್ಲಿ ಕೊಡಗಿನ ಐದು ತಾಲೂಕಿನ ಹಾಗೂ ಇತರೆಡೆಗಳಿಂದ 132 ಮಂದಿ ಭಾಗವಹಿಸಿದ್ದರು. ಕೂರ್ಗ್ ಮಾರ್ಕ್ಸ್‌ಮೆನ್ ಸಂಸ್ಥೆಯ ಅಧ್ಯಕ್ಷ ಡಾ. ಎಂ.ಸಿ. ಕಾರ್ಯಪ್ಪ ಅವರು ತೆಂಗಿನಕಾಯಿಗೆ ಗುಂಡು ಹೊಡೆಯುವ ಮೂಲಕ ಸ್ಪರ್ಧೆ ಉದ್ಘಾಟಿಸಿ ಮಾತನಾಡಿ, ಬಂದೂಕು ಆತ್ಮ ರಕ್ಷಣೆಗೆ ಮಾತ್ರ ಸೀಮಿತವಾಗದೆ ಗ್ರಾಮೀಣ ಭಾಗದಲ್ಲಿ ತೆಂಗಿನಕಾಯಿಗೆ ಗುಂಡು ಹೊಡೆಯುವ ಕ್ರೀಡೆಯಾಗಿ ಹೊರಹೊಮ್ಮಿದೆ. ಕಳೆದ 9 ವರ್ಷಗಳಿಂದ ಸತತವಾಗಿ ಶೂಟಿಂಗ್ ಸ್ಪರ್ಧೆಯನ್ನು ಆಯೋಜಿಸಿಕೊಂಡು ಬರುತ್ತಿದ್ದು, ಈ ಸ್ಪರ್ಧೆಯಲ್ಲಿ ಮಕ್ಕಳು, ಯುವಕರು, ವಯೋವೃದ್ಧರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ವಿಶೇಷ ಎಂದರು. ಸಂಸ್ಥೆಯ ಕಾರ್ಯದರ್ಶಿ ಮಾದೇಯಂಡ ಸಂಪಿ ಪೂಣಚ್ಚ ಪ್ರಾಸ್ತಾವಿಕವಾಗಿ ಮಾತನಾಡಿ, ವಿಜೇತರಿಗೆ ದಾನಿಗಳಾದ ಪಟ್ಟಡ ಸಚಿನ್ ಮತ್ತು ದರ್ಶನ್ ಪೆಮ್ಮಯ್ಯ ಅವರು ದಿವಂಗತ ಪಟ್ಟಡ ಗಣೇಶ್ ಅವರ ಜ್ಞಾಪಕಾರ್ಥವಾಗಿ ಬೆಳ್ಳಿ ಟ್ರೋಫಿಯನ್ನು ನೀಡಿರುವುದಾಗಿ ತಿಳಿಸಿದರು. ವೇದಿಕೆಯಲ್ಲಿ ಕೂರ್ಗ್ ಮಾರ್ಕ್ಸ್‌ಮೆನ್ ಸಂಸ್ಥೆಯ ಉಪಾಧ್ಯಕ್ಷ ಕುಂತ್ರಂಡ ಪ್ರವೀಣ್, ಕೋಶಾಧಿಕಾರಿ ಕೊಂಗಂಡ ಧರ್ಮಜ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಸಿಎನ್‌ಸಿಯಿಂದ ದೇವಟ್ ಪರಂಬುನಲ್ಲಿ ಹಿರಿಯರಿಗೆ ಶ್ರದ್ಧಾಂಜಲಿ



ಮಡಿಕೇರಿ, ಸೆ.4– ಕೊಡಗಿನ ಆಯುಧ ಪೂಜೆ ಎಂದೇ ಕರೆಯಲ್ಪಡುವ 'ಕೈಲ್ ಪೊಳ್ದ್' ಹಬ್ಬದ ಪ್ರಯುಕ್ತ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕೊಡವರ ನರಮೇಧ ನಡೆದ ದೇವಟ್ ಪರಂಬುವಿನಲ್ಲಿ ಹಿರಿಯರನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸಿತು. ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ, ಬುಡಕಟ್ಟು ಕೊಡವರ ಸಾಂಪ್ರದಾಯಿಕ ಹಬ್ಬಗಳ ಆಚರಣೆಯ ಸಂದರ್ಭ ಹಿರಿಯರನ್ನು ಸ್ಮರಿಸುವುದು ವಾಡಿಕೆ ಎಂದರು.

ಪಾಲೇರಿ ರಾಯಲ್ಸ್ ಮತ್ತು ಹೈದರ್ ಹಾಗೂ ಟಿಪ್ಪುವಿನ ಆಕ್ರಮಣದಿಂದ 32ಕ್ಕೂ ಹೆಚ್ಚು ಬಾರಿ ಕೊಡವರು ರಾಜ್ಯವನ್ನು ಕಾಪಾಡಿದರು. ಆದ್ದರಿಂದ ತನ್ನ ಸೋಲಿನ ಸೇಡು ತೀರಿಸಿಕೊಳ್ಳಲು, ಟಿಪ್ಪು ಕೊಡವ ಬುಡಕಟ್ಟು ಜನಾಂಗವನ್ನು ವಂಚನೆಯ ಮೂಲಕ ಸಂಪೂರ್ಣವಾಗಿ ನಾಶ ಮಾಡಲು ಸಂಚು ರೂಪಿಸಿ ಹತ್ಯಾಕಾಂಡ ನಡೆಸಿದನು ಎಂದು ಆರೋಪಿಸಿದರು. ಷಡ್ಯಂತ್ರಕ್ಕೆ ಬಲಿಯಾದ ಅಮಾಯಕ ಕೊಡವರಿಗೆ ವಿಶೇಷ ಪ್ರಾರ್ಥನೆ ಸಲ್ಲಿಸಿ ಕೊಡವಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯಗಳನ್ನು ಮಂಡಿಸಲಾಯಿತು ಎಂದರು.

ಕೊಡವ ಬುಡಕಟ್ಟು ಜನಾಂಗದ ಸಮಗ್ರ ಸಬಲೀಕರಣಕ್ಕಾಗಿ ಆಂತರಿಕ ರಾಜಕೀಯ ಸ್ವ–ನಿರ್ಣಯದ ಹಕ್ಕು, ಸ್ವಯಂ–ಆಡಳಿತ ಮತ್ತು ಎಸ್‌ಟಿ ಟ್ಯಾಗ್, ನಮ್ಮ ಸಂವಿಧಾನದ 25 ಮತ್ತು 26ನೇ ವಿಧಿಗಳ ಅಡಿಯಲ್ಲಿ ಬುಡಕಟ್ಟು ಜನಾಂಗದ 'ಸಂಸ್ಕಾರ ಗನ್'ಗೆ ಖಾತರಿ, ಕೊಡವ ಭೂಮಿ, ಭಾಷೆ, ಸಾಂಪ್ರದಾಯಿಕ ವೈಯಕ್ತಿಕ ಕಾನೂನು, ಜಾನಪದ ಕಾನೂನು ವ್ಯವಸ್ಥೆಗಳಿಗೆ ಸಾಂವಿಧಾನಿಕ ಭದ್ರತೆ, ಕೊಡವ ಜನಾಂಗೀಯ ಗುರುತನ್ನು ಅಂತರರಾಷ್ಟ್ರೀಯ ಕಾನೂನಿನಡಿಯಲ್ಲಿ ಯುಎನ್‌ಓ ಗುರುತಿಸಬೇಕು. ದೇವಟ್ ಪರಂಬುವಿನಲ್ಲಿ ಪ್ರಾಣ ಕಳೆದುಕೊಂಡ ಕೊಡವರ ಸ್ಮರಣೆಗಾಗಿ ಅಂತರರಾಷ್ಟ್ರೀಯ ಮಟ್ಟದ ಸ್ಮಾರಕ ನಿರ್ಮಿಸಬೇಕು ಮತ್ತು ನರಮೇಧವನ್ನು ಯುಎನ್‌ಓ ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಸಿಎನ್‌ಸಿ ಪ್ರಮುಖರಾದ ಲೆಫ್ಟಿನೆಂಟ್ ಕರ್ನಲ್ ಪಾರ್ವತಿ, ಪಟ್ಟಮಾಡ ಕುಶ, ಅರೆಯಡ ಗಿರೀಶ್, ಬೇಪಡಿಯಂಡ ದಿನು, ಮಂದಪಂಡ ಮನೋಜ್ ಮತ್ತಿತರರು ಹಾಜರಿದ್ದು ಪುಷ್ಪ ನಮನ ಸಲ್ಲಿಸಿದರು.

ಸೆ.11 ರಿಂದ 15 ರವರೆಗೆ ದಸರಾ ಕ್ರೀಡಾಕೂಟ

ಮಡಿಕೇರಿ, ಸೆ.4– ಪ್ರಸಕ್ತ ಸಾಲಿನಲ್ಲಿ ಪುರುಷರು ಹಾಗೂ ಮಹಿಳೆಯರ ಜಿಲ್ಲೆಯ ಐದು ತಾಲೂಕುಗಳ ತಾಲೂಕು ಮಟ್ಟದ ದಸರಾ ಕ್ರೀಡಾಕೂಟ ಸೆ.11 ರಿಂದ 15 ರವರೆಗೆ ನಡೆಯಲಿದೆ.

ಈ ಕ್ರೀಡಾಕೂಟಗಳಲ್ಲಿ ಜಿಲ್ಲೆಯ ಆಯಾಯ ತಾಲೂಕಿನ ಕ್ರೀಡಾಪಟುಗಳು ಭಾಗವಹಿಸಬಹುದು. ಸೆ.11 ರಂದು ಮಡಿಕೇರಿ ತಾಲೂಕಿನ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣ, ಸೆ.12 ರಂದು ಕುಶಾಲನಗರ ತಾಲೂಕಿನ ಕೂಡಿಗೆ ಕ್ರೀಡಾಶಾಲೆ ಮೈದಾನ, ಸೆ.13 ಸೋಮವಾರಪೇಟೆ ತಾಲೂಕಿನ ಕೂಡಿಗೆ ಕ್ರೀಡಾಶಾಲೆ ಮೈದಾನ, ಸೆ.14 ರಂದು ಪೊನ್ನಂಪೇಟೆ ತಾಲೂಕಿನ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಹಾಗೂ ಜೂನಿಯರ್ ಕಾಲೇಜ್ ಆಟದ ಮೈದಾನದಲ್ಲಿ ಮತ್ತು ಸೆ.15 ರಂದು ವಿರಾಜಪೇಟೆ ತಾಲೂಕಿನ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ ಹಾಗೂ ಜೂನಿಯರ್ ಕಾಲೇಜ್ ಆಟದ ಮೈದಾನದಲ್ಲಿ ಕ್ರೀಡಾಕೂಟ ನಡೆಯಲಿದೆ.

ಜಿಲ್ಲೆಯ ಆಸಕ್ತ ಪುರುಷ ಹಾಗೂ ಮಹಿಳಾ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ತಾಲೂಕು ಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಮೂಲಕ ದಸರಾ ಕ್ರೀಡಾಕೂಟ ಯಶಸ್ವಿಗೊಳಿಸಬೇಕಾಗಿ ಪ್ರಕಟಣೆ ಕೋರಿದೆ. ಮಾಹಿತಿಗೆ ದೂ: ಮಡಿಕೇರಿ ಮಹಾಬಲ 9980887499, ಹಾಗೂ ಮನು 9480032712, ಸೋಮವಾರಪೇಟೆ ತಾಲೂಕು ವೆಂಕಟೇಶ್ 9844326007, ಕುಶಾಲನಗರ ತಾಲೂಕು, ಮಂಜುನಾಥ್ 9342563014, ಪೊನ್ನಂಪೇಟೆ ಸುಬ್ಬಯ್ಯ 8197790350, ವಿರಾಜಪೇಟೆ ತಾಲೂಕು ಗಣಪತಿ 8951287301 ಅನ್ನು ಸಂಪರ್ಕಿಸಬಹುದು.

ಆಯಾಯ ತಾಲೂಕಿನ ಕ್ರೀಡಾಪಟುಗಳು ತಮ್ಮ ತಾಲೂಕಿನ ಕ್ರೀಡಾಕೂಟದಲ್ಲಿ ಮಾತ್ರ ಭಾಗವಹಿಸಬೇಕು. ಒಂದು ತಾಲೂಕಿನಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಮತ್ತೊಂದು ತಾಲೂಕಿನಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ. ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿ, ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ. ಬೆಳಗ್ಗೆ 9.30 ರೊಳಗೆ ಕಡ್ಡಾಯವಾಗಿ ಸ್ಥಳದಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ತೀರ್ಪುಗಾರರ ತೀರ್ಮಾನವೇ ಅಂತಿಮ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿ.ಟಿ.ವಿಸ್ಮಯಿ ಅವರು ತಿಳಿಸಿದ್ದಾರೆ.

ಸೆ.17, ವಿರಾಜಪೇಟೆಯಲ್ಲಿ ಓಣಂ ಆಚರಣೆ




ವಿರಾಜಪೇಟೆ, ಸೆ.4– ಶ್ರೀ ಮುತ್ತಪ್ಪನ್ ಓಣಂ ಆಚರಣಾ ಸಮಿತಿ ವತಿಯಿಂದ ಸೆ.17 ರಂದು ವಿರಾಜಪೇಟೆಯ ಮೀನುಪೇಟೆಯಲ್ಲಿರುವ ಶ್ರೀ ಮುತ್ತಪ್ಪ ಕಲಾಮಂಟಪದಲ್ಲಿ ಮಲಯಾಳಂ ಸಂಸ್ಕೃತಿಯನ್ನು ಬಿಂಬಿಸುವ ಓಣಂ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಸಮಿತಿಯ ಕಾರ್ಯದರ್ಶಿ ಸಿ.ಆರ್.ಬಾಬು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.17ರಂದು ಬೆಳಗ್ಗೆ 8.30 ಗಂಟೆಗೆ ಮಹಾಬಲಿಯನ್ನು ಬರಮಾಡಿಕೊಂಡು ಶ್ರೀ ಮುತ್ತಪ್ಪ ದೇವಾಲಯದಲ್ಲಿ ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ದೇವಾಲಯದಿಂದ ಸಿಂಗಾರಿ ಮೇಳಂ, ಕೇರಳದ ಚೆಂಡೆ ಮದ್ದಳೆ, ಕಥಕಳಿ ನೃತ್ಯದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಸಾಗಿ ಹಿಂದಿರುಗಿ ದೇವಾಲಯಕ್ಕೆ ಬಂದ ನಂತರ ಮಧ್ಯಾಹ್ನ ಕೇರಳದ ಖಾದ್ಯಗಳಿಂದ ತಯಾರಿಸಲಾದ ವಿಶೇಷ ಭೋಜನ (ಓಣಂ ಸದ್ಯ) ಏರ್ಪಡಿಸಲಾಗಿದೆ. ಓಣಂ ಆಚರಣೆ ಅಂಗವಾಗಿ ಸೆ.16 ರಂದು ಹೂವಿನ ರಂಗೋಲಿ (ಪೂಕಳಂ) ಸ್ಪರ್ಧೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆ ನಡೆಯಲಿದೆ. ಭಾಗವಹಿಸುವವರು ಸೆ.10 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳುವಂತೆ ತಿಳಿಸಿದರು.

ಸಮಿತಿಯ ಅಧ್ಯಕ್ಷ ಪಿ.ಜಿ. ಸುಮೇಶ್ ಅವರು ಮಾತನಾಡಿ, ಓಣಂ ಆಚರಣೆಯ ಅಂಗವಾಗಿ ಮಧ್ಯಾಹ್ನ 2 ಗಂಟೆಗೆ ಶ್ರೀ ಮುತ್ತಪ್ಪನ್ ಕಲಾ ವೇದಿಕೆಯಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಅತಿಥಿಗಳಾಗಿ ಸಂಸದ ಪ್ರತಾಪ್ ಸಿಂಹ, ಶಾಸಕ ಎ.ಎಸ್ ಪೊನ್ನಣ್ಣ, ಮುತ್ತಪ್ಪ ದೇವಾಲಯದ ಅಧ್ಯಕ್ಷ ಟಿ.ಕೆ. ರಾಜನ್, ಕ್ರೀಡಾಪಟು ಸಿ.ಕೆ.ಭಾಗ್ಯಲಕ್ಷ್ಮಿ, ಗೋಲ್ಡನ್ ರಾಕ್ಸ್ ಪೂಜಾ ರವೀಂದ್ರನ್, ಜಿಲ್ಲಾ ಮಲಯಾಳಿ ಸಮಾಜದ ಸ್ಥಾಪಕ ಅಧ್ಯಕ್ಷ ಕೆ.ಎಸ್. ರಮೇಶ್, ಸೋಮವಾರಪೇಟೆ ಅಧ್ಯಕ್ಷ ವಿ.ಎಂ.ವಿಜಯನ್, ಮಡಿಕೇರಿಯ ಟಿ.ಕೆ.ಸುಧೀರ್, ಸಿದ್ದಾಪುರ ವಿ.ಕೆ.ಲೋಕೇಶ್, ಚಟ್ಟಳ್ಳಿಯ ಕೆ.ಕೆ.ಸುರೇಶ್ ಬಾಬು, ಗೋಣಿಕೊಪ್ಪ ವಿ.ವಿ.ಅರುಣ್ ಕುಮಾರ್, ಮೂರ್ನಾಡು ಕೆ.ಬಾಬು ಅವರುಗಳು ಭಾಗವಹಿಸಲಿದ್ದಾರೆ. ಸಭೆಯ ನಂತರ ತಿರುವಾದಿರ ನೃತ್ಯದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸಂಜೆ ಸಮಾರೋಪ ಸಮಾರಂಭ ನಡೆಯಲಿದೆ ಎಂದರು.

ಗೋಷ್ಠಿಯಲ್ಲಿ ಓಣಂ ಆಚರಣಾ ಸಮಿತಿಯ ಉಪಾಧ್ಯಕ್ಷ ಸಿ.ಆರ್. ಸಜೀವನ್, ಸಹ ಕಾರ್ಯದರ್ಶಿ ಪಿ.ಜಿ. ರಂಜಿತ್, ಕೋಶಾಧಿಕಾರಿ ಟಿ.ಆರ್. ಗಣೇಶ್, ಸದಸ್ಯರಾದ ಕೆ.ಎನ್. ಉಪೇಂದ್ರ ಮತ್ತು ಸುರೇಶ್ ಅವರು ಹಾಜರಿದ್ದರು.

ಕ್ಷುಲ್ಲಕ ವಿಚಾರಕ್ಕೆ ಸಾಕುನಾಯಿಗಳಿಗೆ ಗುಂಡು



ಮಡಿಕೇರಿ, ಸೆ.4– ಕ್ಷುಲ್ಲಕ ವಿಚಾರಕ್ಕೆ ವ್ಯಕ್ತಿಯೊಬ್ಬ ಸಾಕುನಾಯಿಗಳಿಗೆ ಗುಂಡು ಹೊಡೆದು ಗಾಯಗೊಳಿಸಿರುವ ಘಟನೆ ಶ್ರೀಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯ ಟಿ.ಬೆಟ್ಟಗೇರಿ ಗ್ರಾಮದಲ್ಲಿ ನಡೆದಿದೆ. ಈ ಕುರಿತು ಎಂ.ಪಾರ್ವತಿ ಎಂಬವರು ಶ್ರೀಮಂಗಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಿದ್ದು, ತಲೆಮರೆಸಿಕೊಂಡಿರುವ ಆರೋಪಿಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಪ್ರಕರಣ ಹಿನ್ನೆಲೆ: ಸೆ.3ರ ಸಂಜೆ ಎಂ. ಪಾರ್ವತಿ ಎಂಬವರ ಪುತ್ರ ಮನೆಯ ಅಂಗಳದಲ್ಲಿ ಸೈಕಲಿಂಗ್ ಮಾಡುತ್ತಿದ್ದ ಸಂದರ್ಭ ನೆರೆಮನೆಯ ನಿವಾಸಿ ಎ.ಟಿ. ಸೋಮಣ್ಣ ಎಂಬಾತ ಬಂದೂಕಿನಿಂದ ಏಕಾಏಕಿ ಗುಂಡು ಹಾರಿಸಿದ್ದಾನೆ. ಈ ವೇಳೆ ಗುಂಡು ನಾಯಿ ಗೂಡಿಗೆ ಬಡಿದಿದ್ದು, ಗೂಡಿನಲ್ಲಿದ್ದ 3 ನಾಯಿಗಳು ಗಂಭೀರ ಗಾಯಗೊಂಡಿವೆ. ಬಳಿಕ ಆರೋಪಿ ಪರಾರಿಯಾಗಿದ್ದಾನೆ ಎಂದು ದೂರು ನೀಡಿದ್ದಾರೆ. ಘಟನಾ ಸ್ಥಳಕ್ಕೆ ಶ್ರೀಮಂಗಲ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಬಂದೂಕು ರದ್ದತಿಗೆ ಶಿಫಾರಸು: ಆರೋಪಿ ಎ.ಟಿ. ಸೋಮಣ್ಣ ಕೊಲೆ ಮಾಡುವ ಉದ್ದೇಶದಿಂದ ಸಿಂಗಲ್ ಬ್ಯಾರಲ್ ಬಂದೂಕು ಬಳಸಿದ್ದು, ಗುಂಡು ನಾಯಿ ಗೂಡಿಗೆ ತಗುಲಿದೆ. ಆರೋಪಿ ಬಂದೂಕನ್ನು ದುರುಪಯೋಗಪಡಿಸಿರುವುದು, ಇದ್ದಕ್ಕಿದ್ದಂತೆ ಪ್ರಚೋದನೆಗೊಂಡು ಆತ್ಮಹತ್ಯೆ ಅಥವಾ ಕೊಲೆ ಮಾಡುವ ಸಾಧ್ಯತೆಗಳಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಸದರಿ ಬಂದೂಕನ್ನು ರದ್ದುಗೊಳಿಸುವ ಕುರಿತು ಜಿಲ್ಲಾಧಿಕಾರಿಗಳಿಗೆ ಶಿಫಾರಸು ಮಾಡಲಾಗುತ್ತದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಜನರಲ್ ತಿಮ್ಮಯ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಡಿಕೇರಿ, ಸೆ.4– 2022–23 ನೇ ಸಾಲಿನಲ್ಲಿ ಹತ್ತನೇ ತರಗತಿ ಮತ್ತು ದ್ವಿತೀಯ ಪಿಯುಸಿ ಸಾರ್ವತ್ರಿಕ ಪರೀಕ್ಷೆಗಳಲ್ಲಿ ಗರಿಷ್ಠ ಅಂಕಗಳನ್ನು ಪಡೆದ ಕರ್ನಾಟಕ ಮೂಲ ನಿವಾಸಿ ಮಾಜಿ ಸೈನಿಕರ ಮಕ್ಕಳಿಗೆ 'ಜನರಲ್ ಕೆ.ಎಸ್.ತಿಮ್ಮಯ್ಯ' ನಗದು ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅ.31 ಕೊನೆಯ ದಿನವಾಗಿದೆ ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.



ಗುಂಡ್ಲುಪೇಟೆ ಪಟ್ಟಣದ ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಸಂಕಷ್ಟಹರ ಚತುರ್ಥಿ ಅಂಗವಾಗಿ ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ಅವರ ನೇತೃತ್ವದಲ್ಲಿ ಸೋಮವಾರ ರಾತ್ರಿ ಬೆಣ್ಣೆ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ಪಟ್ಟಣದ ವಿವಿಧ ಬಡಾವಣೆಯ ನೂರಾರು ಭಕ್ತರು ಹಾಜರಿದ್ದರು.

ಡಿಸಿ ಕಚೇರಿ ಮುಂದೆ ರೈತರ ಪ್ರತಿಭಟನೆ



ಚಾಮರಾಜನಗರ, ಸೆ.4– ರೈತರ ಚಿನ್ನವನ್ನು ಬಿಡಿಸಿಕೊಡಬೇಕು, ಕಾವೇರಿ ನೀರು ಬಿಡುಗಡೆ ನಿಲ್ಲಿಸಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವುದು ಹಾಗೂ ರೈತರ ವಿರುದ್ಧ ಡಿಸಿಎಂ ಡಿ.ಕೆ.ಶಿವಕುಮಾರ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಸೋಮವಾರ ಕಬ್ಬು ಬೆಳೆಗಾರರ ಸಂಘ ಹಾಗೂ ಮಲೆಯೂರು ಗ್ರಾಮದ ರೈತರು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಮುಖ್ಯಗೇಟ್ ಬಳಿ ಸಮಾವೇಶಗೊಂಡ ಪ್ರತಿಭಟನಾಕಾರರು ಮಲೆಯೂರು ಪ್ರಾಥಮಿಕ ಕೃಷಿ ಪತ್ತಿನ ಸಂಘ, ರಾಜ್ಯ ಸರ್ಕಾರ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಸದರ ಕಚೇರಿಗೆ ಮುತ್ತಿಗೆ ಯತ್ನ

ಕಾವೇರಿ ನೀರಿನ ವಿಚಾರವಾಗಿ ರಾಜ್ಯದ ಸಂಸದರು ಮಾತನಾಡುತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ರೈತ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ನಗರದ ಜಿಲ್ಲಾಡಳಿತ ಭವನದಲ್ಲಿರುವ ಸಂಸದ ವಿ. ಶ್ರೀನಿವಾಸಪ್ರಸಾದ್ ಅವರ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಆದರೆ, ಸ್ಥಳದಲ್ಲಿದ್ದ ಪೊಲೀಸರು ಮುತ್ತಿಗೆಗೆ ಅವಕಾಶ ಕಲ್ಪಿಸದೆ ತಡೆದರು. ಕಾವೇರಿ ನೀರಿನ ವಿಚಾರವಾಗಿ ರಾಜ್ಯದ 28 ಸಂಸದರು ಬಾಯಿ ಬಿಡದೆ ಸುಮ್ಮನಿರುವುದು ಖಂಡನೀಯ. ಇನ್ನಾದರೂ ಕಾವೇರಿ ನೀರಿನ ವಿಚಾರದಲ್ಲಿ ಕರ್ನಾಟಕ ಪರ ಮಾತನಾಡುವಂತೆ ಆಗ್ರಹಿಸಿದರು.

ಚಿನ್ನ ಬಿಡಿಸಿಕೊಡಲು ಆಗ್ರಹ: ಈ ವೇಳೆ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ತಾಲೂಕಿನ ಮಲೆಯೂರು ಗ್ರಾಮದಲ್ಲಿರುವ ಪಿಎಸಿಸಿ ಬ್ಯಾಂಕ್‌ನಲ್ಲಿ ರೈತರು ಚಿನ್ನವನ್ನು ಗಿರಿವಿಗೆ ಇಟ್ಟು ಸಾಲ ಪಡೆದುಕೊಂಡಿದ್ದರು. ಆದರೆ, ಸಂಘದ ಆಡಳಿತ ಮಂಡಳಿಯವರು ಅದನ್ನು ದುರ್ಬಳಕೆ ಮಾಡಿಕೊಂಡಿರುವುದಲ್ಲದೇ ಚಿನ್ನವನ್ನು ವಾಪಸ್ಸು ಕೊಡುವಲ್ಲಿ ವಿಫಲರಾಗಿದ್ದಾರೆ. ಈ ಸಂಬಂಧ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ಎರಡು ತಿಂಗಳಾದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು. ರೈತರ ಚಿನ್ನವನ್ನು ಜಿಲ್ಲಾಡಳಿತ ಬಿಡಿಸಿಕೊಡಬೇಕು. ಅಲ್ಲದೇ ಪಿಎಸಿಸಿ ಬ್ಯಾಂಕ್ ಅನ್ನು ಸೀಜ್ ಮಾಡಿ ತಪ್ಪಿತಸ್ಥರನ್ನು ಬಂಧಿಸಬೇಕು. ಇಲ್ಲದಿದ್ದರೆ ಧರಣಿ ಮುಂದುವರಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಡಿಕೆಶಿ ವಿರುದ್ಧ ಪ್ರತಿಭಟನೆ: ರೈತ ವಿರೋಧಿ ಹೇಳಿಕೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೀಡಿದ್ದಾರೆ ಎಂದು ಆರೋಪಿಸಿ ಅವರ ವಿರುದ್ಧ ರೈತರು ಪ್ರತಿಭಟನೆ ನಡೆಸಿದರು. ರೈತ ವಿರೋಧಿ ಹೇಳಿಕೆಯನ್ನು ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರೈತರ ಕ್ಷಮೆಯನ್ನು ಕೇಳಬೇಕು. ಕಾಂಗ್ರೆಸ್ ಪಕ್ಷದ ಬ್ಯಾನರ್ ಅಡಿಯಲ್ಲಿ ಹೋರಾಟ ಮಾಡಿ ಅಧಿಕಾರಕ್ಕೆ ಬರಲು ಪ್ರಯತ್ನಿಸಿ ಅಧಿಕಾರಕ್ಕೆ ಬಂದ ಮೇಲೆ ಮೇಕೆದಾಟು ಯೋಜನೆಗೆ ರಾಜ್ಯ ಬಜೆಟ್ ಅಲ್ಲಿ ಯಾವುದೇ ಹಣವನ್ನು ನೀಡಿಲ್ಲ ಎಂದು ದೂರಿದರು.

ಪ್ರತಿಭಟನೆಯಲ್ಲಿ ಸಂಘದ ತಾಲೂಕು ಅಧ್ಯಕ್ಷ ಹಾಲಿನ ನಾಗರಾಜು, ತಾಲೂಕು ಪ್ರಧಾನ ಕಾರ್ಯದರ್ಶಿ ಮಲಿಯೂರು ಹರ್ಷ, ಮುಖಂಡರಾದ ಮಲಿಯೂರು ಗ್ರಾಮ ಘಟಕದ ಅಧ್ಯಕ್ಷ ಬಸವರಾಜಪ್ಪ, ಪ್ರವೀಣ್, ಮಹೇಂದ್ರ, ಸತೀಶ್, ಅರಳಿಕಟ್ಟೆ ಪ್ರಭುಸ್ವಾಮಿ, ಸಿದ್ದಲಿಂಗಪ್ಪ, ಮಹೇಶ್, ಚಂದ್ರಪ್ಪ ಮತ್ತಿತರರು ಹಾಜರಿದ್ದರು.

ಇಂದು ಶಿಕ್ಷಕರ ದಿನಾಚರಣೆ

ಚಾಮರಾಜನಗರ, ಸೆ.4– ಜಿಲ್ಲಾಡಳಿತ, ಜಿಪಂ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆ.5ರಂದು ನಗರದಲ್ಲಿ ಆಯೋಜಿಸಲಾಗಿದೆ.

ಬೆಳಿಗ್ಗೆ 9.30 ಗಂಟೆಗೆ ಡಾ. ಎಸ್. ರಾಧಾಕೃಷ್ಣನ್ ಮತ್ತು ಸಾವಿತ್ರಿ ಬಾಯಿ ಫುಲೆ ಅವರ ಭಾವಚಿತ್ರದ ಮೆರವಣಿಗೆಯು ನಗರದ ಸರ್ಕಾರಿ ಪೇಟೆ ಹಿರಿಯ ಪ್ರಾಥಮಿಕ ಶಾಲೆ ಆವರಣದಿಂದ ಆರಂಭವಾಗಲಿದೆ. ಬೆಳಗ್ಗೆ 10.30 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಸಿ. ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸುವರು. ಸಂಸದ ವಿ. ಶ್ರೀನಿವಾಸಪ್ರಸಾದ್ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡುವರು.

ಮೈಸೂರಿನ ಜೆಎಸ್‌ಎಸ್. ಮಹಾವಿದ್ಯಾಪೀಠದ ಪ್ರಕಟಣಾ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಮುಖ್ಯ ಭಾಷಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ

ಕುಡಿಕೆ ನೀರು ಸುರಿಯುವ ಮೂಲಕ ವಿನೂತನ ಪ್ರತಿಭಟನೆ



ಚಾಮರಾಜನಗರ, ಸೆ.4– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಕುಡಿಕೆ ನೀರು ಸುರಿಯುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರಿ ಉದ್ಯಾನವನದ ಮುಂಭಾಗದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕುಡಿಕೆ ಹಿಡಿದು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆತಡೆ ನಡೆಸಿ, ಕುಡಿಕೆ ನೀರು ಸುರಿಯುವ ಮೂಲಕ ತಮಿಳುನಾಡು, ಕರ್ನಾಟಕ ಸರ್ಕಾರ, ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕಾವೇರಿ ನಿರ್ವಹಣಾ ಮಂಡಳಿ ಕನ್ನಡಿಗರ ಪಾಲಿಗೆ ಕುಡಿಕೆ ನೀರು ಕೊಟ್ಟು, ತಮಿಳುನಾಡಿಗೆ ಕ್ಯುಸೆಕ್ ನೀರು ಬಿಡುವ ಮೂಲಕ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಅದಕ್ಕಾಗಿ ಕುಡಿಕೆ ನೀರು ಸುರಿಯುವ ಮೂಲಕ ವಿನೂತನ ಪ್ರತಿಭಟನೆ ನಡೆಸಲಾಗಿದೆ ಎಂದರು.

ತಮಿಳುನಾಡು ಸರ್ಕಾರ ಈ ದೇಶದ ಒಕ್ಕೂಟದ ವ್ಯವಸ್ಥೆಗೆ ಅಗೌರವ ತಂದಿದೆ. ಮಾತೆತ್ತಿದ್ದರೆ ನೆರೆ ರಾಜ್ಯಗಳ ಮೇಲೆ ಕ್ಯಾತೆ ತೆಗೆಯುವುದು, ಇಲ್ಲಸಲ್ಲದ ಆರೋಪ ಮಾಡುವುದು ಮಾಮೂಲಿಯಾಗಿದೆ. ಈ ವಿಚಾರದಲ್ಲಿ ರಾಜ್ಯದ ಸಂಸದರು ಮೌನ ವಹಿಸಿರುವುದು ಅತ್ಯಂತ ಖಂಡನೀಯವಾಗಿದೆ. ರಾಜ್ಯದಲ್ಲಿ ವಿರೋಧ ಪಕ್ಷಗಳು ಸತ್ತುಹೋಗಿವೆ. ಕೂಡಲೇ ರಾಜ್ಯ ಸರ್ಕಾರ ಕಾವೇರಿ ನೀರು ನಿಲ್ಲಿಸದಿದ್ದರೆ ರಾಜ್ಯಾದ್ಯಂತ ಕನ್ನಡ ಪರ ಸಂಘಟನೆಗಳು ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಉದಯನಿಧಿ ಬಂಧನಕ್ಕೆ ಆಗ್ರಹ: ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಅವರ ಪುತ್ರ ಉದಯನಿಧಿ ಸ್ಟಾಲಿನ್ ಸನಾತನ ಧರ್ಮ ಒಂದು ರೀತಿ ಡೆಂಗ್ಯೂ, ಕೊರೊನಾ, ಮಲೇರಿಯಾ ಇದ್ದಂಗೆ ಇದನ್ನು ಬುಡಸಮೇತ ಕಿತ್ತು ಹಾಕಬೇಕು ಎಂದು ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯವಾದದ್ದು, ಪ್ರಪಂಚದಲ್ಲಿ ಎಲ್ಲ ಧರ್ಮಗಳಿಗೆ ಅದರದ್ದೇ ಆದ ಗೌರವ ಇದೆ. ಎಲ್ಲ ಧರ್ಮವನ್ನು ಗೌರವದಿಂದ ಕಾಣಬೇಕು, ಪ್ರೀತಿಸಬೇಕು. ಅದನ್ನು ಬಿಟ್ಟು ಆ ಧರ್ಮ ಸರಿಯಲ್ಲ, ಈ ಧರ್ಮ ಸರಿಯಲ್ಲ ಅನ್ನುವುದು ಸರಿಯಲ್ಲ. ಕೇಂದ್ರ ಸರ್ಕಾರ ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಅವರ ಪುತ್ರನನ್ನು ಬಂಧಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕನ್ನಡಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶಾ.ಮುರಳಿ, ನಿಜಧ್ವನಿ ಗೋವಿಂದರಾಜು, ಗು. ಪುರುಷೋತ್ತಮ, ಮಹೇಶ್‌ಗೌಡ, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ರಾ.ಕುಮಾರ್, ಚಾ.ಹ.ರಾಮು, ಸಿದ್ದರಾಜು, ಸಾಗರ್‌ರಾವತ್ ಇತರರು ಭಾಗವಹಿಸಿದ್ದರು.

ಕರ್ನಾಟಕ ಪಬ್ಲಿಕ್ ಶಾಲೆ ಕೊಠಡಿಗಳ ಉದ್ಘಾಟನೆ



ಗುಂಡ್ಲುಪೇಟೆ, ಸೆ.4– ಗ್ರಾಮೀಣ ಮಕ್ಕಳ ಉತ್ತಮ ಶಿಕ್ಷಣಕ್ಕೆ ಸರ್ಕಾರ ಎಲ್ಲಾ ರೀತಿಯ ನೆರವು ನೀಡುತ್ತಿದ್ದು ಪಾಲಕರು ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ಸೋಮವಾರ ತಾಲೂಕಿನ ಹಂಗಳ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 1.73 ಕೋಟಿ ವೆಚ್ಚದಲ್ಲಿ ನಿರ್ಮಿಸಿದ 11 ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ದಿನೇ ದಿನೆ ತಂತ್ರಜ್ಞಾನ ಮುಂದುವರೆಯುತ್ತಿದ್ದು ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳು ಆಯಾ ಶಾಲೆಗಳಲ್ಲಿಯೇ ಉತ್ತಮ ಶಿಕ್ಷಣ ಪಡೆಯಲು ಅಗತ್ಯವಾದ ಉತ್ತಮ ಕೊಠಡಿಗಳು, ಕಂಪ್ಯೂಟರ್ ಸೇರಿದಂತೆ ಎಲ್ಲಾ ಸವಲತ್ತುಗಳನ್ನು ಸರ್ಕಾರ ನೀಡುತ್ತಿದೆ. ಬಂಡೀಪುರ ಕಾಡಂಚಿನಲ್ಲಿರುವ ಹಂಗಳ ಗ್ರಾಮದಲ್ಲಿ ಆರಂಭವಾಗಿರುವ ಕರ್ನಾಟಕ ಪಬ್ಲಿಕ್ ಶಾಲೆ ತನ್ನ ಎಲ್ಲಾ 800 ವಿದ್ಯಾರ್ಥಿಗಳಿಗೂ ಉತ್ತಮ ಶಿಕ್ಷಣ ನೀಡುತ್ತಿದೆ. ಶಾಲಾವರಣದಲ್ಲಿರುವ ಸುಸಜ್ಜಿತ ಗ್ರಂಥಾಲಯದಲ್ಲಿ ಕಲಿಕೆಗೆ ಅಗತ್ಯವಾದ ಎಲ್ಲಾ ಪುಸ್ತಕಗಳೂ ಲಭ್ಯವಿದೆ. ಆದ್ದರಿಂದ ಪಾಲಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸುವ ಮೂಲಕ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದರು.

ಗ್ರಾಪಂ ಅಧ್ಯಕ್ಷೆ ರೂಪಾ, ಮಾಜಿ ಅಧ್ಯಕ್ಷ ಸ್ವಾಮಿ, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಎಂ.ಮಹೇಶ್, ಹಾಪ್‌ಕಾಮ್ಸ್ ಮಾಜಿ ಅಧ್ಯಕ್ಷ ಡಿ.ಬಿ.ಕುಮಾರ್, ಕಾಲೇಜಿನ ಪ್ರಾಂಶುಪಾಲ ಬಿ.ಜಿ.ಗೋಪಾಲಕೃಷ್ಣ ಸೇರಿದಂತೆ ಹಲವರು ಇದ್ದರು.

ಸೆ. 7ರಂದು ಉದ್ಯೋಗಕ್ಕಾಗಿ ನೇರ ಸಂದರ್ಶನ

ಚಾಮರಾಜನಗರ, ಸೆ.4– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಉದ್ಯೋಗಕ್ಕಾಗಿ ನೇರ ಸಂದರ್ಶನವನ್ನು ಸೆ.7ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ನಗರದ ಜಿಲ್ಲಾಡಳಿತ ಭವನದ 2ನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ 210ರ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಲಾಗಿದೆ.

ಸರ್ವೀಸ್ ಜೆಂಕ್ಷನ್ ಕಂಪನಿಯಲ್ಲಿ ಖಾಲಿ ಇರುವ ಫೀಲ್ಡ್ ಟೆಕ್ನಿಷಿಯನ್ ಹುದ್ದೆಗೆ ಐಟಿಐ (ಯಾವುದೇ ಟ್ರೇಡ್ ಪುರುಷ ಅಭ್ಯರ್ಥಿಗಳು ಮಾತ್ರ), ಹೆಚ್.ಡಿಎಫ್.ಸಿ ಬ್ಯಾಂಕ್ ಮೈಕ್ರೋ ಫೈನಾನ್ಸ್ ಕಂಪನಿಯಲ್ಲಿ ಸೇಲ್ಸ್ ಆಫಿಸರ್ ಹುದ್ದೆಗೆ ಯಾವುದೇ ಪದವೀಧರರು ಹಾಗೂ ಸುಪ್ರೀಮ್ ಫಾರ್ಮಸ್ಯುಟಿಕಲ್ ಪ್ರೈ.ಲಿ. ಕಂಪನಿಯಲ್ಲಿ ಲ್ಯಾಬ್ ಟೆಕ್ನಿಷಿಯನ್ ಹುದ್ದೆಗೆ ಬಿಎಸ್ಸಿ, ಎಂಎಸ್ಸಿ (ಕೆಮಿಸ್ಟ್ರಿ), ಬಿ ಫಾರ್ಮಸಿ ಮತ್ತು ಎಂ–ಫಾರ್ಮಸಿ ವಿದ್ಯಾರ್ಹತೆ ಹೊಂದಿರಬೇಕು. 18 ರಿಂದ 30ರ ವಯೋಮಿತಿಯ ಪುರುಷ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ದೂ.ಸಂ 08226–224430 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗಾಧಿಕಾರಿ ಎ. ಮಹಮದ್ ಅಕ್ಬರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಸೆ.4– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಹರದನಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ 2ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಸೆಪ್ಟೆಂಬರ್ 6ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಿದ್ದಯ್ಯನಪುರ, ಹೊಂಗಲವಾಡಿ, ಕೋಳಿಪಾಳ್ಯ, ಬಂಧಿಗೌಡನಹಳ್ಳಿ, ಅಟ್ಟುಗೂಳಿಪುರ ಹಾಗೂ ಕೊತ್ತಲವಾಡಿ, ಅರಕಲವಾಡಿ, ಯರಗನಹಳ್ಳಿ, ಸುವರ್ಣನಗರ, ಫ್ಯಾಕ್ಟರಿ, ಬಿಸಿಲವಾಡಿ, ಮಣಜನೂರು, ಡೊಳ್ಳಿಪುರ, ಚನ್ನಪನಪುರ, ಅಮಚವಾಡಿ, ಮಾದಲವಾಡಿ ಮತ್ತು ಕಿಲಿಗೆರೆ, ಮಾದಲವಾಡಿ, ಉನಗುಂಬ, ಯರಗನಹಳ್ಳಿ, ಅಚ್ಚಟ್ಟಿಪುರ, ಯಾನಗಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ 1912 ಸಂಪರ್ಕಿಸುವಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯ ನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಕಂಗೊಳಿಸಲಿವೆ 85 ಸಾವಿರ ಹೂ ಗಿಡಗಳು

● ತೋಟಗಾರಿಕೆ ಇಲಾಖೆಯ ವಿವಿಧ ನರ್ಸರಿಗಳಲ್ಲಿ ಪೋಷಣೆ ● ಊಟಿ, ಪುಣೆ, ಕೋಲ್ಕತ್ತಾದಿಂದಲೂ ಬರುತ್ತಿವೆ ಆಕರ್ಷಕ ಪುಷ್ಪಗಳು ● ಮೈಸೂರು ಅರಮನೆ, ಚಂದ್ರಯಾನ, ಸ್ವಾಮಿ ವಿವೇಕಾನಂದ ಪ್ರತಿಮೆ, ವಿಧಾನಸೌಧ ಆಕೃತಿ ರಚನೆಯ ಪ್ರಸ್ತಾಪ





ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಸೆ.4– ನಾಡಹಬ್ಬ ದಸರಾ ಮಹೋತ್ಸವದಲ್ಲಿ ದಿನವಿಡೀ ಸಾವಿರಾರು ಮಂದಿಯನ್ನು ಆಕರ್ಷಿಸುವ ದಸರಾ ಫಲಪುಷ್ಪ ಪ್ರದರ್ಶನ ಈ ಬಾರಿ ಪ್ರವಾಸಿಗರಿಗೆ ಮುದ ನೀಡಲಿದ್ದು, 40ಕ್ಕೂ ಹೆಚ್ಚು ಬಗೆಯ ಹೂವಿನ ಗಿಡಗಳನ್ನು 85 ಸಾವಿರ ಹೂವಿನ ಕುಂಡಗಳಲ್ಲಿ ಬೆಳೆಸಲಾಗುತ್ತಿದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಹಾರ್ಡಿಂಗ್ ವೃತ್ತದ ಸಮೀಪವಿರುವ ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನ ಇನ್ನಷ್ಟು ಕಳೆ ಕಟ್ಟಿಕೊಳ್ಳಲಿದೆ. ತೋಟಗಾರಿಕಾ ಇಲಾಖೆ ವತಿಯಿಂದ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗುತ್ತಿದ್ದು, ಹೂವಿನ ಗಿಡಗಳು ವಿವಿಧ ನರ್ಸರಿಗಳಲ್ಲಿ ಬೆಳೆದು ನಿಂತಿವೆ. ಅ.15ರಿಂದ 24ರವರೆಗೆ ದಸರಾ ಮಹೋತ್ಸವ ಜರುಗಲಿದ್ದು, ಫಲಪುಷ್ಪ ಪ್ರದರ್ಶನ ಅ.25 ಅಥವಾ 26ರವರೆಗೆ ನಡೆಸಲು ಚರ್ಚಿಸಲಾಗುತ್ತಿದೆ.

ದಸರಾ ಮಹೋತ್ಸವದಲ್ಲಿ ಜಂಬೂಸವಾರಿ, ದಸರಾ ವಸ್ತು ಪ್ರದರ್ಶನ, ಆಹಾರ ಮೇಳ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಂತೆ ಫಲಪುಷ್ಪ ಪ್ರದರ್ಶನಕ್ಕೂ ಅಧಿಕ ಸಂಖ್ಯೆಯ ವೀಕ್ಷಕರು ಆಗಮಿಸಲಿದ್ದು, ಬಣ್ಣ ಬಣ್ಣದ ಹೂವುಗಳಿರುವ ಸಸ್ಯಕಾಶಿಯ ವಯ್ಯಾರವನ್ನು ಆಸ್ವಾದಿಸಿ ಪುಳಕಗೊಳ್ಳುತ್ತಾರೆ. ವಿವಿಧ ಸಂದರ್ಭಗಳಲ್ಲಿ ಬೆಂಗಳೂರು, ಊಟಿ ಸೇರಿದಂತೆ ಬೇರೆ ಬೇರೆ ನಗರಗಳಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನವನ್ನು ಮೀರಿಸುವಂತೆ ದಸರಾ ಫಲಪುಷ್ಪ ಪ್ರದರ್ಶನ ನಡೆಸಲು ತೋಟಗಾರಿಕಾ ಇಲಾಖೆ ಪ್ರತಿ ವರ್ಷವೂ ಶ್ರಮಿಸುತ್ತಿದ್ದು, ಈ ಬಾರಿಯೂ ದಸರಾ ಫಲಪುಷ್ಪ ಪ್ರದರ್ಶನ ಪ್ರೇಕ್ಷಕರ ಕಣ್ಮನ ಸೆಳೆಯಲಿದೆ.

85 ಸಾವಿರ ಹೂವಿನ ಕುಂಡ: ವಿವಿಧ ಆಕೃತಿಗಳೊಂದಿಗೆ ಕುಪ್ಪಣ್ಣ ಪಾರ್ಕ್‌ನ ವಾಕಿಂಗ್ ಪಾಥ್ ಸೇರಿದಂತೆ ಆಯ್ದ ಸ್ಥಳದಲ್ಲಿ ಜೋಡಿಸುವುದಕ್ಕೆ 85 ಸಾವಿರಕ್ಕೂ ಹೆಚ್ಚು ಹೂವಿನ ಕುಂಡಗಳಲ್ಲಿ ವಿವಿಧ ಆಕರ್ಷಣೀಯ ಗಿಡಗಳನ್ನು ಬೆಳೆಸಲಾಗುತ್ತಿದೆ. ದಸರಾ ಮಹೋತ್ಸವದ ಆರಂಭಕ್ಕೂ ಒಂದು ವಾರದ ಮುನ್ನವೇ ಹೂವುಗಳು ಬಿಡುವಂತೆ ಗಿಡಗಳನ್ನು ಬೆಳೆಸಿ ಪೋಷಿಸಲಾಗುತ್ತಿದೆ. ಫಲಪುಷ್ಪ ಪ್ರದರ್ಶನಕ್ಕೆ ಬಳಸುವ ಹೂವಿನ ಗಿಡಗಳುಳ್ಳ ಕುಂಡಗಳನ್ನು ಕೇಂದ್ರ ಸಸ್ಯಗಾರ, ಕುಪ್ಪಣ್ಣ ಪಾರ್ಕ್, ಸರ್ಕಾರಿ ಅತಿಥಿ ಗೃಹ, ಜಲದರ್ಶಿನಿ ವಿಭಾಗ, ಕರ್ಜನ್ ಪಾರ್ಕ್, ಗೋರ್ಡಾನ್ ಪಾರ್ಕ್ ಮತ್ತು ವಸ್ತು ಪ್ರದರ್ಶನದಲ್ಲಿರುವ ತೋಟಗಾರಿಕೆ ವಿಭಾಗಗಳಲ್ಲಿ ಪಾಲನೆ ಮಾಡಲಾಗುತ್ತಿದೆ. ಗಿಡಗಳಿಗೆ ಗೊಬ್ಬರ ಹಾಕಿ ಸಕಾಲಕ್ಕೆ ನೀರುಣಿಸುವ ಮೂಲಕ ಹೂವಿನ ಗಿಡದ ಸತ್ವವನ್ನು ಕಾಪಾಡಿಕೊಳ್ಳಲಾಗುತ್ತಿದೆ.

ಕಣ್ಮನ ಸೆಳೆಯುವ ಆಕೃತಿಗಳು

ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ಹಲವು ಆಕೃತಿಗಳು ಕಣ್ಮನ ಸೆಳೆಯಲಿವೆ. ಈ ಬಾರಿ ಫಲಪುಷ್ಪ ಪ್ರದರ್ಶನದಲ್ಲಿ ಮೈಸೂರು ಅರಮನೆ, ಸ್ವಾಮಿ ವಿವೇಕಾನಂದ ಪ್ರತಿಮೆ, ಚಂದ್ರಯಾನ ನೌಕೆ, ವಿಧಾನಸೌಧ ಆಕೃತಿ ಸೇರಿದಂತೆ ಇನ್ನಿತರ ಆಕೃತಿಗಳನ್ನು ಹೂವಿನಿಂದಲೇ ನಿರ್ಮಿಸಬೇಕೆಂಬ ಪ್ರಸ್ತಾಪ ತೋಟಗಾರಿಕಾ ಇಲಾಖೆ ಮುಂದೆ ಬಂದಿದೆ ಅದರಲ್ಲಿ ಚಂದ್ರಯಾನ ನೌಕೆ ಸ್ಥಾಪನೆ ನಿರ್ಧರಿಸಲಾಗಿದ್ದು, ಇನ್ನಷ್ಟು ಆಕೃತಿಗಳು ಈ ಬಾರಿ ಗಮನ ಸೆಳೆಯಲಿವೆ.

ಫ್ರೆಂಚ್ ಮೇರಿ ಗೋಲ್ಡ್, ಡಯಾಂತರ್ಸ್, ವರ್ಬನ, ಬಿಗೋನಿಯಾ, ದಾಲಿಯಾ, ಫೈರ್ ಬುಸ್, ಆರ್ನಮೆಂಟಲ್ ಕೇಲಾ, ಜೀನಿಯಾ, ವಿಂಕಾ, ಸಾಲ್ವಿಯಾ, ಮಾರಿಗೋಲ್ಡ್, ಸ್ವೀಟ್ ವಿಲಿಯಮ್, ಸೆಲೋಶಿಯಾ ಸೇರಿದಂತೆ 40ಕ್ಕೂ ಹೆಚ್ಚು ತಳಿಯ ಗಿಡಗಳನ್ನು ಬೆಳೆಸಲಾಗುತ್ತಿದ್ದು, ಇದರೊಂದಿಗೆ ಎಕ್ಸಾಟಿಕ್ ಸ್ಪೀಶಿಯಸ್ ಹೂವಿನ ಗಿಡಗಳನ್ನು ಇಲಾಖೆ ವತಿಯಿಂದ ಖರೀದಿಸಲಾಗುತ್ತಿದೆ. ಅವುಗಳಲ್ಲಿ ಲಿಲ್ಲೀಸ್, ಕುರ್ಕುಮಾ, ಚೆಲಾಂಚೋಸ್ ಹಾಗೂ ಇನ್ನಿತರ ಹೂವಿನ ಗಿಡಗಳಿವೆ. ಪ್ರದರ್ಶನದಲ್ಲಿ ಬಳಸಲಾಗುವ ಹೂವಿನ ಗಿಡಗಳು ಹಂತ ಹಂತವಾಗಿ ಹೂವು ಬಿಡುವುದರಿಂದ ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ. 120 ದಿನದ ನಂತರ ಹೂವು ಬಿಡುವ ಗಿಡಗಳನ್ನು ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿಯೇ ಬೀಜ ನೆಟ್ಟು ಬೆಳೆಸಲಾಗುತ್ತಿದೆ. ಅಲ್ಲದೆ, 90 ದಿನ, 80 ದಿನ, 60 ದಿನ, 50 ದಿನ ಹಾಗೂ 40 ದಿನದ ಬಳಿಕ ಹೂವು ಬಿಡುವ ಗಿಡಗಳನ್ನು ಈಗಾಗಲೇ ಬೆಳೆಸಲಾಗುತ್ತಿದ್ದು, ಫಲಪುಷ್ಪ ಪ್ರದರ್ಶನ ಆರಂಭದ ವೇಳೆಗೆ ಎಲ್ಲಾ ಗಿಡಗಳು ಹೂವುಗಳಿಂದ ಕಂಗೊಳಿಸಲಿವೆ.

ಹೊರ ರಾಜ್ಯದಿಂದಲೂ ಹೂವಿನ ಗಿಡ: ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಗಾಜಿನ ಮನೆಯಲ್ಲಿ ಜೋಡಣೆ ಮಾಡಲು ಹಾಗೂ ಪ್ರವಾಸಿಗರ ಆಕರ್ಷಣೆಗಾಗಿ ಈ ಬಾರಿಯೂ ತಮಿಳುನಾಡಿನ ಊಟಿ, ಪುಣೆ, ಕೊಲ್ಕತ್ತಾದಿಂದಲೂ 35 ಸಾವಿರ ಹೂವಿನ ಗಿಡಗಳುಳ್ಳ ಪಾಟ್‌ಗಳನ್ನು ಖರೀದಿಸಲಾಗುತ್ತಿದೆ. ಮೈಸೂರಿನ ವಾತಾವರಣದಲ್ಲಿ ಬೆಳೆಯಲು ಸಾಧ್ಯವಾಗದ ಹೂವಿನ ಗಿಡಗಳನ್ನು ಹೊರ ರಾಜ್ಯದಿಂದ ತರಿಸಲಾಗುತ್ತಿದೆ. ವಿವಿಧ ಖಾಸಗಿ ನರ್ಸರಿಗಳಿಗೆ ಈಗಾಗಲೇ ಆರ್ಡರ್ ನೀಡಲಾಗಿದ್ದು, ನವರಾತ್ರಿ ಆರಂಭಕ್ಕೂ ವಾರದ ಮೊದಲೇ ಪುಣೆ, ಕೋಲ್ಕತ್ತಾ ಹಾಗೂ ಊಟಿಯಿಂದ ಸುರಕ್ಷಿತವಾಗಿ ಹೂವಿನ ಗಿಡಗಳನ್ನು ಮೈಸೂರಿಗೆ ತರಲು ಕ್ರಮ ಕೈಗೊಳ್ಳಲಾಗಿದೆ.



ಇಂದು ಮೈಸೂರು ಮೇಯರ್ ಅವಧಿ ಮುಕ್ತಾಯ; ಹಂಗಾಮಿಯಾಗಿ ಮುಂದುವರೆಯುವ ಸಾಧ್ಯತೆ



ಮೈಸೂರು, ಸೆ.4(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್ ಅಧಿಕಾರಾವಧಿ ಮಂಗಳವಾರ(ಸೆ.5) ಮುಕ್ತಾಯವಾಗಲಿದೆ. ಕಳೆದ 2022ರ ಸೆಪ್ಟೆಂಬರ್ 6ರಂದು ನಡೆದ ಚುನಾವಣೆಯಲ್ಲಿ ಬಿಜೆಪಿಯ ಶಿವಕುಮಾರ್ ಮೇಯರ್ ಹಾಗೂ ಡಾ.ಜಿ.ರೂಪಾ ಉಪಮೇಯರ್ ಆಗಿ ಆಯ್ಕೆಯಾಗಿದ್ದರು. ಆ ಮೂಲಕ ಬಿಜೆಪಿ ಎರಡನೇ ಬಾರಿ ಮೈಸೂರು ಪಾಲಿಕೆಯ ಆಡಳಿತದ ಚುಕ್ಕಾಣಿ ಹಿಡಿದಿತ್ತು. ನಿಯಮಾನುಸಾರ ಶಿವಕುಮಾರ್ ಹಾಗೂ ರೂಪಾ ಅವರ ಅಧಿಕಾರಾವಧಿ ಸೆ.5ರ ಮಧ್ಯರಾತ್ರಿ 12ಕ್ಕೆ ಕೊನೆಗೊಳ್ಳಲಿದೆ.

ಹಂಗಾಮಿಯಾಗಿ ಮುಂದುವರಿಕೆ?: ಪ್ರಸಕ್ತ ಕೌನ್ಸಿಲ್ ಅವಧಿಯು ನವೆಂಬರ್‌ಗೆ ಮುಕ್ತಾಯವಾಗಲಿರುವ ಕಾರಣ ಇನ್ನೆರಡು ತಿಂಗಳಿಗೆ ಮೇಯರ್ ಚುನಾವಣೆ ನಡೆಸುವ ಸಾಧ್ಯತೆ ಕಡಿಮೆ. ಈ ಹಿನ್ನೆಲೆಯಲ್ಲಿ ಶಿವಕುಮಾರ್ ಹಾಗೂ ರೂಪಾ ಹಂಗಾಮಿಯಾಗಿ ಮುಂದುವರೆಯಲಿದ್ದಾರೆ ಎನ್ನಲಾಗಿದೆ.

ಇಂದು ಕಾಂಗ್ರೆಸ್ ಸಂಸದೀಯ ಕಾರ್ಯತಂತ್ರ ಸಮಿತಿ ಸಭೆ ಕರೆದ ಸೋನಿಯಾ!



ನವದೆಹಲಿ: ಮುಂಬರುವ ಸಂಸತ್ತಿನ ವಿಶೇಷ ಅಧಿವೇಶನ ಅಂಗವಾಗಿ ನಾಳೆ ಕಾಂಗ್ರೆಸ್ ಸಂಸದೀಯ ಕಾರ್ಯತಂತ್ರ ಸಮಿತಿ ಸಭೆಯನ್ನು ಸೋನಿಯಾ ಗಾಂಧಿ ಕರೆದಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಜ್ವರದಿಂದಾಗಿ ಸರ್ ಗಂಗಾರಾಮ್ ಆಸ್ಪತ್ರೆಗೆ ದಾಖಲಾಗಿದ್ದ ಸೋನಿಯಾ ಗಾಂಧಿ ಸೋಮವಾರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದು, ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಪ್ರಸ್ತಾಪಿಸಬಹುದಾದ ವಿಷಯಗಳು, ಪಕ್ಷದ ಯೋಜನೆ ಕುರಿತು ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ. ವಿಶೇಷ ಸಂಸತ್ ಅಧಿವೇಶನದ ಕಾರ್ಯತಂತ್ರದ ಕುರಿತು ಚರ್ಚಿಸಲು INDIA ಮೈತ್ರಿಕೂಟದ ಸಂಸದರ ಸಭೆಯನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆದಿದ್ದಾರೆ. ಸೆಪ್ಟೆಂಬರ್ 18–22ರವರೆಗೆ ಐದು ದಿನಗಳ ಕಾಲ ಸಂಸತ್ತಿನ ವಿಶೇಷ ಅಧಿವೇಶನ ನಡೆಯಲಿದೆ. ಆದರೆ ವಿಶೇಷ ಅಧಿವೇಶನದ ಅಜೆಂಡಾ ಇನ್ನೂ ಬಹಿರಂಗವಾಗಿಲ್ಲ.

ಒಂದನೇ ಪುಟದಿಂದ

ಬರ ಘೋಷಣೆಗೆ ಮೀನಾಮೇಷ

ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಈವರೆಗೆ 3 ಬಾರಿ ಸಭೆ ನಡೆಸಿ ರಾಜ್ಯದಲ್ಲಿನ ಬರ ಪರಿಸ್ಥಿತಿಯನ್ನು ಪರಾಮರ್ಶಿಸಿದೆ.

ಆ. 22 ರಂದು ನಡೆದ ಉಪ ಸಮಿತಿ ಸಭೆಯಲ್ಲಿ ಕೇಂದ್ರ ಸರ್ಕಾರದ ಕೃಷಿ, ಸಹಕಾರ ಮತ್ತು ರೈತರ ಕಲ್ಯಾಣ ಮಂತ್ರಾಲಯದ ಪರಿಷ್ಕೃತ ಬರ ಕೈಪಿಡಿ 2020ರಲ್ಲಿ ಸೂಚಿಸಲಾಗಿರುವ, ಕಡ್ಡಾಯ ಮಾನದಂಡಗಳಾದ ಮಳೆ ಕೊರತೆ ಶೇ.60ರಷ್ಟು, ಸತತ 3 ವಾರಗಳ ಶುಷ್ಕ ವಾತಾವರಣ, ಇತರೆ ತತ್ಪರಿಣಾಮ ಮಾನದಂಡಗಳ (ಉಪಗ್ರಹ ಆಧಾರಿತ ಬೆಳೆ ಸೂಚ್ಯಂಕ, ತೇವಾಂಶ ಕೊರತೆ ಹಾಗೂ ಜಲ ಸಂಪನ್ಮೂಲ ಸೂಚ್ಯಂಕ) ಅನ್ವಯ, ರಾಜ್ಯದಲ್ಲಿ ಬರ ಪರಿಸ್ಥಿತಿ ಕಂಡುಬಂದಿರುವ 113 ತಾಲೂಕುಗಳನ್ನು ಕ್ಷೇತ್ರ ಪರಿಶೀಲನೆ ಹಾಗೂ ದೃಢೀಕರಣಕ್ಕಾಗಿ ಜಂಟಿ ಸಮೀಕ್ಷೆ ಕೈಗೊಂಡು ವರದಿಯನ್ನು ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿತ್ತು.

ಆ. 19 ರಲ್ಲಿದ್ದಂತೆ 113 ತಾಲೂಕುಗಳ ಪೈಕಿ ಜಂಟಿ ಸಮೀಕ್ಷೆಯಲ್ಲಿ ಮಾರ್ಗಸೂಚಿ ಅನ್ವಯ 62 ತಾಲೂಕುಗಳ ಬರ ಘೋಷಣೆಗೆ ಅರ್ಹವಾಗಿದೆ. ಆದರೆ, ಜಂಟಿ ಸಮೀಕ್ಷೆಯ ನಂತರ ಬೆಳೆ ಪರಿಸ್ಥಿತಿ ಮತ್ತೆ ಕುಸಿದಿದೆ ಎಂದು ವರದಿಗಳು ಬಂದಿರುತ್ತವೆ. ಹಾಗಾಗಿ ಉಳಿದ 51 ತಾಲೂಕುಗಳಲ್ಲಿ ಮತ್ತೊಮ್ಮೆ ಜಂಟಿ ಸಮೀಕ್ಷೆಗೆ ಒಳಪಡಿಸಲು ತೀರ್ಮಾನಿಸಿದೆ ಎಂದರು. ಸೆ.2ರ ಅಂತ್ಯಕ್ಕೆ ಅರ್ಹವಾಗಿರುವ 83 ತಾಲೂಕುಗಳಲ್ಲಿ ಗ್ರೌಂಡ್ ಟ್ರೂಥಿಂಗ್‌ಗೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲು ತೀರ್ಮಾನಿಸಲಾಯಿತು. ಒಟ್ಟಾರೆ 51 ಮತ್ತು 83 ತಾಲೂಕುಗಳಲ್ಲಿ ಗ್ರೌಂಡ್ ಟ್ರೂಥಿಂಗ್ ಮುಗಿಸಿ ಒಂದು ವಾರದೊಳಗೆ ವರದಿ ಸಲ್ಲಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದೆ.

ಈ 134 ತಾಲೂಕುಗಳಲ್ಲಿ ಜಂಟಿ ಸಮೀಕ್ಷೆ ವರದಿ ಆಧಾರದ ಅನುಸಾರ ಬರ ಘೋಷಣೆ ತೀರ್ಮಾನಿಸಲಾಗುವುದು. ಘೋಷಣೆಯ ನಂತರ ಕೇಂದ್ರ ಸರ್ಕಾರದ ನೆರವಿಗಾಗಿ ಮನವಿ ಸಲ್ಲಿಸಲಾಗುವುದು. ಬರ ಘೋಷಣೆಯಾದ ದಿನದಿಂದ ವಿಧಾನಸಭಾ ಕ್ಷೇತ್ರದ ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ರಚಿಸಲು ತೀರ್ಮಾನಿಸಲಾಗಿದೆ.

ಬರ ಘೋಷಣೆ ನಂತರ ಕುಡಿಯುವ ನೀರು ಕೊರತೆ ಕಂಡುಬಂದ ವಸತಿ ಪ್ರದೇಶಗಳಲ್ಲಿ ಟ್ಯಾಂಕರ್ ಮುಖಾಂತರ ಅಥವಾ ಬಾಡಿಗೆ ಬೋರ್‌ವೆಲ್ ಮುಖಾಂತರ ತುರ್ತು ಕುಡಿಯುವ ನೀರು ಒದಗಿಸುವ ಖರ್ಚು ವೆಚ್ಚವನ್ನು ಎಸ್‌ಡಿಆರ್‌ಎಫ್ ಮುಖಾಂತರ ಭರಿಸಲು ಅನುಮತಿಸಿದೆ ಎಂದರು.

ಇಂದು ಅರಮನೆ ಆವರಣಕ್ಕೆ ಗಜಪಡೆ

ಭವನದ ಆವರಣದಲ್ಲಿ ಅರಣ್ಯ ಇಲಾಖೆ ವತಿಯಿಂದ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಬೀಳ್ಕೊಡಲಾಗುತ್ತದೆ ನಂತರ ಬಲ್ಲಾಳ್ ವೃತ್ತ ಜೆಎಲ್‌ಬಿ ರಸ್ತೆ ರಾಮಸ್ವಾಮಿ ಸರ್ಕಲ್, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ಮೂಲಕ ಜಯಮಾರ್ತಾಂಡ ದ್ವಾರದವರೆಗೆ ಮೆರವಣಿಗೆಯಲ್ಲಿ ಆನೆಗಳನ್ನು ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಕರೆತರಲಾಗುತ್ತದೆ. ಮಂಗಳವಾದ್ಯದೊಂದಿಗೆ ಅಲಂಕೃತಗೊಂಡ ಆನೆಗಳನ್ನು ಮೆರವಣಿಗೆಯಲ್ಲಿ ಕರೆಲಾಗುತ್ತದೆ.

ಅರಮನೆಯಿಂದ ಸಾಂಪ್ರದಾಯಿಕ ಪೂಜೆ: ಅರಣ್ಯ ಭವನದಿಂದ ಆಗಮಿಸಿದ ದಸರಾ ಗಜಪಡೆಗೆ ಅರಮನೆ ವತಿಯಿಂದ ಸೆ.5ರಂದು ಮಧ್ಯಾಹ್ನ 12.01 ರಿಂದ 12.51ರವರೆಗೆ ಸಲ್ಲುವ ಶುಭ ಅಭಿಜಿನ್ ಲಗ್ನದಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಬರಮಾಡಿಕೊಳ್ಳಲಾಗುತ್ತದೆ. ಬಳಿಕ ಮಂಗಳವಾದ್ಯ ಹಾಗೂ ವಿವಿಧ ಜಾನಪದ ಕಲಾತಂಡದೊಂದಿಗೆ ಜಯಮಾರ್ತಾಂಡ ದ್ವಾರದ ಮುಂಭಾಗದಿಂದ ಅರಮನೆ ಪ್ರಾಂಗಣದವರೆಗೆ ಮೆರವಣಿಗೆಯಲ್ಲಿ ಕರೆದುಕೊಂಡು ಬರಲಾಗುತ್ತದೆ. ಈ ವೇಳೆ ಗಜಪಡೆ ಮಾವುತರಿಗೆ ದಿನಬಳಕೆ ವಸ್ತುಗಳುಳ್ಳ ಕಿಟ್ ವಿತರಿಸಲಾಗುತ್ತದೆ. ನಂತರ ಅರಮನೆ ಆವರಣದಲ್ಲಿ ದಸರಾ ಗಜಪಡೆಗಳಿಗಾಗಿ ನಿಗಧಿ ಮಾಡಿರುವ ಸ್ಥಳದಲ್ಲಿ ಆನೆಗಳನ್ನು ವಿರಮಿಸಲು ಬಿಡಲಾಗುತ್ತದೆ.

ನಾಳೆ ಅರಮನೆಗೆ ಅಂಬಾರಿ ಆನೆ, ಗಜಪಡೆಯ ನಾಯಕ ಅಭಿಮನ್ಯು ನೇತೃತ್ವದಲ್ಲಿ ಭೀಮ, ಮಹೇಂದ್ರ, ಅರ್ಜುನ, ಧನಂಜಯ, ಗೋಪಿ, ಕಂಜನ್, ಹೆಣ್ಣಾನೆಗಳಾದ ವಿಜಯ ಹಾಗೂ ವರಲಕ್ಷ್ಮೀ ಆನೆ ಅರಮನೆ ಪ್ರವೇಶಿಸಲಿವೆ. ಮಾಸಾಂತ್ಯಕ್ಕೆ 2ನೇ ತಂಡದಲ್ಲಿ ದುಬಾರೆ ಕ್ಯಾಂಪ್‌ನ ಪ್ರಶಾಂತ, ಸುಗ್ರೀವ, ರಾಂಪುರ ಕ್ಯಾಂಪ್‌ನ ರೋಹಿತ್, ಹಿರಣ್ಯ ಹಾಗೂ ದೊಡ್ಡಹರವೆ ಕ್ಯಾಂಪ್‌ನ ಲಕ್ಷ್ಮೀ ಆಗಮಿಸಲಿವೆ.

ಗಣ್ಯರು ಭಾಗಿ: ಅರಮನೆ ದ್ವಾರದಲ್ಲಿ ದಸರಾ ಗಜಪಡೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪೂಜೆ ಸಲ್ಲಿಸಿ ಬರಮಾಡಿಕೊಳ್ಳಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅರಣ್ಯ ಇಲಾಖೆಯ ಸಿಎಫ್ ಡಾ.ಮಾಲತಿ ಪ್ರಿಯಾ, ಡಿಸಿಎಫ್‌ಗಳಾದ ಸೌರಭ್ ಕುಮಾರ್, ಬಸವರಾಜು ಸೇರಿದಂತೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಹುಲಿಗೆ ಬಾಲಕ ಬಲಿ

ಜಮೀನಿನಲ್ಲಿ ಬೆಳೆದಿದ್ದ ಮೆಣಸಿನಕಾಯಿ ಬಿಡಿಸಿ, ಮೂಟೆಯಲ್ಲಿಟ್ಟಿದ್ದ ಮಾದುಬಾಯಿಯವರು, ಮೂಟೆ ನೋಡಿಕೊಳ್ಳುವಂತೆ ಮಗನಿಗೆ ಹೇಳಿ ಮತ್ತೊಂದು ಚೀಲ ತರಲು ಹೋಗಿದ್ದಾರೆ. ಈ ವೇಳೆ ಹುಲಿ ಬಾಲಕನ ಮೇಲೆ ದಾಳಿ ನಡೆಸಿ, ಕಚ್ಚಿ ಎಳೆದೊಯ್ದು ದೇಹದ ಕೆಲ ಭಾಗಗಳನ್ನು ತಿಂದು ಪರಾರಿಯಾಗಿದೆ. ಜಮೀನಿನಲ್ಲಿ ಮಗ ಇಲ್ಲದ್ದನ್ನು ನೋಡಿದ ಮಾದುಬಾಯಿಯವರು ಮನೆಗೆ ಹೋಗಿರಬಹುದು ಎಂದುಕೊಂಡು ಮೊಬೈಲ್‌ನಲ್ಲಿ ಕರೆ ಮಾಡಿ ವಿಚಾರಿಸಿದಾಗ ಆತ ಮನೆಗೆ ಹೋಗಿಲ್ಲ ಎಂಬುದು ಗೊತ್ತಾಗಿದೆ. ಅಕ್ಕಪಕ್ಕದಲ್ಲಿ ಹುಡುಕಾಡಿದಾಗ ಬಾಲಕನ ಶವ ಪತ್ತೆಯಾಗಿದೆ.

ಪ್ರತಿಭಟನೆ: ಹುಲಿ ದಾಳಿಗೆ ಬಾಲಕ ಬಲಿಯಾದ ವಿಷಯವನ್ನು ಗ್ರಾಮಸ್ಥರು ಅರಣ್ಯ ಇಲಾಖೆ ಸಿಬ್ಬಂದಿಗೆ ಮೊಬೈಲ್ ಮೂಲಕ ತಿಳಿಸಿದರೂ ಅವರು 2 ಗಂಟೆ ಕಾಲ ತಡವಾಗಿ ಆಗಮಿಸಿದ್ದರಿಂದ ರೊಚ್ಚಿಗೆದ್ದ ಗ್ರಾಮಸ್ಥರು, ಪ್ರತಿಭಟನೆಗೆ ಮುಂದಾದರು. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿದಾಗ ಅವರೊಂದಿಗೆ ಮಾತಿನ ಚಕಮಕಿಗೆ ಇಳಿದರು. ಕೆ.ಎಸ್. ಹರ್ಷಿತ್ ಅವರು ಮೇಟಿಕುಪ್ಪೆ ವಲಯಾರಣ್ಯಾಧಿಕಾರಿಯಾಗಿ ಬಂದಾಗಿನಿಂದಲೂ ಅರಣ್ಯ ಸಿಬ್ಬಂದಿ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಈವರೆಗೆ ಹುಲಿ ದಾಳಿಗೆ 30ಕ್ಕೂ ಹೆಚ್ಚು ರಾಸುಗಳು ಬಲಿಯಾಗಿದ್ದರೂ ಅರಣ್ಯಾಧಿಕಾರಿಗಳು ಹುಲಿ ಸೆರೆಗೆ ಮುಂದಾಗಿಲ್ಲ ಎಂದು ಆರೋಪಿಸಿದ ಗ್ರಾಮಸ್ಥರು ಹರ್ಷಿತ್ ಅವರನ್ನು ಅಮಾನತುಪಡಿಸಬೇಕು ಎಂದು ಒತ್ತಾಯಿಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ಶಾಸಕ ಅನಿಲ್ ಚಿಕ್ಕಮಾದು, ಬಾಲಕನ ಪೋಷಕರಿಗೆ ಸಾಂತ್ವನ ಹೇಳಿ ವೈಯಕ್ತಿಕ ಪರಿಹಾರ ಮಾತ್ರವಲ್ಲದೇ ಅರಣ್ಯ ಇಲಾಖೆಯ 15 ಲಕ್ಷ ರೂ. ಪರಿಹಾರದ ಚೆಕ್ ಅನ್ನು ನೀಡಿದರು. ಸರ್ಕಾರದ ವತಿಯಿಂದ ಬಾಲಕನ ತಂದೆಗೆ ಉದ್ಯೋಗ ಹಾಗೂ ಮನೆ ನಿರ್ಮಾಣ ಮಾಡಿಕೊಡುವುದಾಗಿ ಶಾಸಕರು ಭರವಸೆ ನೀಡಿದರು. ಇದೇ ವೇಳೆ ಬಾಲಕನ ಪೋಷಕರಿಗೆ ಆರ್‌ಎಫ್‌ಓ ಹರ್ಷಿತ್ ಅವರು 5 ಲಕ್ಷ ರೂ. ವೈಯಕ್ತಿಕ ಪರಿಹಾರ ನೀಡುವುದಾಗಿ ಹೇಳಿದರು. ನಂತರ ಗ್ರಾಮಸ್ಥರು ಪ್ರತಿಭಟನೆ ಹಿಂಪಡೆದರು.

ಈ ವೇಳೆ ಡಿಸಿಎಫ್ ಹರ್ಷಕುಮಾರ್, ಎಸಿಎಫ್ ರಂಗಸ್ವಾಮಿ, ಆರ್‌ಎಫ್‌ಓ ಪೂಜಾ, ಅಡಿಷನಲ್ ಎಸ್ಪಿ ನಂದಿನಿ, ಡಿವೈಎಸ್ಪಿ ಮಹೇಶ್, ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಶಬ್ಬೀರ್‌ಹುಸೇನ್, ಲಕ್ಷ್ಮೀಕಾಂತ್, ಸಬ್ ಇನ್ಸ್‌ಪೆಕ್ಟರ್ ರವಿಶಂಕರ್ ಇನ್ನಿತರರಿದ್ದರು.

ಕಿಟಕಿ ಮೂಲಕ ಮನೆ ಬಾಗಿಲು ಚಿಲಕ ತೆಗೆದು 3 ಮೊಬೈಲ್, ಲ್ಯಾಪ್‌ಟಾಪ್, ನಗದು ಕಳವು

ಮೈಸೂರು, ಸೆ. 4– ಕಿಟಕಿ ಮೂಲಕ ಮನೆ ಬಾಗಿಲ ಚಿಲಕ ತೆಗೆದು ಮೂರು ಮೊಬೈಲ್ ಮತ್ತು ಲ್ಯಾಪ್‌ಟಾಪ್ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ಸಿದ್ದಲಿಂಗಪುರದಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಮಾರ್ಕೆಟಿಂಗ್ ವ್ಯವಹಾರ ಮಾಡುತ್ತಿರುವ ಸಂತೋಷ್(33) ಲ್ಯಾಪ್‌ಟಾಪ್ ಮತ್ತು ಮೊಬೈಲ್ ಕಳೆದುಕೊಂಡವರಾಗಿದ್ದು, ಇವರು ಸೆಪ್ಟೆಂಬರ್ 1 ರಂದು ರಾತ್ರಿ 12 ಗಂಟೆ ಸುಮಾರಿನಲ್ಲಿ ಕೆಲಸ ಮುಗಿಸಿ ಮನೆ ಬಾಗಿಲ ಚಿಲಕ ಹಾಕಿಕೊಂಡು ಮಲಗಿದ್ದಾರೆ. ಮರುದಿನ ಬೆಳಗ್ಗೆ 6 ಗಂಟೆಗೆ ಎದ್ದು ನೋಡಿದಾಗ ಖದೀಮರು ಕಿಟಕಿ ಮೂಲಕ ಬಾಗಿಲ ಚಿಲಕ ತೆಗೆದು ಒಳನುಗ್ಗಿ ಮೂರು ಮೊಬೈಲ್, ಲ್ಯಾಪ್‌ಟಾಪ್ ಮತ್ತು 1.40 ಲಕ್ಷ ನಗದು ಕಳವು ಮಾಡಿದ್ದಾರೆ. ಈ ಸಂಬಂಧ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೆರೆದಿದ್ದ ಮನೆ ಹಿಂಬಾಗಿಲಿನಿಂದ ನುಗ್ಗಿ ಚಿನ್ನಾಭರಣ ಕಳವು

ಮೈಸೂರು, ಸೆ. 4– ಮನೆಯ ಹಿಂಬಾಗಿಲಿನಿಂದ ಒಳನುಗ್ಗಿದ ಖದೀಮರು ಚಿನ್ನಾಭರಣ ಕಳವು ಮಾಡಿರುವ ಘಟನೆ ಬೋಗಾದಿಯ ಬ್ರಿಗೇಡ್ ಪಾಮ್ ಗ್ರೋವ್ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದೆ. ಅಲ್ಲಿನ ನಿವಾಸಿ ಬಿ.ವಿ. ಸುಧನ್ವ ಅವರ ಪತ್ನಿ ಲತಾ ಸುಧನ್ವ ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಸೆಪ್ಟೆಂಬರ್ 1ರಂದು ಮೂಗೂರಿನ ರಾಘವೇಂದ್ರ ಮಠಕ್ಕೆ ಹೋಗಿ ರಾತ್ರಿ ಹಿಂತಿರುಗಿದ್ದು, ತಾವು ಧರಿಸಿದ್ದ ಒಟ್ಟು 120 ಗ್ರಾಂ ತೂಕದ ಚಿನ್ನಾಭರಣವನ್ನು ಮನೆಯ ಕೆಳಮಹಡಿಯಲ್ಲಿರುವ ರೂಂನ ಕಬೋರ್ಡ್‌ನಲ್ಲಿ ಇಟ್ಟು ಮೊದಲನೇ ಮಹಡಿಯ ರೂಂನಲ್ಲಿ ಮಲಗಿದ್ದರು. ಸಹಜವಾಗಿಯೇ ಇವರು ತಮ್ಮ ಮನೆಯ ಹಿಂಬಾಗಿಲನ್ನು ಲಾಕ್ ಮಾಡುವುದಿಲ್ಲ. ಖದೀಮರು ಈ ಬಾಗಿಲ ಮೂಲಕ ಒಳನುಗ್ಗಿ ಚಿನ್ನಾಭರಣವನ್ನು ಕಳವು ಮಾಡಿರುವುದು ಸೆಪ್ಟೆಂಬರ್ 2ರಂದು ಬೆಳಗ್ಗೆ ಗೊತ್ತಾಗಿದೆ. ಈ ಸಂಬಂಧ ಲತಾ ಸುಧನ್ವ ಅವರ ಪತಿ ಬಿ.ವಿ. ಸುಧನ್ವ ನೀಡಿದ ದೂರನ್ನು ದಾಖಲಿಸಿ ಕೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಹಣಕಾಸು ವ್ಯವಹಾರದಲ್ಲಿ ನಷ್ಟ; ನಿವೃತ್ತ ಇನ್ಸ್‌ಪೆಕ್ಟರ್ ಆತ್ಮಹತ್ಯೆ

ಮೈಸೂರು, ಸೆ. 4– ಬೆಂಗಳೂರಿನ ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು ಡೆತ್‌ನೋಟ್ ಬರೆದಿಟ್ಟು ಮೈಸೂರಿನ ಲಾಡ್ಜ್‌ನಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬೆಂಗಳೂರು ನಗರ ಪೊಲೀಸ್ ವೈರ್‌ಲೆಸ್ ವಿಭಾಗದ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದು, ಬೆಂಗಳೂರಿನ ಆರ್‌ಎಸ್‌ಆರ್ ಕಾಲೋನಿಯಲ್ಲಿ ವಾಸವಿದ್ದ ಜೆರಾರ್ಡ್ ಕೊರಿಯಾ(67) ಆತ್ಮಹತ್ಯೆಗೆ ಶರಣಾದವರಾಗಿದ್ದು, ಇವರು ಮೈಸೂರಿನ ಬಿಎನ್ ರಸ್ತೆಯಲ್ಲಿರುವ ಅಯೋಧ್ಯ ಲಾಡ್ಜ್‌ನಲ್ಲಿ ಕೊಠಡಿ ಪಡೆದು ವಾಸ್ತವ್ಯವಿದ್ದರು. ಅವರು ತಮ್ಮ ಸಹೋದರ ಹಾಗೂ ಸ್ನೇಹಿತನಿಗೆ ಸೆಪ್ಟೆಂಬರ್ 3ರಂದು ಬೆಳಗ್ಗೆ ಮೆಸೇಜ್ ಮಾಡಿದ್ದಾರೆ. ಅದನ್ನು ಕಂಡು ಗಾಬರಿಯಾದ ಸಹೋದರ ಸರಳ್‌ಕುಮಾರ್ ಅವರು ತಕ್ಷಣವೇ ಅಯೋಧ್ಯ ಲಾಡ್ಜ್‌ಗೆ ಕರೆ ಮಾಡಿ, ತಮ್ಮ ಸಹೋದರ ವಾಸ್ತವ್ಯವಿರುವ ಕೊಠಡಿಯನ್ನು ಚೆಕ್ ಮಾಡುವಂತೆ ಹೇಳಿದರಾದರೂ, ಸರಿಯಾದ ಸ್ಪಂದನೆ ದೊರೆಯದ ಕಾರಣ ಲಷ್ಕರ್ ಠಾಣೆಗೆ ಮಾಹಿತಿ ನೀಡಿದ್ದಾರೆ. ಲಷ್ಕರ್ ಠಾಣೆ ಪೊಲೀಸರು ಲಾಡ್ಜ್‌ಗೆ ತೆರಳಿ ಪರಿಶೀಲಿಸಿದಾಗ ಜೆರಾರ್ಡ್ ಕೊರಿಯಾ ಅವರು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಆತ್ಮಹತ್ಯೆಗೂ ಮುನ್ನ ಜೆರಾರ್ಡ್ ಕೊರಿಯಾ ಡೆತ್‌ನೋಟ್ ಬರೆದಿಟ್ಟಿದ್ದು, ಬೆಂಗಳೂರಿನ ಬಾಬು ಮಹೇಂದ್ರ ಎಂಬಾತನ ಕಿರುಕುಳ ಹಾಗೂ ವಿನಿ ಥಾಮಸ್ ಎಂಬಾಕೆ ಹಣಕಾಸು ವ್ಯವಹಾರದಲ್ಲಿ ನಷ್ಟ ಉಂಟು ಮಾಡಿದ್ದರಿಂದ ತಾವು ಆತ್ಮಹತ್ಯೆಗೆ ಶರಣಾಗುತ್ತಿರುವುದಾಗಿ ತಿಳಿಸಿದ್ದಾರೆ. ಡೆತ್‌ನೋಟ್ ಆಧರಿಸಿ ಸರಳ್‌ಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಲಷ್ಕರ್ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಜಾಹೀರಾತು ಸಂಸ್ಥೆಯ ಜಾಗದಲ್ಲಿದ್ದ 2 ಸಿಸಿ ಕ್ಯಾಮರಾ ಕಳವು

ಮೈಸೂರು, ಸೆ. 4– ಜಾಹೀರಾತು ಸಂಸ್ಥೆಯೊಂದಕ್ಕೆ ಸೇರಿದ ಜಾಗದಲ್ಲಿ ಅಳವಡಿಸಿದ್ದ 2 ಸಿಸಿ ಕ್ಯಾಮರಾ ಹಾಗೂ ಡಿವಿಆರ್ ಕಳವು ಮಾಡಲಾಗಿದೆ. ಮೈಸೂರಿನ ವಿಸ್ಮಯ ಜಾಹೀರಾತು ಸಂಸ್ಥೆಯ ಮಾಲೀಕ ಪ್ರಕಾಶ್ ಚಿಕ್ಕಪಾಳ್ಯ ಸಿಸಿ ಕ್ಯಾಮರಾ ಕಳೆದುಕೊಂಡವರಾಗಿದ್ದು, ಹೆಬ್ಬಾಳದ ಶುಭೋದಿನಿ ಕನ್ವೆನ್ಷನ್ ಹಾಲ್ ಸಮೀಪವಿರುವ ಪ್ಯಾರಮೌಂಟ್ ಅಪಾರ್ಟ್‌ಮೆಂಟ್ ಬಳಿ ಇವರು ಖಾಲಿ ಜಾಗವನ್ನು ಹೊಂದಿದ್ದಾರೆ. ಈ ಜಾಗಕ್ಕೆ ಸುತ್ತಲೂ ಕಾಂಪೌಂಡ್ ನಿರ್ಮಿಸಿದ್ದು, ಒಂದು ರೂಂ ಅನ್ನು ಕಟ್ಟಲಾಗಿದೆ. ಈ ಖಾಲಿ ಜಾಗದಲ್ಲಿ ಜಾಹೀರಾತಿಗೆ ಬಳಸುವ ಪರಿಕರಗಳನ್ನು ಇಟ್ಟಿದ್ದು, ಅದರ ಸುರಕ್ಷತೆಗಾಗಿ 8 ಸಿಸಿ ಕ್ಯಾಮರಾಗಳನ್ನು ಅಳವಡಿಸಿ, ಅದರ ಡಿವಿಆರ್ ಅನ್ನು ರೂಂನಲ್ಲಿ ಇಡಲಾಗಿತ್ತು.

ಆಗಸ್ಟ್ 26ರಂದು ಸಂಜೆ ಇವರ ಸಂಸ್ಥೆಯಲ್ಲಿ ಕೆಲಸ ಮಾಡುವ ಮಂಜು ಎಂಬಾತ ರೂಂ ಹಾಗೂ ಗೇಟ್ ಬೀಗ ಹಾಕಿಕೊಂಡು ಕೀಯನ್ನು ಇವರಿಗೆ ಕೊಟ್ಟು ಹೋಗಿದ್ದ. ನಂತರ ಸೆಪ್ಟೆಂಬರ್ 2ರಂದು ಇವರ ಸಂಸ್ಥೆಯಲ್ಲೇ ಕೆಲಸ ಮಾಡುವ ಸುನಿಲ್ ಎಂಬಾತ ಸ್ಥಳಕ್ಕೆ ಹೋದಾಗ 2 ಸಿಸಿ ಕ್ಯಾಮರಾ ಮತ್ತು ಡಿವಿಆರ್ ಕಳವಾಗಿರುವುದು ಗೊತ್ತಾಗಿದೆ. ಖದೀಮರು ರೂಂ ಅಥವಾ ಗೇಟ್‌ನ ಬೀಗಗಳನ್ನು ಮುರಿದಿಲ್ಲ ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಪಾರ್ಟ್‌ಟೈಮ್ ಜಾಬ್ ಹೆಸರಲ್ಲಿ ಇಂಜಿನಿಯರ್‌ಗೆ 16.14 ಲಕ್ಷ ವಂಚನೆ


ಮೈಸೂರು, ಸೆ. 4– ಪಾರ್ಟ್‌ಟೈಮ್ ಜಾಬ್ ಹೆಸರಿನಲ್ಲಿ ಇಂಜಿನಿಯರ್ ಒಬ್ಬರಿಗೆ ಆನ್‌ಲೈನ್ ಮೂಲಕ 16.14 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ನಿವೇದಿತಾನಗರದ ಇಂಜಿನಿಯರ್ ಆರ್. ಸುನಿಲ್ ಕುಮಾರ್(34) ವಂಚನೆಗೊಳಗಾದವರಾಗಿದ್ದು, ಇವರಿಗೆ 9855078860 ಸಂಖ್ಯೆಯಿಂದ ವಾಟ್ಸಾಪ್ ಮೂಲಕ ಪಾರ್ಟ್‌ಟೈಮ್ ಜಾಬ್ ಬಗ್ಗೆ ತಿಳಿಸಲಾಗಿದೆ. ಅದಕ್ಕೆ ಅವರು ಸ್ಪಂದಿಸಿದಾಗ ಆರಂಭದಲ್ಲಿ ಟೆಲಿಗ್ರಾಂ ಆ್ಯಪ್ ಮೂಲಕ ಕೆಲವು ಟಾಸ್ಕ್‌ಗಳನ್ನು ನೀಡಿದ್ದು, ಅದನ್ನು ಪೂರೈಸಿದಾಗ ಅಲ್ಪ ಪ್ರಮಾಣದ ಲಾಭಾಂಶವನ್ನು ಇವರ ಖಾತೆಗೆ ಜಮೆ ಮಾಡಲಾಗಿದೆ. ನಂತರ ಹಂತ ಹಂತವಾಗಿ 16,14,087 ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಸಿಎಸ್‌ಟಿಆರ್‌ಐನಲ್ಲಿ

ರೇಷ್ಮೆ ಕೃಷಿ, ಉದ್ಯಮ ಕುರಿತ ಅಂತರರಾಷ್ಟ್ರೀಯ ತರಬೇತಿ ಆರಂಭ

ಒಂದು ತಿಂಗಳ ಶಿಬಿರದಲ್ಲಿ 30 ಮಂದಿ ವಿದೇಶಿಗರು ಭಾಗಿ



ಮೈಸೂರು, ಸೆ. 4(ಆರ್‌ಕೆ)– ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ಕೇಂದ್ರೀಯ ರೇಷ್ಮೆ ಕೃಷಿ ಸಂಶೋಧನಾ ಮತ್ತು ತರಬೇತಿ ಸಂಸ್ಥೆ (ಸಿಎಸ್‌ಟಿಆರ್‌ಐ)ಯಲ್ಲಿ ರೇಷ್ಮೆ ಕೃಷಿ ಮತ್ತು ಉದ್ಯಮ ಕುರಿತ ಒಂದು ತಿಂಗಳ ತರಬೇತಿ ಶಿಬಿರ ಇಂದಿನಿಂದ ಆರಂಭವಾಯಿತು.

ಸಂಸ್ಥೆಯ ಗ್ರಂಥಾಲಯ ಕಟ್ಟಡದ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸೆಂಟ್ರಲ್ ಸಿಲ್ಕ್ ಬೋರ್ಡ್ ಸದಸ್ಯ ಕಾರ್ಯದರ್ಶಿ ಡಾ. ಸಿ. ಮೀನಾಕ್ಷಿ ತರಬೇತಿ ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭ 30 ಮಂದಿ ವಿದೇಶಿ ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಸಿಎಸ್‌ಟಿಆರ್‌ಐ ಹಲವು ವರ್ಷಗಳಿಂದ ರೇಷ್ಮೆ ಬೇಸಾಯ, ಉತ್ಪಾದನಾ, ಉದ್ಯಮ ಹಾಗೂ ಮಾರುಕಟ್ಟೆ ಕುರಿತು ಸಂಶೋಧನೆ ಮತ್ತು ತರಬೇತಿ ನೀಡುತ್ತಾ ಬಂದಿದ್ದು, ಸ್ವದೇಶಿಗರಷ್ಟೇ ಅಲ್ಲದೇ ವಿಶ್ವದ ಹಲವು ದೇಶಗಳಲ್ಲೂ ಈ ಕೃಷಿಯನ್ನು ಪರಿಚಯಿಸುತ್ತಿದೆ ಎಂದರು.

ಮೈಸೂರು ಸಂಸ್ಕೃತಿ, ಕಲೆ, ಸಂಗೀತ, ಯೋಗ, ಪ್ರವಾಸೋದ್ಯಮ, ಆರೋಗ್ಯ ಶಿಕ್ಷಣಕ್ಕೆ ಖ್ಯಾತಿಯಾಗಿದ್ದು, ಇಲ್ಲಿನ ರಾಜ ಮಹಾರಾಜರು ರೇಷ್ಮೆ ಕೃಷಿ ಮತ್ತು ಉದ್ಯಮಕ್ಕೆ ಪ್ರೋತ್ಸಾಹ ನೀಡಿದರು. ಇಲ್ಲಿನ ಮಲ್ಬರಿ ತಳಿಯು ವಿಶ್ವ ಖ್ಯಾತಿಯಾಗಿದ್ದು, ಲಕ್ಷಾಂತರ ರೈತರು ಈ ಉದ್ಯಮವನ್ನು ಅವಲಂಬಿಸಿ ಆರ್ಥಿಕವಾಗಿ ಸಬಲರಾಗಿದ್ದಾರೆ ಎಂದು ಅವರು ತಿಳಿಸಿದರು.

ಸಿಎಸ್‌ಟಿಆರ್‌ಐ ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್ ರೇಷ್ಮೆ ತಳಿ, ಬೆಳೆ, ಉತ್ಪಾದನೆ, ಸಂರಕ್ಷಣೆ ಮಾರುಕಟ್ಟೆ, ರಫ್ತು ಮತ್ತು ಆಮದು ಕುರಿತಂತೆ ರೈತರಿಗೆ ತರಬೇತಿ, ಪ್ರೋತ್ಸಾಹ ನೀಡುತ್ತಿದ್ದು, ಆಸಕ್ತ ವಿದೇಶಿಗರಿಗೂ ಪ್ರಾಯೋಗಿಕ ತರಬೇತಿ ನೀಡಿ ಪ್ರಪಂಚದಾದ್ಯಂತ ಈ ಬೆಳೆಯನ್ನು ಪರಿಚಯಿಸುತ್ತಿವೆ. ಒಂದು ತಿಂಗಳ ಕಾಲ ನಡೆಯುವ ತರಬೇತಿಯಲ್ಲಿ ರೇಷ್ಮೆ ಕೃಷಿ ಬಗ್ಗೆ ಜ್ಞಾನ ಪಡೆದು ನಿಮ್ಮ ನಿಮ್ಮ ದೇಶದ ನಿಮ್ಮ ಸುತ್ತಲಿನ ಜಮೀನಿನಲ್ಲಿ ರೇಷ್ಮೆ ಬೆಳೆದು ಉದ್ಯಮ ಮಾಡುವಂತೆಯೂ ಡಾ. ಮೀನಾಕ್ಷಿ ವಿದೇಶಿ ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಮಲ್ಬರಿ ತಳಿಯನ್ನು ಬೆಳೆದು ಮಾರುಕಟ್ಟೆ ಮಾಡಿ ಆರ್ಥಿಕ ಸ್ವಾವಲಂಬನೆ ಪಡೆಯುವ ಮೂಲಕ ಈ ಉದ್ಯಮದ ಮಹತ್ವ ಅನುಕೂಲದ ಬಗ್ಗೆ ವಿದೇಶಗಳಲ್ಲೂ ಪ್ರಚುರಪಡಿಸುವಂತೆ ತಿಳಿಸಿದ ಅವರು, ಆ ಮೂಲಕ ಅಂತರರಾಷ್ಟ್ರೀಯ ಬಾಂಧವ್ಯವನ್ನೂ ಬೆಸೆಯಬೇಕೆಂದು ಇದೇ ಸಂದರ್ಭ ಮನವಿ ಮಾಡಿದರು.

ದಿ ಇಂಡಿಯನ್ ಟೆಕ್ನಿಕಲ್ ಅಂಡ್ ಎಕನಾಮಿಕ್ ಕೋ–ಆಪರೇಷನ್ (ಐಟಿಇಸಿ) ಪರಿಕಲ್ಪನೆಯಲ್ಲಿ ಆರಂಭವಾಗಿರುವ ತರಬೇತಿಯಲ್ಲಿ ಕಮೆರೂನ್, ಇಥಿಯೋಪಿಯಾ, ಘಾನ, ಇರಾನ್, ಕೀನ್ಯಾ, ಮಯನ್ಮಾರ್, ನಿಗೇರಿಯಾ, ಫಿಲಿಫೈನ್ಸ್, ಉಗಾಂಡ, ವಿಯೇಟ್ನಾಂ, ಜಿಂಬಾಬ್ವೆ, ಲಾವೋಸ್, ಥೈಲ್ಯಾಂಡ್ ಹಾಗೂ ಬಾಂಗ್ಲಾದೇಶ ರಾಷ್ಟ್ರಗಳಿಂದ 30 ಮಂದಿ ಪಾಲ್ಗೊಂಡಿದ್ದಾರೆ.

ಟೆಕ್ನಾಲಜಿ ವರ್ಗಾವಣೆ ಪೋಸ್ಟ್ ಕಕೂನ್ ಟೆಕ್ನಾಲಜಿಯನ್ನು ಇತರ ಅಭಿವೃದ್ಧಿಗೊಂಡಿರುವ ರಾಷ್ಟ್ರಗಳಿಗೆ ಒದಗಿಸುವುದು ತರಬೇತಿ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಸಿಎಸ್‌ಟಿಆರ್‌ಐ ನಿರ್ದೇಶಕ ಡಾ. ಗಾಂಧಿ ದೋಸ್, ಭಾರತೀಯ ರೇಷ್ಮೆ ಕೃಷಿ ಆಯೋಗ (ಐಎಸ್‌ಸಿ)ದ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆರ್. ದಿಲೀಪ್ ಕುಮಾರ್, ಸಿಎಸ್‌ಟಿಆರ್‌ಐ ವಿಜ್ಞಾನಿಗಳಾದ ಡಾ. ಆರ್. ಮೀನಲ್, ಡಾ. ಕೆ.ಬಿ. ಚಂದ್ರಶೇಖರ್, ಡಾ. ಗೀತಾ, ಐಎಸ್‌ಸಿ ಕೋ–ಆರ್ಡಿನೇಟರ್ ಪದ್ಮನಾಭ ನಾಯಕ ಹಾಗೂ ಇತರರು ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಇದೇ ವೇಳೆ ಸಿಎಸ್‌ಟಿಆರ್‌ಐ ಹೊರತಂದಿರುವ "ಟೆಕ್ನಾಲಜಿ ಕಂಪೆಂಡಿಯಮ್ ಆಫ್ ಮಲ್ಬರಿ ಸಿರಿಕಲ್ಚರ್" ಪುಸ್ತಕವನ್ನು ಡಿಜಿಟಲ್ ಮೂಲಕ ಬಿಡುಗಡೆ ಮಾಡಲಾಯಿತಲ್ಲದೇ, ತರಬೇತಿಗೆ ಹಾಜರಾಗಿರುವ ವಿದೇಶಿಗರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಶಿಬಿರಾರ್ಥಿಗಳಿಗೆ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ.

ಸನಾತನ ಧರ್ಮ ಮಲೇರಿಯಾ, ಡೆಂಗ್ಯು ಇದ್ದಂತೆ ಹೇಳಿಕೆಗೆ ಪೇಜಾವರ ಶ್ರೀಗಳ ಖಂಡನೆ

ಮೈಸೂರು, ಸೆ. 4– ಸನಾತನ ಧರ್ಮ ಮಲೇರಿಯಾ, ಡೆಂಗ್ಯು ಇದ್ದಂತೆ, ಅದನ್ನು ಬೇರು ಸಮೇತ ನಿರ್ಮೂಲನೆ ಮಾಡಬೇಕು ಎಂದು ತಮಿಳುನಾಡಿನ ಮುಖ್ಯಮಂತ್ರಿ ಸ್ಟಾಲಿನ್ ಪುತ್ರ ಸಚಿವ ಉದಯನಿಧಿ ಸ್ಟಾಲಿನ್ ಹೇಳಿಕೆಯನ್ನು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಖಂಡಿಸಿದ್ದಾರೆ.



ಮೈಸೂರಿನಲ್ಲಿ ಚಾತುರ್ಮಾಸ್ಯ ವ್ರತದಲ್ಲಿರುವ ಶ್ರೀಗಳು ಹೇಳಿಕೆಯನ್ನು ನೀಡಿದ್ದು, ಒಂದು ರಾಜ್ಯದ ಮಂತ್ರಿಯಾಗಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಉದಯನಿಧಿ ಸ್ಟಾಲಿನ್ ಅವರು ಸಮಾಜದಲ್ಲಿ ಇಂತಹ ವಿಷ ಬೀಜವನ್ನು ಬಿತ್ತುವುದು ಸರಿಯಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ಸನಾತನ' ಎಂದರೆ ಸದಾ ಕಾಲವೂ ಇರುವಂತಹದ್ದು ಎಂದರ್ಥ. ಎಲ್ಲರೂ ಸುಖವಾಗಿ ಬದುಕಲು ಅಳವಡಿಸಿಕೊಳ್ಳುವ ಸೂತ್ರವೇ ಧರ್ಮ. ನಮ್ಮ ಸುಖದಿಂದ ಅಕ್ಕಪಕ್ಕದವರಿಗೆ ದುಃಖವಾಗಬಾರದು. ಬದಲಾಗಿ ನಮ್ಮ ಸುಖದಿಂದ ಅಕ್ಕಪಕ್ಕದವರಿಗೂ ಸಂತೋಷ ಲಭಿಸಬೇಕು ಎನ್ನುತ್ತದೆ ಸನಾತನ ಧರ್ಮ. ಆದ್ದರಿಂದ ಅಂತಹ ಧರ್ಮವನ್ನು ನಿರ್ಮೂಲನೆ ಮಾಡಬೇಕು ಎನ್ನುವ ಮನೋಪ್ರವೃತ್ತಿ ಸರಿಯಲ್ಲ. ಅದನ್ನು ಖಂಡಿಸುತ್ತೇವೆ ಎಂದು ಶ್ರೀಗಳು ಹೇಳಿದ್ದಾರೆ.

ಟಿ.ಬಿ.ಕಾವೇರಮ್ಮ ಅವರಿಗೆ ಪ್ರಶಸ್ತಿ

ಕಳೆದ 20 ವರ್ಷಗಳಿಂದ ಪ್ರಿ–ಸ್ಕೂಲ್ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಾ ಪ್ರಸ್ತುತ ಕುವೆಂಪುನಗರದ ಬಿಗಿನರ್ಸ್ ಬೆಂಚ್ ಕಿಡ್ಸ್ ಪ್ರಿ–ಸ್ಕೂಲ್ ಮತ್ತು ಲಕ್ಷ್ಮೀಪುರಂನಲ್ಲಿ ಕಿಯಾರ ಕಿಡ್ಸ್ ಪ್ರಿ–ಸ್ಕೂಲ್ ನಡೆಸುತ್ತಿರುವ ಟಿ.ಬಿ.ಕಾವೇರಮ್ಮ ಅವರಿಗೆ ಶನಿವಾರ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಎಜುಕೇಷನ್ ಅವಾರ್ಡ್–2023 ಕಾರ್ಯಕ್ರಮದಲ್ಲಿ ಉತ್ತಮ ಮೆಂಟರ್ ಡೇ–ಕೇರ್ ಮತ್ತು ಮಾಂಟೆಸ್ಸರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಸಂಸ್ಕೃತ ಭಾಷೆ ಭಾರತದ ಆತ್ಮದಂತೆ

ಸಂಸ್ಕೃತ ಭಾರತೀ ಸಂಸ್ಥೆಯ ಅಖಿಲ ಭಾರತ ಕುಟುಂಬ ಶಿಕ್ಷಣ ಸಂಯೋಜಕ ಪ್ರೊ.ಟಿ.ಎಸ್.ಪ್ರಭಾಕರ ಅಭಿಮತ



ಮೈಸೂರು, ಸೆ. 4– ಸಂಸ್ಕೃತ ಭಾಷೆ ಭಾರತದ ಆತ್ಮದಂತೆ. ಅದರಲ್ಲಿರುವ ಮಹಾಕಾವ್ಯ, ವಿಜ್ಞಾನ, ಚಿಂತನಶೀಲತೆ ಇತ್ಯಾದಿಗಳನ್ನು ಪ್ರತಿಯೊಬ್ಬ ಭಾರತೀಯನೂ ತಿಳಿಯುವಂತಾಗಬೇಕೆಂದು ಸಂಸ್ಕೃತ ಭಾರತೀ ಸಂಸ್ಥೆಯ ಅಖಿಲ ಭಾರತ ಕುಟುಂಬ ಶಿಕ್ಷಣ ಸಂಯೋಜಕ ಪ್ರೊ. ಟಿ.ಎಸ್.ಪ್ರಭಾಕರ ತಿಳಿಸಿದರು.

ನಗರದ ಗೋಪಾಲಸ್ವಾಮಿ ಶಾಲೆಗಳ ಆವರಣದಲ್ಲಿ ಸಂಸ್ಕೃತ ಭಾರತೀ ಹಾಗೂ ವಿದ್ವಾನ್ ಟಿ.ನಾರಾಯಣ ಶಾಸ್ತ್ರೀ ಪ್ರತಿಷ್ಠಾನವು ಸಂಯುಕ್ತವಾಗಿ ವ್ಯವಸ್ಥೆ ಮಾಡಿದ್ದ ಶ್ರವಣ ಸಂಸ್ಕೃತ ಸಪ್ತಾಹದ ದಿಕ್ಸೂಚಿ ಭಾಷಣವನ್ನು ಮಾಡಿದರು.

ಮುಂದುವರೆದು ಅವರು, ಸಂಸ್ಕೃತದ ಬಗ್ಗೆ ಇರುವ ತಪ್ಪು ತಿಳಿವಳಿಕೆ ಈಗ ದೂರವಾಗುತ್ತಿದೆ. ಸಂಸ್ಕೃತವು ಒಂದು ವೈಜ್ಞಾನಿಕ ಚಿರನೂತನ, ಸದಾ ತಾರುಣ್ಯದ ಭಾಷೆಯಾಗಿದೆ. ಅವಶ್ಯಕತೆಗೆ ತಕ್ಕಂತೆ ಸಾವಿರಾರು ಹೊಸ ಪದಗಳ ಸೃಷ್ಟಿಯಾಗುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂದು ಸಂಸ್ಕೃತವು ವಿಶ್ವಕ್ಕೆ ನೀಡಿರುವ ಕೊಡುಗೆಯ ಬಗ್ಗೆ ಭಾರತೀಯರು ಹೆಮ್ಮೆಪಡುತ್ತಿದ್ದಾರೆ. ಪ್ರಾಥಮಿಕ ಶಾಲೆಯ ಹಂತದಲ್ಲೇ ವಿದ್ಯಾರ್ಥಿಗಳು ಸಂಸ್ಕೃತವನ್ನು ಕಲಿಯುವಂತಾದರೆ, ಅದರಿಂದ ಪ್ರಾಂತೀಯ ಭಾಷೆಗಳಿಗೆ ಪೂರಕವಾಗುತ್ತದೆ ಎಂದು ತಿಳಿಸಿದರು.


ಮಹಾರಾಜ ಸರ್ಕಾರಿ ಕಾಲೇಜಿನ ಅಧ್ಯಾಪಕ ಡಾ.ಎಂ.ವಿ. ವಿಶ್ವನಾಥ್‌ರವರು ಕಾಳಿದಾಸನ ಕಾವ್ಯಗಳ ಬಗ್ಗೆ ಮಾತನಾಡಿ, ಕಾಳಿದಾಸನು ಪ್ರಕೃತಿ ಕವಿ, ಪ್ರಬುದ್ಧ ಕವಿ, ರಸಕವಿಯೆಂಬುದನ್ನು ಉಲ್ಲೇಖಗಳ ಮೂಲಕ ತಿಳಿಸಿದರು. ಆತನು ಪ್ರತಿಪಾದಿಸಿರುವ ಜೀವನ ಮೌಲ್ಯಗಳು ಎಲ್ಲಾ ಕಾಲಕ್ಕೂ ಅನ್ವಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್‌ರವರು ಸಂಸ್ಕೃತದ ವಿದ್ವಾಂಸರಾಗಿದ್ದುದಲ್ಲದೆ, ಸಂಸ್ಕೃತ ಭಾಷೆಯನ್ನು ಭಾರತದ ಸಂಪರ್ಕ ಭಾಷೆಯನ್ನಾಗಿಸಬೇಕೆಂದು ರಾಜ್ಯಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸುವ ಇಚ್ಛೆ ಹೊಂದಿದ್ದರು.

ಮೈಸೂರು ವಿಶ್ವವಿದ್ಯಾನಿಲಯದ ಸಂಸ್ಕೃತ ಉಪನ್ಯಾಸಕ ಡಾ.ಸುರೇಶ ಸ್ವಾಗತಿಸಿದರು. ಸಂಸ್ಕೃತ ಭಾರತಿ ಸಂಸ್ಥೆಯ ಮೈಸೂರು ವಿಭಾಗದ ಸಂಚಾಲಕ ಗಣೇಶ್‌ರವರು ವಿದ್ವಾಂಸರನ್ನು ಗೌರವಿಸಿದರು. ಇದಕ್ಕೂ ಮುನ್ನ ಲಕ್ಷ್ಮೀನಾರಾಯಣ ಶರ್ಮ ಹಾಗೂ ವೃಂದದವರು ಋಗ್ವೇದದ ಮಂತ್ರಗಳನ್ನು ಪಠಿಸಿದರು.

ಇಂದು ಶ್ರೀ ಸಿದ್ದೇಶ್ವರ ಸ್ವಾಮಿಗಳ ನೆನಪಿನ ಉಪನ್ಯಾಸ

ಮೈಸೂರು, ಸೆ. 4– ಮುದ್ದುರಾಮ ಪ್ರತಿಷ್ಠಾನದ ವತಿಯಿಂದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರ ನೆನಪಿನ ಉಪನ್ಯಾಸವನ್ನು ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನಾಳೆ (ಸೆ. 5) ಸಂಜೆ 5 ಗಂಟೆಗೆ ಏರ್ಪಡಿಸಲಾಗಿದೆ. ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಮುಕ್ತಿದಾನಂದಜಿ ಮಹಾರಾಜ್ ದಿವ್ಯ ಸಾನ್ನಿಧ್ಯದಲ್ಲಿ ಡಾ.ವೀಣಾ ಬನ್ನಂಜೆ ಈ ನೆನಪಿನ ಉಪನ್ಯಾಸ ನೀಡುವರು. ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಪಿ.ಪ್ರಕಾಶ್ ಆಶಯ ನುಡಿ ನೀಡಲಿದ್ದಾರೆ. ಶಿಕ್ಷಕರ ದಿನಾಚರಣೆಯ ಅಂಗವಾಗಿ ಮೈಸೂರು ಗ್ರಾಮಾಂತರ ಸರ್ಕಾರಿ ಪ್ರಾಥಮಿಕ ಶಾಲೆಯ ಐವರು ಶಿಕ್ಷಕರನ್ನು ಹಾಗೂ 1000 ಮುದ್ದುರಾಮ ಚಿತ್ರಚೌಪದಿಗಳ ಸಂಯೋಜಕ ವಿಶ್ವನಾಥ್ ಬಳುವನೇರಲು ಅವರನ್ನು ಸನ್ಮಾನಿಸಲಾಗುವುದು.



ಡಿಸಿಎಂ ಡಿಕೆ ಶಿವಕುಮಾರ್ ಭೇಟಿ ಮಾಡಿದ ತೇಜಸ್ವಿನಿ ಅನಂತಕುಮಾರ್

ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸ

ಬೆಂಗಳೂರು: ಬಿಜೆಪಿ ರಾಜ್ಯ ಉಪಾಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಸೋಮವಾರ ಮತ್ತೆ ಭೇಟಿ ಮಾಡಿ ಚರ್ಚೆ ನಡೆಸಿರುವುದು ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.



"ಕುಮಾರ ಕೃಪಾ' ಅತಿಥಿ ಗೃಹದಲ್ಲಿ ಶಿವಕುಮಾರ್ ಅವರನ್ನು ಭೇಟಿ ಮಾಡಿದ ತೇಜಸ್ವಿನಿ, ಸುಮಾರು 20 ನಿಮಿಷ ಚರ್ಚೆ ನಡೆಸಿದರು. ಆದರೆ ಮಾತುಕತೆ ವಿವರ ಲಭ್ಯವಾಗಿಲ್ಲ. ಎರಡು ತಿಂಗಳ ಹಿಂದೆಯೂ ತೇಜಸ್ವಿನಿ ಅನಂತ ಕುಮಾರ್ ಹಾಗೂ ಶಿವಕುಮಾರ್ ಭೇಟಿ ಮಾಡಿ, ಚರ್ಚೆ ನಡೆಸಿದ್ದರು. ಕಾಂಗ್ರೆಸ್‌ನಿಂದ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಅವರು ಕಣಕ್ಕಿಳಿಯಲಿದ್ದಾರೆ ಎಂಬ ಬಗ್ಗೆಯೂ ಆಗ ವ್ಯಾಖ್ಯಾನಿಸಲಾಗಿತ್ತು.

ಬಿಜೆಪಿ ಮೂಲಗಳ ಪ್ರಕಾರ ಈ ಭೇಟಿ ಹಿಂದೆ ಯಾವುದೇ ರಾಜಕೀಯ ಇಲ್ಲ. ತೇಜಸ್ವಿನಿ ನಡೆಸುವ ಅದಮ್ಯ ಚೇತನ ಟ್ರಸ್ಟ್ ಈ ಹಿಂದೆ ಇಂದಿರಾ ಕ್ಯಾಂಟೀನ್‌ಗೆ ಪೂರೈಕೆ ಮಾಡಿದ್ದ ಊಟದ ಹಣದ ಬಾಕಿಯನ್ನು ಸರಕಾರ ಇನ್ನೂ ನೀಡಿಲ್ಲ. ಈ ಹಿನ್ನೆಲೆಯಲ್ಲಿ ಅವರು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಶಿವಕುಮಾರ್ ಅವರಿಗೆ ದಾಖಲೆ ಸಮೇತ ವಿವರಣೆ ನೀಡಿದ್ದಾರೆ. ಜತೆಗೆ ಇದೇ ತಿಂಗಳು ನಡೆಯುವ ಅನಂತ ಕುಮಾರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಆಯೋಜಿಸಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೂ ಆಹ್ವಾನ ನೀಡಿದರು ಎನ್ನಲಾಗಿದೆ.

ಸಕ್ರಿಯ ರಾಜಕಾರಣದಲ್ಲಿ ತೇಜಸ್ವಿನಿ ಆಸಕ್ತಿ ಹೊಂದಿದ್ದರೂ ಅವಕಾಶ ಸಿಕ್ಕಿಲ್ಲ. ಈ ಸಂಬಂಧ ಪಕ್ಷದ ಕೆಲವು ಮುಖಂಡರ ಜತೆ ಅವರು ಭಿನ್ನಾಭಿಪ್ರಾಯ ಹೊಂದಿದ್ದಾರೆ. ಇದೆಲ್ಲದರ ಮಧ್ಯೆಯೇ ಕೆಲ ದಿನಗಳ ಹಿಂದೆ ಪ್ರಧಾನಿ ಮೋದಿಯವರನ್ನು ಭೇಟಿ ಮಾಡಿದ್ದರು. ಕೆಲವು ದಿನಗಳ ಹಿಂದಷ್ಟೇ ದೇಶದ ಪ್ರತಿಷ್ಠಿತ ಭಾರತೀಯ ತಾಂತ್ರಿಕ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ (ಐಐಇಎಸ್‌ಟಿ) ಅಧ್ಯಕ್ಷರನ್ನಾಗಿ ಅವರನ್ನು ನೇಮಕ ಮಾಡಲಾಗಿತ್ತು.

ಕರ್ನಾಟಕ ಸುವರ್ಣ ಸಂಭ್ರಮ ಆಚರಣೆಗೆ ಸಾಹಿತಿಗಳು, ಕನ್ನಡ ಹೋರಾಟಗಾರರ ಸಲಹೆ

ನಾನು ಕನ್ನಡ ಮತ್ತು ಸಂಸ್ಕೃತಿ ಸಚಿವನೇ ಹೊರತು, ಕೆರೆ ಸಚಿವನಲ್ಲ; ತಂಗಡಗಿ ಸ್ಪಷ್ಟನೆ



ಮೈಸೂರು, ಸೆ.4(ಬಿಎಲ್‌ಯು)– ಕರ್ನಾಟಕ ಸುವರ್ಣ ಸಂಭ್ರಮದ ಆಚರಣೆ ಕುರಿತಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಮೈಸೂರಿನಲ್ಲಿ ಇಂದು ಸಾಹಿತಿಗಳು, ಕನ್ನಡಪರ ಹೋರಾಟಗಾರರಿಂದ ಸಲಹೆ ಪಡೆದರು.

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ನಡೆದ ಸಭೆಯಲ್ಲಿ ಮೈಸೂರು ಕಂದಾಯ ವಿಭಾಗದ ಎಂಟು ಜಿಲ್ಲೆಯ ಸಾಹಿತಿಗಳು, ಕನ್ನಡಪರ ಹೋರಾಟಗಾರರು ಭಾಗಿಯಾಗಿ ಸಚಿವರಿಗೆ ಹಲವು ಸಲಹೆಗಳನ್ನು ನೀಡಿದರು.

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ ಸುವರ್ಣ ಕರ್ನಾಟಕ ಭವನ ನಿರ್ಮಾಣ ಮಾಡಬೇಕು ಎಂದು ಸಾಹಿತಿ ಡಾ.ಲತಾ ರಾಜಶೇಖರ್ ಮನವಿ ಮಾಡಿದರು. ಕರ್ನಾಟಕ ಏಕೀಕರಣಕ್ಕೆ ಕಾರಣರಾದ ದೇವರಾಜ ಅರಸ್ ಅವರ ಪ್ರತಿಮೆಯನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಸ್ಥಾಪನೆ ಮಾಡಬೇಕು ಎಂದು ಡಾ. ಎಂಜಿಆರ್ ಅರಸ್ ಆಗ್ರಹಿಸಿದರು.

ಕರ್ನಾಟಕ ಸುವರ್ಣ ಸಂಭ್ರಮದ ನೆನಪಾಗಿ ರಾಷ್ಟ್ರ ರಾಜಧಾನಿ ದೆಹಲಿಯ ಯಾವುದಾದರೊಂದು ಪ್ರಮುಖ ರಸ್ತೆಗೆ ಕನ್ನಡ ಸಾಹಿತಿಗಳ ಹೆಸರನ್ನು ನಾಮಕರಣ ಮಾಡುವಂತೆ ರಂಗಾಯಣದ ಮಾಜಿ ನಿರ್ದೇಶಕ ಬಸವಲಿಂಗಯ್ಯ ಒತ್ತಾಯಿಸಿದರು. ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಎನ್‌ಟಿಎಂಎಸ್ ಶಾಲೆಯನ್ನು ಈಗಾಗಲೇ ಮುಚ್ಚಲಾಗಿದೆ. ಹೀಗೆ ಕನ್ನಡ ಶಾಲೆಗಳು ಮುಚ್ಚದಂತೆ ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ಕಾವಲು ಪಡೆಯ ಅಧ್ಯಕ್ಷ ಮೋಹನ್ ಕುಮಾರ್ ಗೌಡ ಮನವಿ ಮಾಡಿದರು.

ಕನ್ನಡ ಪುಸ್ತಕ ಮೇಳಗಳನ್ನು ಹೆಚ್ಚಾಗಿ ಎಲ್ಲಾ ಕಡೆ ನಡೆಸಬೇಕು ಎಂದು ಚಿಕ್ಕಮಗಳೂರಿನ ಸತೀಶ್ ಆಗ್ರಹಿಸಿದರು.

ಬಹಳಷ್ಟು ಕನ್ನಡ ಹೋರಾಟಗಾರರು ಸಲಹೆ ನೀಡುವ ಬದಲು ವಿಷಯಾಂತರ ಮಾಡಿ ಮಾತನಾಡಿದರು. ಶಿವರಾಜ್ ತಂಗಡಗಿ ಇದಕ್ಕೆ ಎಷ್ಟೆ ಕಡಿವಾಣ ಹಾಕಿದರೂ ಯಾರೂ ಕೇಳುವಂತಿರಲಿಲ್ಲ. ಕೆಲವರಂತೂ ಸಲಹೆ ನೀಡುವ ಬದಲು ಜಾನಪದ ಹಾಡುಗಳನ್ನು ಹಾಡಿ ರಂಜಿಸಿದರು.

ಕಾವೇರಿ ಜಲಾನಯನ ಪ್ರದೇಶದ ಕೆರೆಗಳ ಹೂಳೆತ್ತಬೇಕು ಎಂದು ಕನ್ನಡಪರ ಸಂಘಟನೆಯ ಹೋರಾಟಗಾರ ಮನವಿ ಮಾಡಿದಾಗ, ನಾನು ಕನ್ನಡ ಮತ್ತು ಸಂಸ್ಕೃತಿ ಸಚಿವನೇ ಹೊರತು, ಕೆರೆ ಸಚಿವನಲ್ಲ ಎಂದು ಶಿವರಾಜ್ ತಂಗಡಗಿ ಕೋಪೋದ್ರಿಕ್ತರಾಗಿ ನುಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಬಗ್ಗೆ ಜಿ.ಟಿ.ದೇವೇಗೌಡರ ಟೀಕೆ ಸರಿಯಲ್ಲ

ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಪ್ರತಿಕ್ರಿಯೆ

ಮೈಸೂರು, ಸೆ.4(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಬಗ್ಗೆ ಶಾಸಕ ಜಿ.ಟಿ.ದೇವೇಗೌಡರು ವಿನಾಕಾರಣ ಟೀಕೆ ಮಾಡುವುದು ಸರಿಯಲ್ಲ ಎಂದು ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಹೇಳಿದ್ದಾರೆ.

ಮೈಸೂರಿನ ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋನಿಯಾಗಾಂಧಿಗೆ ಭಾರತೀಯ ಪೌರತ್ವ ನೀಡಬಾರದು ಎಂದು ಸಿದ್ದರಾಮಯ್ಯ ಹೇಳಿದ್ದರು ಎಂಬ ಆರೋಪ ನಿರಾಧಾರ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಸರ್ಕಾರದಲ್ಲಿ ಸಚಿವರಾಗಿದ್ದ ಜಿ.ಟಿ.ದೇವೇಗೌಡರು ಎಲ್ಲಾ ಅಧಿಕಾರ ಅನುಭವಿಸಿ ಜೆಡಿಎಸ್‌ಗೆ ಕೈಕೊಟ್ಟು ಬಿಜೆಪಿ ಸೇರಿದರು. ಹೆಚ್.ಡಿ. ದೇವೇಗೌಡರ ಕುಟುಂಬದ ಬಗ್ಗೆ ಟೀಕೆ ಮಾಡಿಕೊಂಡು ಓಡಾಡುತ್ತಿದ್ದ ಜಿ.ಟಿ. ದೇವೇಗೌಡರು ಮತ್ತೆ ಅವರನ್ನೇ ಓಲೈಸಿಕೊಂಡು ಜೆಡಿಎಸ್‌ಗೆ ಬಂದರು ಎಂದು ಬಸವೇಗೌಡರು ಟೀಕಿಸಿದರು.



ವರುಣದಿಂದ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಬಂದು ಸ್ಪರ್ಧೆ ಮಾಡಿದ ಕಾರಣ ಸಿದ್ದರಾಮಯ್ಯಗೆ ಕಳೆದ ಚುನಾವಣೆಯಲ್ಲಿ ಸೋಲಾಯಿತು. ಆದರೆ ನನ್ನಿಂದಲೇ ಸೋಲಾಯಿತು ಎಂಬ ಜಿ.ಟಿ. ದೇವೇಗೌಡರ ಮಾತು ಅಹಂಕಾರದ್ದಾಗಿದೆ ಎಂದರು.

ಒಕ್ಕಲಿಗ ಸಮಾಜದ ಮುಖಂಡರನ್ನು ರಾಜಕೀಯವಾಗಿ ಬೆಳೆಸಿರುವ ಸಿದ್ದರಾಮಯ್ಯ ಬಗ್ಗೆ ಜಿ.ಟಿ.ದೇವೇಗೌಡರು ಟೀಕೆ ಮಾಡುವುದು ಸರಿಯಲ್ಲ ಎಂದು ಬಸವೇಗೌಡರು ಅಭಿಪ್ರಾಯಪಟ್ಟರು.

ಸಂಸದ ಪ್ರತಾಪ್ ಸಿಂಹ ಅವರನ್ನು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬೇರೆಯವರು ಸೋಲಿಸಬೇಕಿಲ್ಲ. ಅವರ ಪಕ್ಷದವರೇ ಸೋಲಿಸುತ್ತಾರೆ ಎಂದು ಬಸವೇಗೌಡರು ಹೇಳಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಮುಖಂಡ ಈಶ್ವರ ಚಕ್ಕಡಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅವಿರೋಧ ಆಯ್ಕೆ

ಮೈಸೂರು, ಸೆ.4(ಎಸ್‌ಬಿಡಿ)–ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ ಅಧ್ಯಕ್ಷರಾಗಿ ಪ್ರಗತಿ ಗೋಪಾಲಕೃಷ್ಣ, ಉಪಾಧ್ಯಕ್ಷರಾಗಿ ಎಸ್.ಆರ್. ಮಧುಸೂದನ, ಪ್ರಧಾನ ಕಾರ್ಯದರ್ಶಿಯಾಗಿ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್, ಖಜಾಂಚಿಯಾಗಿ ಎ.ನಂದನ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಕೆ.ಹೆಚ್.ಚಂದ್ರು, ಎಂ.ಉದಯ ಶಂಕರ್, ಹಂಪಾ ನಾಗರಾಜು, ನಿಶಾಂತ್ ಪಾಲ್ ಹಾಗೂ ಟಿ.ಅನೂಪ್ ರಾಘ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪತ್ರಿಕಾ ವಿತರಕರ ಪಾತ್ರ ಬಹಳ ಮುಖ್ಯ: ಶಾಸಕ ಹರೀಶ್‌ಗೌಡ ಪ್ರಶಂಸೆ

ಮೈಸೂರು, ಸೆ.4(ಬಿಎಲ್‌ಯು)– ಮೈಸೂರಿನಲ್ಲಿ ಇಂದು ಪತ್ರಿಕಾ ವಿತರಕರ ದಿನಾಚಾರಣೆವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮೈಸೂರಿನ ಒಂಟಿಕೊಪ್ಪಲ್‌ನ ವಿ.ವಿ.ಪುರಂ ಸಂಚಾರಿ ಪೊಲೀಸ್ ಠಾಣೆ ಮುಂಭಾಗದಲ್ಲಿ ಇಂದು ಮುಂಜಾನೆ ನಡೆದ ಕಾರ್ಯಕ್ರಮದಲ್ಲಿ ಮೈಸೂರಿನ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಕೇಕ್ ಕತ್ತರಿಸುವ ಮೂಲಕ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿದರು.



ಈ ವೇಳೆ ಮಾತನಾಡಿದ ಹರೀಶ್ ಗೌಡರು, ಪ್ರಚಲಿತ ವಿದ್ಯಮಾನಗಳ ಸುದ್ದಿಗಳನ್ನು ತಿಳಿಯಲು ಪತ್ರಿಕೆಗಳು ಮುಖ್ಯವಾಗಿವೆ. ಹಾಗೆಯೇ ಪತ್ರಿಕೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಪತ್ರಿಕಾ ವಿತರಕರ ಪಾತ್ರ ಕೂಡ ಅಷ್ಟೆ ಮುಖ್ಯವಾಗಿದೆ. ಮಳೆ, ಗಾಳಿ ಎನ್ನದೆ ಮುಂಜಾನೆ ಜನರ ಮನೆ ಬಾಗಿಲಿಗೆ ಪತ್ರಿಕೆ ತಲುಪಿಸುವ ಪತ್ರಿಕಾ ವಿತರಕರ ಕಾರ್ಯ ಪ್ರಶಂಸನೀಯ ಎಂದು ಹೇಳಿದರು.

ಹಿರಿಯ ಪತ್ರಿಕಾ, ವಿತರಕರಾದ ಪುಟ್ಟಸ್ವಾಮಿ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ಅವರಿಗೆ ಡಯಾಲಿಸಿಸ್ ಮಾಡಿಸಲು ವೈಯಕ್ತಿಕವಾಗಿ 25 ಸಾವಿರ ರೂಪಾಯಿ ನೀಡಿದ ಹರೀಶ್‌ಗೌಡರು, ಪತ್ರಿಕಾ ವಿತರಕರ ಸಮಸ್ಯೆಗಳ ಪರಿಹಾರಕ್ಕೆ ನಾನು ಸದಾ ಸಿದ್ಧನಿದ್ದೇನೆ ಎಂದು ಭರವಸೆ ನೀಡಿದರು. ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮದಲ್ಲಿ ಪತ್ರಿಕೆಗಳ ವ್ಯವಸ್ಥಾಪಕರು ಹಾಗೂ ಪ್ರತಿನಿಧಿಗಳು ಉಪಸ್ಥಿತರಿದ್ದರು. ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ವತಿಯಿಂದ ತುಮಕೂರಿನಲ್ಲಿ ರಾಜ್ಯ ಮಟ್ಟದ ಪತ್ರಿಕಾ ವಿತರಕರ ದಿನಾಚರಣೆ ಆಚರಿಸಿದರು.

ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

ಮೈಸೂರು, ಸೆ.4– 2023ನೇ ಸಾಲಿನ ಮೈಸೂರು ಜಿಲ್ಲೆಯ 11 ತಾಲೂಕುಗಳಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿರುವ ಕಿರಿಯ, ಹಿರಿಯ, ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ಗುರುತಿಸಿ ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ 33 ಶಿಕ್ಷಕರನ್ನು ಆಯ್ಕೆ ಮಾಡಿದ್ದು, ಆಯ್ಕೆಯಾದ ಶಿಕ್ಷಕರಿಗೆ ಸೆ. 5ರಂದು ಶಿಕ್ಷಕರ ದಿನಾಚರಣೆ ಅಂಗವಾಗಿ ಕಲಾಮಂದಿರದಲ್ಲಿ ನಡೆಯುವ ಸಮಾರಂಭದಲ್ಲಿ ಉಸ್ತುವಾರಿ ಸಚಿವರು ಹಾಗೂ ಗಣ್ಯರ ಸಮ್ಮುಖದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಕಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ 11 ಶಿಕ್ಷಕರು, ಹಿರಿಯ ಪ್ರಾಥಮಿಕ ಶಾಲಾ ವಿಭಾಗದಲ್ಲಿ 11 ಶಿಕ್ಷಕರು ಹಾಗೂ ಪ್ರೌಢಶಾಲೆ ವಿಭಾಗದಲ್ಲಿ 11 ಶಿಕ್ಷಕರು ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆಯಾಗಿರುತ್ತಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಸೆ.4– ಮೈಸೂರು ಮಹಾನಗರ ವ್ಯಾಪ್ತಿಯ ಡೇ–ಎನ್‌ಯುಎಲ್‌ಎಂ ಅಭಿಯಾನದ ನಗರ ವಸತಿ ರಹಿತರಿಗೆ ಆಶ್ರಯ ಉಪ ಘಟಕದಡಿ "ಕ್ಷಿಪ್ರ ಸಮೀಕ್ಷೆ" (Rapid Survey) ಯನ್ನು ಕೈಗೊಳ್ಳಲಾಗುತ್ತಿದೆ.

ಸೆ.12 ಮತ್ತು 13ರಂದು ರಾತ್ರಿ 11 ಗಂಟೆಯಿಂದ ನಗರದಾದ್ಯಂತ ರಾತ್ರಿ ವೇಳೆ ನಿರ್ಗತಿಕರು ರಸ್ತೆ ಬದಿ, ಅಂಗಡಿಗಳ ಜಗುಲಿ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಪಾರ್ಕ್, ಸಾರ್ವಜನಿಕ ಸ್ಥಳಗಳಲ್ಲಿ ಮಲಗುವ ಮಾನಸಿಕ ಅಸ್ವಸ್ಥರು, ವೃದ್ಧರು, ಮಕ್ಕಳು, ಅಂಗವಿಕಲರು ಮತ್ತು ಇನ್ನಿತರೆ ವಸತಿ ರಹಿತರ, ಅನಾಥರುಗಳನ್ನು ಗುರುತಿಸಿ ಆಪ್ತ ಸಮಾಲೋಚನೆ ನಡೆಸಿ ಮಾಹಿತಿಯನ್ನು ಸಂಗ್ರಹಿಸಲು ರ್ಯಾಪಿಡ್ ಸಮೀಕ್ಷೆಯನ್ನು ಕೈಗೊಳ್ಳುತ್ತಿದ್ದು, ಸದರಿ ರ್ಯಾಪಿಡ್ ಸಮೀಕ್ಷಾ ಕಾರ್ಯದಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತ ಅರ್ಹ ಸರ್ಕಾರೇತರ ಸ್ವಯಂ ಸಂಸ್ಥೆಗಳು, ವಿಶ್ವವಿದ್ಯಾನಿಲಯ, ಕಾಲೇಜುಗಳು, ಸಮುದಾಯ ಸಂಸ್ಥೆಗಳು, ಎಸ್.ಹೆಚ್.ಜಿಗಳು, ರೋಟರಿ ಕ್ಲಬ್, ಲಯನ್ಸ್ ಕ್ಲಬ್, ನೆಹರು ಯುವ ಕೇಂದ್ರ ಇತ್ಯಾದಿ ಆಸಕ್ತಿಯುಳ್ಳವರು ಸೆ.6ರಂದು ಕಚೇರಿಯ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಡೇನ್ ವಿಭಾಗಕ್ಕೆ ಬಂದು ಮಾಹಿತಿ ಪಡೆದು ನೋಂದಾಯಿಸಿಕೊಳ್ಳುವಂತೆ ಮೈಸೂರು ಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪತ್ರಿಕಾ ವಿತರಣೆ ಕೆಲಸಕ್ಕೂ ತುಂಬಾ ಗೌರವವಿದೆ

ಮೈಸೂರು, ಸೆ. 4–ಪತ್ರಿಕೆ ವಿತರಣೆಯೆಂದರೆ ಸಣ್ಣ ಹಾಗೂ ಸಾಮಾನ್ಯ ಕೆಲಸವಲ್ಲ. ಎಲ್ಲ ಕೆಲಸಕ್ಕೂ ಅದರದೇ ಆದ ಗೌರವವಿದೆ. ಪತ್ರಿಕೆ ಎಷ್ಟೇ ಮುದ್ರಣವಾದರೂ ಓದುಗರನ್ನು ತಲುಪಿದಾಗಲೇ ಸಾರ್ಥಕವಾಗುವುದು. ಬೆಳಗ್ಗೆ ಪತ್ರಿಕೆ ಓದುಗರ ಕೈ ಸೇರದಿದ್ದರೆ ಎಲ್ಲರಿಗೂ ನೆನಪಾಗುವುದು ವಿತರಕರು ಎಂದು ಕೆಪಿಸಿಸಿ ಸದಸ್ಯ ಗುರುಪಾದ ಸ್ವಾಮಿ ಹೇಳಿದರು.

ಪತ್ರಿಕೆಗಳ ಬೆನ್ನೆಲುಬಾಗಿರುವ ಪತ್ರಿಕಾ ವಿತರಕರ ದಿನಾಚರಣೆಯ ಸಂದರ್ಭ ಚಾಮುಂಡಿಪುರಂನಲ್ಲಿರುವ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಅಪೂರ್ವ ಸ್ನೇಹ ಬಳಗದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಹಿರಿಯ ಪತ್ರಿಕಾ ವಿತರಕರ ಸನ್ಮಾನ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಅವರು ಮಾತನಾಡಿದರು.

ಕೊರೊನಾದಂಥ ಸಂಕಷ್ಟ ಸಮಯದಲ್ಲಿ ಕೂಡ ಪ್ರಾಣಕ್ಕೆ ಹೆದರದೆ ಸಮಯಕ್ಕೆ ಸರಿಯಾಗಿ ಪತ್ರಿಕೆಗಳನ್ನು ಓದುಗರಿಗೆ ಮುಟ್ಟಿಸುವ ಕೆಲಸವನ್ನು ವಿತರಕರು ಮಾಡುತ್ತಾರೆ. ಅವರನ್ನು ಸನ್ಮಾನಿಸುವುದು ತುಂಬ ದೊಡ್ಡ ಕೆಲಸ ಎಂದು ಅವರು ಹೇಳಿದರು.



ಹಿರಿಯ ಪತ್ರಿಕಾ ವಿತರಕರಾದ ಚಂದ್ರು, ಲೋಕೇಶ್, ಮಹದೇವ್, ಎಂ.ಪಿ.ಗುಂಡಪ್ಪ, ಕನಕ ರತ್ನ, ರಾಮಚಂದ್ರು, ಪ್ರಭಾಕರ್ ಅವರನ್ನು ಸನ್ಮಾನಿಸಲಾಯಿತು.

ಪತ್ರಿಕಾ ಪ್ರತಿನಿಧಿಗಳ ಸಂಘದ ಪ್ರಧಾನ ಕಾರ್ಯದರ್ಶಿ ರವಿ ಮಾತನಾಡಿ, ಪತ್ರಿಕಾ ವಿತರಕರಿಗೆ ಆರೋಗ್ಯ ವಿಮೆ, ಪತ್ರಿಕಾ ವಿತರಕರಿಗೆ ಪತ್ರಿಕೆ ವಿತರಿಸಲು ಶಾಶ್ವತ ಸೂರು ಹಾಗೂ ಈ ಹಿಂದೆ ಸರ್ಕಾರ ಘೋಷಣೆ ಮಾಡಿದ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ನಿಧಿಯನ್ನು ಈ ಕೂಡಲೇ ಬಿಡುಗಡೆಗೊಳಿಸಬೇಕು. ಅದರಿಂದ ಪತ್ರಿಕಾ ವಿತರಕರಿಗೆ ಅನುಕೂಲವಾಗುತ್ತದೆ. ಹಾಗೂ ಸರ್ಕಾರದ ವತಿಯಿಂದ ಪ್ರತಿವರ್ಷ ಪತ್ರಿಕಾ ವಿತರಕರನ್ನು ಗುರುತಿಸಿ ಸನ್ಮಾನಿಸುವ ಕಾರ್ಯಕ್ಕೆ ಮುಂದಾಗಬೇಕೆಂದು ಮನವಿ ಮಾಡಿದರು.

ನಜರ್‌ಬಾದ್ ನಟರಾಜ್, ಪತ್ರಿಕಾ ಪ್ರತಿನಿಧಿಗಳ ಸಂಘದ ಪ್ರಧಾನ ಕಾರ್ಯದರ್ಶಿ ರವಿ, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಉದ್ಯಮಿ ಜಯರಾಮ್, ಕಾಂಗ್ರೆಸ್ ಮುಖಂಡ ಶ್ರೀಪಾಲ್, ಹೊಯ್ಸಳ ಟ್ರಸ್ಟ್ ಅಧ್ಯಕ್ಷ ಎಂ.ಪಿ. ರಾಜೇಶ್, ಮಂಚೇಗೌಡನಕೊಪ್ಪಲು ರವಿ, ಲೋಕೇಶ್, ವರುಣ ಮಹದೇವ್ , ಯೋಗೇಶ್ ಯಾದವ್, ಬಸವಣ್ಣ, ವಿತರಕರಾದ ಜೆ ಲೋಕೇಶ್, ಮಹೇಶ್, ಎಂ ನಾಗರಾಜು, ಸಂಪತ್, ನಾಗೇಂದ್ರ, ಶರತ್, ಪುಟ್ಟ, ಜಯರಾಮ್, ವಿ.ನಾಗರಾಜ್ ವೆಂಕಟೇಶ್ ನಾಯಕ್, ಯೋಗೇಶ್, ಸುರೇಶ್, ಪ್ರದೀಪ್, ಇನ್ನಿತರರಿದ್ದರು.

ಪದವಿ ವಿದ್ಯಾರ್ಥಿ ಜೀವನದಲ್ಲಿ ಮುಖ್ಯವಾದ ಹಂತ

ನೂತನ ಪದವಿ ವಿದ್ಯಾರ್ಥಿನಿಯರ ಪರಿಚಯಾತ್ಮಕ ಮತ್ತು ಅಭಿವಿನ್ಯಾಸ ಕಾರ್ಯಕ್ರಮ

ಮೈಸೂರು, ಸೆ. 4– ಎಂ.ಎಂ.ಕೆ ಮತ್ತು ಶ್ರೀಧರ್ಮಸ್ಥಳ ಮಂಜುನಾಥೇಶ್ವರ ಮಹಿಳಾ ಮಹಾವಿದ್ಯಾಲಯದ 2023–2024ನೇ ಶೈಕ್ಷಣಿಕ ಸಾಲಿನ ಪೋಷಕರ ಮತ್ತು ನೂತನ ಪದವಿ ವಿದ್ಯಾರ್ಥಿನಿಯರ ಪರಿಚಯಾತ್ಮಕ ಮತ್ತು ಅಭಿವಿನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ ಸಾಯಿನಾಥ್ ಮಲ್ಲಿಗೆಮಾಡು ಮಾತನಾಡಿ, ಪದವಿಯು ವಿದ್ಯಾರ್ಥಿ ಜೀವನದಲ್ಲಿ ಬಹಳ ಮುಖ್ಯವಾದ ಹಂತವಾಗಿದ್ದು ಮೂರು ವರ್ಷಗಳ ಈ ಅಧ್ಯಯನವು ಅವರ ಬದುಕನ್ನು ನಿರ್ಧರಿಸುವಂತಹ ಪ್ರಮುಖ ಹಂತವಾಗಿದೆ. ವಿದ್ಯಾರ್ಥಿಗಳಿಗೆ ಪೋಷಕರು ಮತ್ತು ಕಾಲೇಜು ಅವರ ಶಿಕ್ಷಣಕ್ಕೆ ಸಕಾರಾತ್ಮಕವಾಗಿ ನಿಯಮಗಳ ಅಡಿಯಲ್ಲಿ ಕಾರ್ಯನಿರ್ವಹಿಸಿ ಅವರ ಬದುಕಿಗೆ ಆಸರೆಯಾದಾಗ ಅವರ ಭವಿಷ್ಯವು ಉಜ್ವಲವಾಗುತ್ತದೆ ಎಂದರು.

ಡಾ ವೀರೇಂದ್ರ ಹೆಗ್ಗಡೆಯವರ ದಿವ್ಯ ಮಾರ್ಗದರ್ಶನದಲ್ಲಿ ಮತ್ತು ದಕ್ಷ ಆಡಳಿತ ಮಂಡಳಿಯ ನಿರ್ದೇಶನದಲ್ಲಿ ವಿದ್ಯಾರ್ಥಿನಿಯರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ನಮ್ಮ ಕಾಲೇಜಿನಲ್ಲಿ ಉತ್ತಮ ಶೈಕ್ಷಣಿಕ ವಾತಾವರಣವಿದ್ದು ಹಿರಿಯ ಅನುಭವಸ್ಥ, ಸಮರ್ಪಣಾ ಭಾವದ ಅಧ್ಯಾಪಕರ ಮೂಲಕ ವಿಶ್ವವಿದ್ಯಾನಿಲಯ ಪಠ್ಯಕ್ರಮವನ್ನು ಬೋಧಿಸುವ ಕಾರಣದಿಂದ ಪ್ರತಿ ವರ್ಷವೂ ಉತ್ತಮ ಶೈಕ್ಷಣಿಕ ಫಲಿತಾಂಶ ಪಡೆದು ಘಟಿಕೋತ್ಸವದಲ್ಲಿ ದತ್ತಿ ನಗದು ಮತ್ತು ಚಿನ್ನದ ಪದಕಗಳು ನಮ್ಮ ವಿದ್ಯಾರ್ಥಿಗಳಿಗೆ ಲಭಿಸುವುದು ಹೆಮ್ಮೆಯ ಸಂಗತಿಯಾಗಿದೆ ಕಾಲೇಜಿನಲ್ಲಿ ಸಾಹಿತ್ಯ, ಸಾಂಸ್ಕೃತಿಕ, ಕ್ರೀಡಾ ಎನ್‌ಎಸ್‌ಎಸ್, ವೈಆರ್‌ಸಿ, ರೈಜರ್ಸ್ ಸೈನ್ಸ್ ಅಂಡ್ ನೇಚರ್ ಕ್ಲಬ್, ಲೀಗಲ್ ಲಿಟ್ರೆಸಿ, ನುಡಿರತ್ನ ಕನ್ನಡ ಸಂಘ ಅಮೇಚರ್ ಐಟಿಕ್ಲಬ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಕ್ಲಬ್ ಘಟಕಗಳ ಮೂಲಕ ವರ್ಷ ಪೂರ್ತಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ. ಕಾಲೇಜಿನಲ್ಲಿ ರತ್ನ ಮಾನಸ ಹಿರಿಯ ವಿದ್ಯಾರ್ಥಿನಿ ಸಂಘವು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದ್ದು ನಮ್ಮ ಸಂಸ್ಥೆಯಿಂದ ವಿದ್ಯಾಭ್ಯಾಸ ಪಡೆದವರು ಉತ್ತಮ ಹುದ್ದೆಗಳನ್ನು ಪಡೆದಿದ್ದು, ಅವರೆಲ್ಲರ ಮಾರ್ಗದರ್ಶನ ಕೊಡಿಸಲಾಗುತ್ತದೆ.



ವಿವಿಧ ವಿಭಾಗಗಳಿಂದ ಪ್ರತಿವರ್ಷವೂ ರಾಜ್ಯ, ರಾಷ್ಟ್ರಮಟ್ಟದಲ್ಲಿ ವಿಚಾರ ಸಂಕಿರಣ ಕಾರ್ಯಾಗಾರಗಳನ್ನು ಮತ್ತು ಅಂತಿಮ ವರ್ಷದ ವಿದ್ಯಾರ್ಥಿನಿಯರಿಗೆ ಸಿಆರ್‌ಟಿ ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ವಿದ್ಯಾರ್ಥಿನಿಯರಿಗೆ ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸಲು ಮತ್ತು ವ್ಯಕ್ತಿತ್ವ ವಿಕಸನ ಹೊಂದಲು ಸಾಧ್ಯವಾಗುತ್ತದೆ ಎಂದರು.

ಉಪ ಪ್ರಾಂಶುಪಾಲರಾದ ಪ್ರೊ.ಎನ್ ಭಾರತಿ ಅವರು, ಕಾಲೇಜಿನ ನಿಯಮಗಳು ಮತ್ತು ಪದವಿಯ ಬಗೆಗೆ ತಿಳಿಸಿದರು. ಗಣಕ ವಿಜ್ಞಾನ ವಿಭಾಗದ ಮುಖ್ಯಸ್ಥರು ಐಕ್ಯೂಎಸಿ ಸಂಚಾಲಕ ಪ್ರೊ.ಕೆ.ಎಸ್. ಸುಕೃತ ಕಾಲೇಜಿನ ಐಕ್ಯೂಎಸಿ ಚಟುವಟಿಕೆಗಳನ್ನು ತಿಳಿಸಿದರು. ಕಾಲೇಜು ಗ್ರಂಥಪಾಲಕರಾದ ಪದ್ಮ ಅವರು ಗ್ರಂಥಾಲಯದ ಮಹತ್ವ ಮತ್ತು ಅದರ ಉಪಯೋಗ ಸೌಲಭ್ಯಗಳ ಬಗೆಗೆ ತಿಳಿಸಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಮಾಲತಿ ಅವರು ಕಾಲೇಜಿನ ಕ್ರೀಡಾ ಚಟುವಟಿಕೆಗಳು, ಕಾಲೇಜಿನ ಕ್ರೀಡಾ ಸಾಧನೆಯ ಬಗೆಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಾಪಕ ಮತ್ತು ಸಿಬ್ಬಂದಿ ವೃಂದ ಮತ್ತು ಪೋಷಕ ವೃಂದದವರು ಉಪಸ್ಥಿತರಿದ್ದರು.

ಸಮಾಜಕ್ಕೆ ನಾರಾಯಣ ಗುರುಗಳ ತತ್ವಾದರ್ಶ ಅಗತ್ಯ

ಆರ್ಯ ಈಡಿಗರ ಸಂಘದ ಅಧ್ಯಕ್ಷ ಕಿರಗಸೂರು ಶಂಕರ್ ಅಭಿಪ್ರಾಯ



ತಿ.ನರಸೀಪುರ, ಸೆ.4– ಪ್ರಸ್ತುತ ಸಮಾಜಕ್ಕೆ ನಾರಾಯಣ ಗುರುಗಳ ತತ್ವಾದರ್ಶಗಳ ಅಗತ್ಯವಿದೆ ಎಂದು ತಾಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ಕಿರಗಸೂರು ಶಂಕರ್ ತಿಳಿಸಿದರು.

ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ಆರ್ಯ ಈಡಿಗರ ಸಂಘದ ಸಂಯುಕ್ತಾಶ್ರಯದಲ್ಲಿ ಪಟ್ಟಣದ ತಾಪಂ ಸಭಾಂಗಣದಲ್ಲಿ ಸೋಮವಾರ ನಡೆದ ಬ್ರಹ್ಮಶ್ರೀ ನಾರಾಯಣ ಗುರುಗಳ 169ನೇ ಜಯಂತಿಯಲ್ಲಿ ಮಾತನಾಡಿದ ಅವರು, ನಾರಾಯಣ ಗುರುಗಳು ಜಾತಿ ಮತ್ತು ಧರ್ಮದ ಗುರುವಲ್ಲ ಅವರು ಲೋಕದ ಗುರು. ಸಮಾಜದಲ್ಲಿದ್ದ ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಮಹಾನ್ ನಾಯಕ. ಮೇಲು, ಕೀಳು ತೊಡೆದು ಹಾಕಿ ಸಮಾನತೆಯ ಸಮಾಜಕ್ಕೆ ಪ್ರಯತ್ನಿಸಿದ ನಾರಾಯಣ ಗುರುಗಳು ಸಮಾಜಕ್ಕೆ ಸರಿದಾರಿ ತೋರುವ ಪ್ರಯತ್ನ ಮಾಡಿದರು ಎಂದರು.

ಸಾಮಾಜಿಕ ಬದಲಾವಣೆಯಲ್ಲಿ ನಾರಾಯಣ ಗುರುಗಳ ಪಾತ್ರ ಅಪಾರ. ಶಿಕ್ಷಣಕ್ಕೆ ಮಹತ್ವ ನೀಡಿದ್ದ ಅವರು, ಸಮಾಜದಲ್ಲಿದ್ದ ಅಸ್ಪೃಶ್ಯತೆ ನಿವಾರಣೆಗಾಗಿ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರ ಸೈದ್ಧಾಂತಿಕ ವಿಚಾರಗಳ ಬಗ್ಗೆ ತಮಗೆ ಅಭಿಮಾನವಿದೆ ಎಂದರು.

ಮುಖ್ಯ ಭಾಷಣಕಾರ ಕರೋಹಟ್ಟಿ ಪ್ರಭುಸ್ವಾಮಿ ಮಾತನಾಡಿ, ನಾರಾಯಣ ಗುರುಗಳು ದುಶ್ಚಟ ಬಿಟ್ಟು ಪರಿಶುದ್ಧ ಬದುಕು ನಡೆಸುವಂತೆ ಸಮಾಜಕ್ಕೆ ಸಂದೇಶ ಕೊಟ್ಟಿದ್ದಾರೆ. ಒಳ್ಳೆಯ ಶಿಕ್ಷಣ ಪಡೆದು ಗುರುಗಳು ತೋರಿದ ದಾರಿಯಲ್ಲಿ ಸಾಗಿ ಅವರ ಹೆಸರಿಗೆ ಗೌರವ ಬರುವಂತೆ ನಡೆದುಕೊಂಡರೆ ಅದೇ ನಿಜವಾದ ಗುರುದಕ್ಷಿಣೆ. ಸಾಮಾಜಿಕ ಪರಿವರ್ತನೆಯ ಹರಿಕಾರ ಬ್ರಹ್ಮಶ್ರೀ ನಾರಾಯಣ ಗುರುಗಳು ತಿಳಿವಳಿಕೆಯೇ ಜ್ಞಾನ, ಜ್ಞಾನದ ಅನುಭವವೇ ದೇವರು. ದೇವರನ್ನು ಹುಡುಕಬೇಡಿ, ಆತ ನಿಮ್ಮಲ್ಲಿಯೇ ಇದ್ದಾನೆಂದು ಹೇಳಿದ್ದಾರೆ ಎಂದರು.

ಮಹಾಮಾನವತಾವಾದಿ ಬ್ರಹ್ಮಶ್ರೀ ನಾರಾಯಣ ಗುರುಗಳು ಧರ್ಮ, ಜಾತಿ, ಭಾಷೆಗಳನ್ನೆಲ್ಲಾ ಮೀರಿ ಸರ್ವ ಮನುಕುಲಕ್ಕೆ ಯೋಗ್ಯ ಜೀವನ ನಡೆಸುವ ದಿವ್ಯ ಸಂದೇಶ ನೀಡಿದ್ದಾರೆ. ಅವರ ವಿಚಾರ, ಸಿದ್ಧಾಂತಗಳು ಎಲ್ಲಾ ಕಾಲಕ್ಕೂ ಪ್ರಸ್ತುತ. ಸಮಾಜದಲ್ಲಿ ಅಸ್ಪೃಶ್ಯತೆ ತಾಂಡವವಾಡುತ್ತಿದ್ದ ವೇಳೆ ಕೆಳವರ್ಗದವರಿಗೆ ದೇವಾಲಯಕ್ಕೆ ಪ್ರವೇಶವಿಲ್ಲದಂತಹ ಕಾಲದಲ್ಲಿ ನಾರಾಯಣ ಗುರುಗಳು 50ಕ್ಕೂ ಹೆಚ್ಚು ದೇವಾಲಯಗಳನ್ನು ನಿರ್ಮಿಸಿದರು. ಮಾನವತ್ವದಿಂದ ದೈವತ್ವದೆಡೆಗೆ ಹೋಗಬಹುದು ಎನ್ನುವುದಕ್ಕೆ ನಾರಾಯಣ ಗುರುಗಳು ಉದಾಹರಣೆ ಎಂದರು.

ಇದಕ್ಕೂ ಮೊದಲು ಗುಂಜಾನರಸಿಂಹ ಸ್ವಾಮಿ ದೇವಸ್ಥಾನದಿಂದ ಹೊರಟ ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರವಿದ್ದ ಅಲಂಕೃತ ವಾಹನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಾಪಂ ಆವರಣಕ್ಕೆ ತಲುಪಿತು.

ಈ ವೇಳೆ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ತಾಪಂ ಇಓ ಸಿ.ಕೃಷ್ಣ, ಈಡಿಗರ ಸಂಘದ ಗೌರವಾಧ್ಯಕ್ಷ ಸಿದ್ದರಾಜು, ಉಪಾಧ್ಯಕ್ಷ ಗುರು, ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ರೇಣುಕಾ ಪ್ರಸಾದ್, ವಾಸುದೇವ್, ಶ್ರೀಕಾಂತ್, ಪ್ರಶಾಂತ್ ಈಡಿಗರ್, ರವಿಶಂಕರ್, ಎನ್.ಕುಮಾರಸ್ವಾಮಿ, ಪಿ.ಆನಂದ್, ಶ್ರೀನಿವಾಸ್, ನಾಗರಾಜು, ಜೆ.ರಾಜು, ರವಿಶೇಖರ್, ರವಿ, ಸುರೇಶ್, ಮೂರ್ತಿ, ರಂಗಸ್ವಾಮಿ, ಯಶ್ವಂತ್ ಈಡಿಗರ್, ಕಿಟ್ಟುಗೌಡ, ಗುರುಸ್ವಾಮಿ, ಕೆಎಸ್ಐಸಿ ವೆಂಕಟಾಚಲ ಸೇರಿದಂತೆ ತಾಲೂಕು ಈಡಿಗರ ಸಂಘದ ಸದಸ್ಯರು, ಮುಖಂಡರು ಭಾಗವಹಿಸಿದ್ದರು.

ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ

ರೇಖಾ



ನಂಜನಗೂಡು, ಸೆ.4– ತಾಲೂಕಿನ ಬೊಕ್ಕಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕಿ ರೇಖಾ ಉತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರ ಸೇವೆ ಗುರುತಿಸಿ ಶಿಕ್ಷಣ ಇಲಾಖೆ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿ ಗೌರವಿಸುತ್ತಿದೆ. ಇವರನ್ನು ಬಿಇಓ ಶಿವಲಿಂಗಯ್ಯ, ಬಿಆರ್‌ಸಿ ಬಾಲರಾಜು, ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮರತ್ನಾಕರ, ಕಾರ್ಯದರ್ಶಿ ಸೌಮೇಶ್, ಖಜಾಂಚಿ ಗಿರೀಶ್, ಉಪಾಧ್ಯಕ್ಷ ಸತೀಶ್, ಎಸ್.ದಳವಾಯಿ ಅಭಿನಂದನೆ ತಿಳಿಸಿದ್ದಾರೆ.

ಮಂಜುನಾಥ್



ನಂಜನಗೂಡು, ಸೆ.4– ತಾಲೂಕಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಕೆ.ಆರ್.ಮಂಜುನಾಥ್ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಚಿಕ್ಕಯ್ಯನಛತ್ರ ಶಾಖೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಮಂಜುನಾಥ್ ಕಳೆದ 21 ವರ್ಷಗಳ ಕಾಲ ಶಿಕ್ಷಕರಾಗಿ ಕಪ್ಪಸೋಗೆ, ಕಳಲೆ, ದೇವರಾಯಶೆಟ್ಟಿಪುರ ಸೇರಿದಂತೆ ವಿವಿಧ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಅಗತ್ಯ ಸಹಕಾರ



> ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಮಾತ್ರ ಆದ್ಯತೆ ನೀಡುವ ಬದಲು ಇಸ್ರೋದಂತಹ ಸಂಸ್ಥೆಗಳಲ್ಲಿ ವಿಜ್ಞಾನಿಗಳಾಗಿ ಸೇವೆ ಸಲ್ಲಿಸುವ ಹಂಬಲ ಹೊಂದಬೇಕು. ಉದ್ಯೋಗದ ಜೊತೆಗೆ ಕೃಷಿ ಸೇರಿದಂತೆ ಇತರ ಕ್ಷೇತ್ರಗಳಲ್ಲೂ ಸಾಧನೆ ಮಾಡಬಹುದಾದ ಶಿಕ್ಷಣ ಪಡೆಯಬೇಕು.
> – ಡಿ.ರವಿಶಂಕರ್, ಶಾಸಕ.

ಶಾಸಕ ಡಿ.ರವಿಶಂಕರ್ ಭರವಸೆ

ಕೆ.ಆರ್.ನಗರ, ಸೆ.4– ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಬಡ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ಬೇಕಾಗುವ ಎಲ್ಲಾ ರೀತಿಯ ಸಹಕಾರ ನೀಡುವ ಜೊತೆಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ಕೊಡಿಸಲು ಮುಂದಾಗುತ್ತೇನೆ ಎಂದು ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ಪಟ್ಟಣದ ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನದಲ್ಲಿ ಸೃಜನ ಲೇಖಕರು ಮತ್ತು ಕಲಾವಿದರ ಬಳಗ ಹಾಗೂ ವಿಚಾರ ಪ್ರಜ್ಞೆ ಪತ್ರಿಕಾ ಬಳಗದಿಂದ ನಡೆದ ಪ್ರತಿಭಾ ಪುರಸ್ಕಾರ ಮತ್ತು ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಜಗತ್ತಿನಲ್ಲಿ ಉತ್ತಮ ಶಿಕ್ಷಣ ಪಡೆಯಲು ಸ್ಪರ್ಧೆ ಅನಿವಾರ್ಯ. ಜೊತೆಗೆ ಸಾಕಷ್ಟು ಆರ್ಥಿಕ ಸಂಪನ್ಮೂಲವೂ ಬೇಕಾಗಿದ್ದು, ಇದನ್ನರಿತು ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕು ಎಂದು ಸಲಹೆ ನೀಡಿದ ಅವರು, ಪೋಷಕರು ಕಷ್ಟಕ್ಕೆ ಹೆದರದೆ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿರುವುದನ್ನು ಮಕ್ಕಳು ಮರೆಯಬಾರದು ಎಂದರು.

ದೇಶದ ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳು ದೇಶದ ಇತಿಹಾಸ ಮತ್ತು ಸಂಸ್ಕೃತಿ ಅಧ್ಯಯನ ಮಾಡುವ ಜೊತೆಗೆ ಒಳ್ಳೆಯ ಸಂಸ್ಕಾರ ಕಲಿಯಬೇಕು. ಆಗ ಸಮಾಜದಲ್ಲಿ ನಿಮ್ಮ ಘನತೆ ಹೆಚ್ಚಾಗಲಿದೆ. ಈ ವಿಚಾರವನ್ನು ಎಲ್ಲರೂ ಗಂಭೀರವಾಗಿ ಪರಿಗಣಿಸಬೇಕು ಎಂದರು.

ಸೃಜನ ಬಳಗದ ಅಧ್ಯಕ್ಷ ರಾ.ಸುರೇಶ್ ಕಳೆದ 20 ವರ್ಷಗಳಿಂದ ಹಲವು ಸಮಾಜಮುಖಿ ಕಾರ್ಯ ಮಾಡುತ್ತಿದ್ದಾರೆ. ಅದಕ್ಕಾಗಿ ಇವರ ಬಳಗಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಾಗುತ್ತದೆ ಎಂದರು. ಲಾಳನಹಳ್ಳಿ ಗುರುಮಲ್ಲೇಶ್ವರ ಮಠದ ಶರಣೆ ಜಯದೇವಿತಾಯಿ, ಕನಕಗುರು ಪೀಠದ ಕಿರಿಯ ಶ್ರೀ ಅರುಣ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಇದೇ ವೇಳೆ ಎಸ್‌ಎಲ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಮಿರ್ಲೆ ಮಿಥಿಲ ವಿದ್ಯಾಸಂಸ್ಥೆ ಕಾರ್ಯದರ್ಶಿ ಎಂ.ಬಿ.ಲೋಕನಾಥ್, ರೋಟರಿ ಸಂಸ್ಥೆ ಅಧ್ಯಕ್ಷ ನಾಗರಾಜು ಬಾವಿಕಟ್ಟೆ, ಬಳಗದ ಅಧ್ಯಕ್ಷ ರಾ.ಸುರೇಶ್, ವಲಯ ಅರಣ್ಯಾಧಿಕಾರಿ ರಶ್ಮಿ, ಸಮಾಜ ಕಲ್ಯಾಣಾಧಿಕಾರಿ ಗುರುಶಾಂತಪ್ಪ ಮಾತನಾಡಿದರು.

ಪುರಸಭೆ ಮಾಜಿ ಅಧ್ಯಕ್ಷ ಕೆ.ಜಿ.ಸುಬ್ರಹ್ಮಣ್ಯ, ಡಾ.ಜನಾರ್ದನ್‌ಭಟ್, ಡಾ.ನಟರಾಜು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್.ಹರಿಚಿದಂಬರ, ಮುಖಂಡರಾದ ಕೆ.ಎ.ಮಹೇಶ್, ನರಸಿಂಹಮೂರ್ತಿ, ಮೋಹನ್, ಕುಮಾರಸ್ವಾಮಿ, ಎಂ.ಜೆ.ರಮೇಶ್, ನಟರಾಜು, ಪಿ.ಆರ್.ವಿಶ್ವನಾಥ್‌ಶೆಟ್ಟಿ, ವೆಂಕಟೇಶ್ ಬಾಬು, ಪ್ರದೀಪ್, ಕೆ.ಪಿ.ಭಾರತಿ ಸೇರಿದಂತೆ ಇತರರಿದ್ದರು.

ಜಿಲ್ಲಾ ಮಟ್ಟಕ್ಕೆ ಇಬ್ಬರು ವಿದ್ಯಾರ್ಥಿನಿಯರು ಆಯ್ಕೆ

ಹಿರಿಕ್ಯಾತನಹಳ್ಳಿ, ಸೆ.4– ಹುಣಸೂರಿನಲ್ಲಿ ನಡೆದ ಪದವಿ ಪೂರ್ವ ಕಾಲೇಜುಗಳ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಬಿಳಿಗೆರೆ ಗ್ರಾಮದ ಅನ್ವೇಷಣಾ ಕಾಲೇಜಿನ ಇಬ್ಬರು ವಿದ್ಯಾರ್ಥಿನಿಯರು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಗುಂಡು ಎಸೆತದಲ್ಲಿ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ಜುಡಿತಾ ಪ್ರಥಮ ಸ್ಥಾನ, ಪ್ರಥಮ ಪಿಯುಸಿ ವಾಣಿಜ್ಯ ವಿಭಾಗದ ಪುಷ್ಪ 100 ಮೀಟರ್ ಓಟದ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆಯುವ ಮೂಲಕ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕ್ರೀಡಾಕೂಟದಲ್ಲಿ ವಿಜೇತರಾಗಿ ಮುಂದಿನ ಹಂತಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಅನ್ವೇಷಣಾ ಸಂಸ್ಥೆ ಸಂಸ್ಥಾಪಕ ಹೆಚ್.ಕೆ.ಚಂದ್ರಮೋಹನ್, ಪ್ರಾಂಶುಪಾಲ ಗಿರೀಶ್ ಹೆಚ್.ಎನ್, ಕಾರ್ಯದರ್ಶಿ ಹೆಚ್.ಸಿ.ಪ್ರಶಾಂತ್, ಉಪಪ್ರಾಂಶುಪಾಲೆ ಆಶಾ ನಂದೀಶ್ ಹಾಗೂ ಉಪನ್ಯಾಸಕರು ಅಭಿನಂದಿಸಿದ್ದಾರೆ.



ಹುಣಸೂರಿನ ಅಂಬೇಡ್ಕರ್ ಭವನದಲ್ಲಿ ಶಾಸಕರ ಜನಸ್ಪಂದನಾ ವತಿಯಿಂದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಜಯಂತಿ ಹಾಗೂ ಪತ್ರಿಕಾ ದಿನಾಚರಣೆ ಮತ್ತು ಅರಸು ರತ್ನ ರಾಜ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ವೇಳೆ ವೆಂಕಟೇಶ್, ಬೂದಿ ಮಠದ ಶ್ರೀ ಸಾಂಬ ಸದಾಶಿವ ಸ್ವಾಮೀಜಿ, ಸಂಪಾದಕ ಸದಾಶಿವ, ನಗರಸಭಾ ಸದಸ್ಯರಾದ ಶರವಣ, ಕೃಷ್ಣರಾಜಗುಪ್ತ, ಜನತಾ ಸೇವಾದಳದ ಅಧ್ಯಕ್ಷ ಸತೀಶ್ ರೆಡ್ಡಿ, ರೈತ ಸಂಘದ ಬೆಟ್ಟೇಗೌಡ ಇತರರಿದ್ದರು. ಇದೇ ವೇಳೆ ಗಣ್ಯರನ್ನು ಸನ್ಮಾನಿಸಲಾಯಿತು.

ನಾಮಧಾರಿಗೌಡ ಸಮಾಜವನ್ನು '2ಎ'ಗೆ ಸೇರಿಸುವ ಅಗತ್ಯವಿದೆ



ಶಾಸಕ ಅನಿಲ್ ಚಿಕ್ಕಮಾದು

ಸರಗೂರು, ಸೆ.4– ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದಿರುವ ನಾಮಧಾರಿಗೌಡ ಸಮಾಜವನ್ನು '2ಎ' ವರ್ಗಕ್ಕೆ ಸೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಗಮನ ಸೆಳೆಯಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಅಖಿಲ ನಾಮಧಾರಿ ಸಮಾಜದ ಸಮುದಾಯ ಭವನದಲ್ಲಿ ಸೋಮವಾರ ಅಖಿಲ ನಾಮಧಾರಿಗೌಡ ಸಂಘದಿಂದ ನಡೆದ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಮುದಾಯದ ಮುಂದಿನ ಪೀಳಿಗೆ ಅನುಕೂಲಕ್ಕಾಗಿ ಸಮುದಾಯವನ್ನು 2ಎ ವರ್ಗಕ್ಕೆ ಸೇರಿಸುವ ಅಗತ್ಯವಿದೆ ಎಂದರು.

ನಾಮಧಾರಿಗೌಡ ಸಮುದಾಯವನ್ನು 2ಎ ವರ್ಗಕ್ಕೆ ಸೇರಿಸುವಂತೆ ಜಿಲ್ಲಾ ಮಟ್ಟದಲ್ಲಿ ನಾಮಧಾರಿಗೌಡ ಸಮಾಜದ ಬೃಹತ್ ಸಮಾವೇಶ ಆಯೋಜಿಸಿ, ಸರ್ಕಾರದ ಗಮನ ಸೆಳೆಯಬೇಕಿದೆ. ಇದಕ್ಕಾಗಿ ಸಮಾಜ ಒಗ್ಗಟ್ಟಾಗಬೇಕಿದೆ. ಆಗ ಮಾತ್ರ ರಾಜಕೀಯವಾಗಿ ಮುಂದೆ ಬರಲು ಸಾಧ್ಯ. ಸಮುದಾಯವನ್ನು 2ಎ ವರ್ಗಕ್ಕೆ ಸೇರಿಸುವ ಸಂಬಂಧ ಮುಂದಿನ ದಿನಗಳಲ್ಲಿ ತಾಲೂಕಿನಿಂದ ಸಮುದಾಯದ ಮುಖಂಡರ ನಿಯೋಗ ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಬೇಕಿದೆ ಎಂದರು.

ನಾಮಧಾರಿಗೌಡ ಸಮುದಾಯ ಭವನ ಕಟ್ಟಡ ದುರಸ್ತಿಗೆ 10 ಲಕ್ಷ ರೂ.ಗೆ ಮನವಿ ಸಲ್ಲಿಸಲಾಗಿದೆ. ಈ ಪೈಕಿ ಶಾಸಕರ ಅನುದಾನದಲ್ಲಿ ಮೊದಲ ಕಂತಿನಲ್ಲಿ 5 ಲಕ್ಷ ಅನುದಾನ ನೀಡಲಾಗುವುದು. ಎರಡನೇ ಕಂತಿನಲ್ಲಿ ಇನ್ನುಳಿದ ಅನುದಾನ ನೀಡಲಾಗುವುದು. ಸಮುದಾಯ ಭವನಕ್ಕೆ ಕಾಂಪೌಂಡ್ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗೆ 1 ಕೋಟಿ ರೂ. ಅನುದಾನ ಕೋರಲಾಗಿದೆ ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ ಮಾತನಾಡಿ, ಕೃಷಿ ನಂಬಿ ಜೀವನ ನಡೆಸುತ್ತಿರುವ ನಾಮಧಾರಿ ಸಮಾಜವನ್ನು 2ಎ ವರ್ಗಕ್ಕೆ ಸೇರಿಸಿ ಅನುಕೂಲ ಮಾಡಿಕೊಡಬೇಕು. ಇದಕ್ಕೆ ಪೂರಕವಾಗಿ ಸಮಾಜದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು. ನಾಮಧಾರಿ ಸಮಾಜದ ಗ್ರಾಮಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ರಾಜಕೀಯ ಕ್ಷೇತ್ರದಲ್ಲಿ ಸಮಾಜಕ್ಕೆ ಶಕ್ತಿ ತುಂಬುವ ಕೆಲಸ ಮಾಡಬೇಕು. ಆ ಮೂಲಕ ಸಮಾಜದ ಏಳಿಗೆಗೆ ಶ್ರಮಿಸಬೇಕು ಎಂದರು.

ಈ ವೇಳೆ ಪಂಚಾಯಿತಿ ಅಧ್ಯಕ್ಷ ಅಜಿತ್ ಕುಮಾರ್, ಕುಮಾರಿ, ಲಕ್ಷ್ಮಿ, ಉಪಾಧ್ಯಕ್ಷೆ ಭಾರತಿ, ರೂಪ, ವಿಎಸ್‌ಎಸ್‌ಎನ್ ಅಧ್ಯಕ್ಷ ಸಿ.ಎನ್.ಚಂದ್ರಶೇಖರಮೂರ್ತಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ರಾಜ್ಯ ಬೀಜ ನಿಗಮದ ಮಾಜಿ ಅಧ್ಯಕ್ಷ ಡಿ.ಸುಂದರ್ ದಾಸ್ ಮಾತನಾಡಿದರು. ಅಖಿಲ ನಾಮಧಾರಿ ಸಮಾಜದ ಅಧ್ಯಕ್ಷ ಎಂ.ಎನ್.ಭೀಮರಾಜು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಸಿ.ಬಸಪ್ಪ, ತಾಪಂ ಮಾಜಿ ಅಧ್ಯಕ್ಷೆ ಯಶೋಧಮ್ಮ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಎನ್.ಮಲ್ಲಿಕಾರ್ಜುನ್, ಟಿಎಪಿಸಿಎಂಎಸ್ ಸದಸ್ಯ ಗುಣಪಾಲ್, ಗೌರವಾಧ್ಯಕ್ಷ ಹೆಚ್.ಡಿ.ರತ್ನಂಯ್ಯ, ಕಾರ್ಯಾಧ್ಯಕ್ಷ ಸಿ.ಪಿ.ಬಸವರಾಜು, ಮಾಜಿ ಕಾರ್ಯದರ್ಶಿ ಬಿ.ಎಂ.ಚಿನ್ನಪ್ಪ, ವೈ.ಪಿ.ನಾಗರಾಜು, ಹರಿದಾಸ್, ಅಶೋಕ್, ಎಸ್‌ಐ ನಂದೀಶ್ ಕುಮಾರ್, ನಾಗೇಂದ್ರ ಸೇರಿದಂತೆ ಇನ್ನಿತರರಿದ್ದರು.

ನವಿಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ಚಂದ್ರಕಲಾ ಮಹದೇವ್ ಅಧ್ಯಕ್ಷೆ, ಮಂಜುಳಾ ನಂಜೇಗೌಡ ಉಪಾಧ್ಯಕ್ಷೆ



ತಿ.ನರಸೀಪುರ, ಸೆ.4– ನವಿಲೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ಚಂದ್ರಕಲಾ ಮಹದೇವ್ ಹಾಗೂ ಉಪಾಧ್ಯಕ್ಷೆಯಾಗಿ ಮಂಜುಳಾ ನಂಜೇಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಮಹೇಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಚಂದ್ರಕಲಾ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಂಜುಳಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಎಂ.ಕೆ. ತ್ಯಾಗರಾಜ ಪ್ರಸಾದ್ ಘೋಷಿಸಿದರು.

ನೂತನ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಸಂಘದ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಇದೇ ವೇಳೆ ಎಪಿಎಂಸಿ ಮಾಜಿ ಅಧ್ಯಕ್ಷ ಆಲ್ದೂರು ರಾಜಶೇಖರ್ ನೂತನ ಅಧ್ಯಕ್ಷ–ಉಪಾಧ್ಯಕ್ಷರನ್ನು ಅಭಿನಂದಿಸಿದರು. ಸಂಘದ ಒಟ್ಟು 12 ಸದಸ್ಯರ ಪೈಕಿ ನಿಕಟಪೂರ್ವ ಅಧ್ಯಕ್ಷ ಮಹೇಶ್, ನಿರ್ದೇಶಕರಾದ ಆಲ್ದೂರು ಗ್ರಾಮದ ಸತೀಶ್, ಗಣಗನೂರು ಬಸವಣ್ಣ, ಈಶ್ವರಪ್ಪ ಮರಿದೊಡ್ಡೇಗೌಡ, ಡಿ.ಕೋಮಲ, ಗೌಡಗೆರೆನಾಯ್ಕ, ಪಿ.ಮಹೇಶ್‌ಕುಮಾರ್ ಹಾಗೂ ಸಾಲಗಾರರಲ್ಲದ ಕ್ಷೇತ್ರದ ಜಯಪ್ರಕಾಶ್ ಚುನಾವಣಾ ಸಭೆಗೆ ಹಾಜರಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರೆ, ಚಿಕ್ಕಮಲ್ಲಪ್ಪ ಸಭೆಯಿಂದ ಹೊರಗುಳಿದರು.

ತಮ್ಮ ಅವಿರೋಧ ಆಯ್ಕೆಗೆ ಸಹಕಾರ ನೀಡಿದ ನಿರ್ದೇಶಕರಿಗೆ ಕೃತಜ್ಞತೆ ಸಲ್ಲಿಸಿದ ನೂತನ ಅಧ್ಯಕ್ಷೆ ಚಂದ್ರಕಲಾ ಮಹದೇವ್, ಸಹಕಾರ ಸಂಘಕ್ಕೆ ಸರ್ಕಾರದಿಂದ ಬರುವ ಸವಲತ್ತುಗಳನ್ನು ಪಡೆದು ಪ್ರಾಮಾಣಿಕವಾಗಿ ರೈತರಿಗೆ ದೊರಕಿಸಿಕೊಡಲಾಗುವುದು. ಮುಂದಿನ ದಿನಗಳಲ್ಲಿ ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಸಾಲ ವಿತರಿಸಲು ಆದ್ಯತೆ ನೀಡಲಾಗುವುದು. ಕೃಷಿ ಚಟುವಟಿಕೆ ಕೈಗೊಳ್ಳಲು ರೈತರಿಗೆ ಅನುಕೂಲ ಕಲ್ಪಿಸುವ ಸಂಬಂಧ ಟ್ರಾಕ್ಟರ್ ಲೋನ್ ಕೊಡಿಸುವ ಉದ್ದೇಶ ಹೊಂದಲಾಗಿದೆ. ರೈತರು ಹಾಗೂ ಸಂಘದ ನಿರ್ದೇಶಕರು ಸಂಘವನ್ನು ಮತ್ತಷ್ಟು ಅಭಿವೃದ್ಧಿಯೆಡೆಗೆ ಕೊಂಡೊಯ್ಯಲು ಸಹಕಾರ ನೀಡುವಂತೆ ಮನವಿ ಮಾಡಿದರು.

ಈ ವೇಳೆ ಗಣಗನೂರು ಗ್ರಾಪಂ ಅಧ್ಯಕ್ಷ ಕೆ.ಕುಮಾರ್, ಕೆ.ಎಂ.ಮಹದೇವಸ್ವಾಮಿ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ಹಳ್ಳಿಕೆರೆಹುಂಡಿ ಮಹೇಶ್, ತಾಪಂ ಮಾಜಿ ಸದಸ್ಯ ಜಿ.ಸಿ. ಮಹದೇವಸ್ವಾಮಿ, ಗ್ರಾಪಂ ಸದಸ್ಯರಾದ ಆಲ್ದೂರು ಮಾದೇಶ್, ಶಂಕರ್, ರತ್ನಮ್ಮ, ಬೋರೇಗೌಡ, ಶಿವನಪ್ಪ, ಕೆಂಪರಾಜು, ದೇವರಾಜು, ಸಿದ್ದಪ್ಪ, ಮಂಗಳ ಗೌರಮ್ಮ, ಪುಟ್ಟಮಾದೇಗೌಡ, ರಂಗಸ್ವಾಮಿ, ರಮೇಶ್, ಶಿವಣ್ಣ, ಚೇತನ್, ರಾಜು, ರವಳಯ್ಯ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಿಸ್ಟೇಕ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಡ್ರೀಮ್ ಗರ್ಲ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೌಶಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಖುಷಿ (ತೆ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಖುಷಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಡೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜನರ ಕಷ್ಟಕ್ಕೆ ಸ್ಪಂದಿಸದಿದ್ದರೆ ಸೂಕ್ತ ಕ್ರಮ



ಮಲ್ಕುಂಡಿ, ಸೆ.4– ಅಧಿಕಾರಿಗಳು ಜನರ ಕಷ್ಟಕ್ಕೆ ಸ್ಪಂದಿಸದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಎಚ್ಚರಿಕೆ ನೀಡಿದರು.

ಇಲ್ಲಿಗೆ ಸಮೀಪದ ಹೆಡಿಯಾಲ ಗ್ರಾಮದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಕಾಡಂಚಿನ ಗ್ರಾಮಗಳೂ ಸೇರಿದಂತೆ ತಾಲೂಕಿನಾದ್ಯಂತ ಅಧಿಕಾರಿಗಳು ಜನರ ಬಳಿಗೆ ತೆರಳಿ ಕೆಲಸ ಮಾಡಿಕೊಡಲು ಮುಂದಾಗಬೇಕು. ಕ್ಷೇತ್ರದಲ್ಲಿ ಯಾವುದೇ ಸಮಸ್ಯೆ ಇದ್ದರೂ ನನ್ನ ಗಮನಕ್ಕೆ ತನ್ನಿ. ಹಂತ ಹಂತವಾಗಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈ ಭಾಗದಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಈ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ನಮ್ಮ ಸರ್ಕಾರ 100 ದಿನ ಪೂರೈಸಿದ್ದು, ನಮ್ಮ ಸಾಧನೆ ಜನತೆಗೆ ತಿಳಿದಿದೆ. ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ರೈತ, ಬಡವರ ಪರ ಸರ್ಕಾರ ಕೆಲಸ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಇದೇ ವೇಳೆ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಹಿಂದುಳಿದ ವರ್ಗಗಳ ಜಿಲ್ಲಾಧ್ಯಕ್ಷ ಕೆ.ಮಾರುತಿ, ಬ್ಲಾಕ್ ಅಧ್ಯಕ್ಷ ಕುರಹಟ್ಟಿ ಕೆ.ಜಿ.ಮಹೇಶ್, ಗ್ರಾಪಂ ಅಧ್ಯಕ್ಷೆ ಮಹದೇವಮ್ಮ, ಉಪಾಧ್ಯಕ್ಷ ನಾಗೇಶ್, ತಹಸೀಲ್ದಾರ್ ಶಿವಕುಮಾರ್, ಇಓ ರಮೇಶ್, ದೊರೆಸ್ವಾಮಿ ನಾಯಕ, ಕಮಲಮ್ಮ, ಶಂಕರಪ್ಪ ವಿದ್ಯಾಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ, ಗ್ರಾಪಂ ಸದಸ್ಯ ಗೋವಿಂದರಾಜು, ಹಾಡ್ಯ ಜಯರಾಂ, ಸುಬ್ರಹ್ಮಣ್ಯ, ಅಸ್ರಫ್ ಅಲಿ ಸೇರಿದಂತೆ ಅಧಿಕಾರಿಗಳು ಹಾಜರಿದ್ದರು.

ದೇವಯ್ಯ ನಿಧನ



ಸರಗೂರು, ಸೆ.4– ಪಟ್ಟಣದ ಪುರಸಭೆ ಮಾಜಿ ಸದಸ್ಯ ದೇವಯ್ಯ (85) ಭಾನುವಾರ ರಾತ್ರಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಅಂಬೇಡ್ಕರ್ ರುದ್ರಭೂಮಿಯಲ್ಲಿ ಸೋಮವಾರ ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್‌ಘಾಟ್‌ನಲ್ಲಿ 12 ಅಡಿ ಗಾಂಧಿ ಪ್ರತಿಮೆ ಅನಾವರಣ



ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ದೆಹಲಿಯ ರಾಜ್‌ಘಾಟ್‌ನಲ್ಲಿ ಮಹಾತ್ಮ ಗಾಂಧಿಯವರ 12 ಅಡಿ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಿದರು.

ವಿವಿಧ ಭಂಗಿಗಳಲ್ಲಿರುವ ಮಹಾತ್ಮ ಗಾಂಧಿಯವರ ಪ್ರತಿಮೆಗಳನ್ನು ಸ್ಥಾಪಿಸಿರುವ ಗಾಂಧಿ ವಾಟಿಕಾವನ್ನು ಸಹ ರಾಷ್ಟ್ರಪತಿಗಳು ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಮಹಾತ್ಮ ಗಾಂಧಿಯವರು ವಿಶ್ವ ಸಮುದಾಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಅವರ ಮೌಲ್ಯಗಳು ಮತ್ತು ಆದರ್ಶಗಳು ಜಗತ್ತಿಗೆ ಹೊಸ ದಿಕ್ಕನ್ನು ತೋರಿಸಿವೆ ಎಂದು ಹೇಳಿದರು.

ದಕ್ಷಿಣ ಆಫ್ರಿಕಾದ ಮಾಜಿ ಅಧ್ಯಕ್ಷ ನೆಲ್ಸನ್ ಮಂಡೇಲಾ ಅವರಿಂದ ಹಿಡಿದು ಅಮೆರಿಕ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಅವರವರೆಗೂ ಮಹಾತ್ಮ ಗಾಂಧಿಯವರ ಅಹಿಂಸೆಯ ಮಾರ್ಗ ಜಾಗತಿಕ ಅಭಿವೃದ್ಧಿಯ ಮಾರ್ಗವೆಂದು ಒಪ್ಪಿಕೊಂಡಿದ್ದಾರೆ ಎಂದು ರಾಷ್ಟ್ರಪತಿಗಳು ಹೇಳಿದರು.

ಪುರಸಭಾ ಕಾರ್ಯಾಲಯ, ತಿ.ನರಸೀಪುರ
ಮೈಸೂರು ಜಿಲ್ಲೆ – 571124. ದೂ:08227–261232
ಇಮೇಲ್:ka.tnarasipura.tmc@gmail.com ವೆಬ್‌ಸೈಟ್:www.tnarasipuratown.mrc.gov.in
ಸಂಖ್ಯೆ:ಪು.ತಿ.ನ/ಆ.ಶಾ/ಎಬಿಸಿ/03/2023–24 ದಿನಾಂಕ:04.09.2023

ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧ್ಯಾದೇಶ 1999–2000ರ ನಿಯಮದಂತೆ ಪ್ರಕಾರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ಮುಖಾಂತರ ತಿ.ನರಸೀಪುರ ಪುರಸಭೆಯಿಂದ ಈ ಕೆಳಕಂಡ ಕೆಲಸಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳನ್ನು ಹಾಗೂ ಟೆಂಡರ್ ಷೆಡ್ಯೂಲ್ ದಿನಾಂಕಗಳ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ನೋಡಬಹುದು ಮತ್ತು ಹೆಚ್ಚಿನ ವಿವರಗಳಿಗೆ **ದೂರವಾಣಿ ಸಂಖ್ಯೆ: 08227–261232** ಅನ್ನು ಸಂಪರ್ಕಿಸಿ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದಾಗಿದೆ.

ನೀಡಬೇಕಾದ ಸೇವಾ ವಿವರ: ಕ್ರ.ಸಂ. 1. ತಿ.ನರಸೀಪುರ ಪುರಸಭಾ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸಾ (ABC) ಕಾರ್ಯಕ್ರಮ **Indent No: DMA/2023-24/SE0771,** ಅಂದಾಜು ಮೊತ್ತ (ಲಕ್ಷಗಳಲ್ಲಿ): **2.50,** ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): **6250/–.**

ಸಹಿ/– ಮುಖ್ಯಾಧಿಕಾರಿ
ಪುರಸಭೆ, ತಿ.ನರಸೀಪುರ

DIPR/MYS/KAVITA/295/2023-24

ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ
ಕೊಠಡಿ ಸಂಖ್ಯೆ 312, ಮೂರನೇ ಮಹಡಿ, ಜಿಲ್ಲಾಡಳಿತ ಭವನ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ದೂ: 08226-222421 Email ID: dhochamarajanagar@gmail.com

No.NPCB / CHN/Spectacles Tender / 01 / 2023-24 ದಿನಾಂಕ: 02-09-2023

TENDER SCHEDULE

1. Tender Reference No.	DHFWS/2023-24/INDO144
2. Tender Amount	25551050-00
3. EMD Amount	415340-00
4. Date of Commencement of Download of Tender Document from e-procurement website: http://https://kppp.karnataka.gov.in/#/portal/portal-home: From 04-09-2023	
5. Date, Time & Venue of Pre-bid Meeting: 11-09-2023 @ 11-00 Hrs District Leprosy Office, Room No. 342, Third Floor, District Administrative Building, Chamarajanagar-571313	
6. Last date and Time for uploading Online Queries in e-Procurement Portal: 12-09-2023 @ 17-00 Hrs.	
7. Last Date and Time for uploading of e-Tender in e-Procurement Portal: 18-09-2023 @ 17-30 Hrs.	
8. Date and Time of Online Opening of Technical Bids: 20-09-2023 @ 11-00 Hrs.	
9. Date and Time of Equipments Demonstration (Sample submission): 19-09-2023 @ 11.00 Hrs.	
10. Date & Time of Financial Bid Opening: 25-09-2023 @ 11.30 Hrs (Tentative).	

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ವಾಸಾಸಂಇ:ಚಾನಗರ:125:2023–24